ಹುಣ್ಣಿಮೆಯಿಂದ ಹುಣ್ಣಿಮೆಗೆ..

ಆದಿಮ ಅವಿಂಗ್ ಟೈಮ್ಸ್

....ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು

ಸಂಪುಟ : 1 ಸಂಚಿಕೆ : 6 ಪುಟಗಳು: 24 ಮಾರ್ಚ್-ಏಪ್ರಿಲ್ 2012 ಬೆಲೆ ರೂ. 10



ಚೆಲ್ಳುಡಿ

ಸಚ್ಚಾರಿತ್ರ್ಯವನ್ನು
ಬೋಧಿಸಬಹುದೆ
ಇಲ್ಲವೆ ಎಂದು
ನಾನು ಬಲ್ಲೆ ಎಂಬುದು
ನಿನಗರಿವಾದರೆ ನೀನು
ಖುಷಿಪಡಬಹುದು.
ಆದರೆ, ಸಚ್ಚಾರಿತ್ರ್ಯವನ್ನು
ಬೋಧಿಸಬಹುದೆ,
ಇಲ್ಲವೆ ಎಂಬುದು ನನಗೆ
ಈವರೆಗೆ ತಿಳಿಯದು,
ಮಾತ್ರವಲ್ಲ,
ಸಚ್ಚಾರಿತ್ರ್ಯವೆಂದರೇನು
ಎಂಬುದೇ
ಅರಿಯದು.

–ಸಾಕ್ರೆಟಿಸ್

ಅವರಿಗೆ ಅರ್ಥವಾಗುತ್ತಿಲ್ಲ

ಕೋಟಿಗಾನಹಳ್ಳಿ ರಾಮಯ್ಯನವರ ಹತ್ತಿರ ಇರುವುದೇ ಕಷ್ಟ ಅವರ ಜೀವಿತದಲ್ಲಿ ಇದುವರೆವಿಗೂ ಮನಸ್ಸು ಅವರಲ್ಲಿದೆಯೇ ಇಲ್ಲವೇ ಎಂಬ ಅನುಮಾನ ನನ್ನನ್ನು ಕಾಡುತ್ತಿದೆ. ಕೋಲಾರ ನೆಚಿಕೇತ ನಿಲಯದಲ್ಲಿ 10ನೇ ತರಗತಿಯಲ್ಲಿ ಗೈರಾಜರಾಗಿ ಕಿತ್ತು ತಿನ್ನುವ ಬಡತನ ಅಥವಾ ಅವರಲ್ಲಿ ಇದ್ದ ಕ್ರಿಯಾತ್ಮಕ ಚಟುವಟಿಕೆಗಳಿಂದಾಗಿ ಹೇಗೋ ಶಿವರಾಮರೆಡ್ಡಿ ತೆಕ್ಕೆಗೆ ಬಿದ್ದ ರಾಮಯ್ಯ ನವರ ಬದುಕಿಗೆ ಒಂದು ರೂಪ ಸಿಕ್ಕಿದ್ದು ಅನ್ನ, ಮಾತು, ಅಕ್ಷರ ಪಡೆದು ನಿಜವಾದ ಬದುಕಿಗೆ ಹೊರಳಿದರು ಅನಿಸುತ್ತೆ.


ಗುರು ಶಿಷ್ಯರು ಹೆಚ್ಚು ಕಡಿಮೆ ಒಂದೇ ಬಣ್ಣ, ಅದೇ ಮಾಸಲು, ಆದರೆ ಹೃದಯವಂತಿಕೆ ಸಮ ಸಮ ಎಂದರೂ ಶಿಷ್ಯರ ಬುದ್ದಿವಂತಿಕೆ ಗುರುವನ್ನು ಮೀರಿಸಿದೆ ಆದರೆ ದುರದೃಷ್ಟವಶಾತ್ ಅದನ್ನು ಹೇಳಲು, ಬರೆಯಲು ನನ್ನಿಂದ ಆಗುತ್ತಿಲ್ಲ ಮತ್ತು ಅದಕ್ಕೇ ಇರಬೇಕು ನನ್ನ ಬರಹ ಇದುವರೆಗೂ ಯಾರ ಗಮನ ಸೆಳೆಯದೆ ಹೋದದ್ದು.

ನಾನಂತೂ ಗ್ರಹಿಕಾ ದೋಷ ವ್ಯಕ್ತಿಯೇ. ನನ್ನ ಸ್ಥಿತಿಯೇ ಇದು. ನನ್ನ ಸಾಮರ್ಥ್ಯ ಇಷ್ಟೇ. ನನಗಂತು ಸಮಯ ಪ್ರಜ್ಞೆ ಸಾಹಿತ್ಯದ ಪ್ರಜ್ಞೆ ಇದೆ. ನಾನೇ ಬರೆದ ಒಂದು ಕಿರು ಪುಸ್ತಕ ಪ್ರಕಟಿಸುವ ಆಸೆ. ಆದರೆ ಅದು ನನ್ನಿಂದ ಆಗುತ್ತಿಲ್ಲ.

'ಹುಣ್ಣಿಮೆಗೆ ಮಾತ್ರ ನಾಟಕಗಳು ಪ್ರದರ್ಶಿಸಲು ಆದಿಮ ಅಲ್ಲ' ಎಂಬ ರಾಮಣ್ಣನವರ ಮಾತು ನನಗೂ ಅರ್ಥವಾಗಿದೆ. ಅವರಿಗೆ ಇರುವ ಒಂದು ಶಾಲೆಯ ನೋಟಕ್ಕೆ ಹಲವಾರು ಕೈಗಳು ಬೇಕಾಗಿವೆ. ಮಕ್ಕಳನ್ನು ಬೆಳೆಸುವ ಅವರಲ್ಲಿರುವ ಕಳಕಳಿ ಮತ್ತು ಮಕ್ಕಳನ್ನು ಆಯ್ಕೆ ಮಾಡಿಕೊಳ್ಳುವ ರೀತಿ ಪ್ರತಿಯೊಬ್ಬರು ಚಿಂತಿಸಬೇಕಿದೆ.

ಅನಾಥರು, ಕಡು ಬಡತನ, ಶಿಕ್ಷಣವೇ ಕಂಡರಿಯದ ಮೊದಲನೆ ತಲೆಮಾರಿನ ಕುಟುಂಬದ ಮಕ್ಕಳಿಗೆ ಆದಿಮ ಪಾಠಶಾಲೆ ಆಗಬೇಕೆಂಬುದು ಮಹದಾಸೆ ರಾಮಣ್ಣನವರದು, ಪಠ್ಯ ಹೊರತಾದ ಕಲಕಾ ಕ್ರಮ, ಮುಂಬರುವ ನೂರಾರು ವರ್ಷದ ಸಮಾಜದ ಸ್ಪರ್ಧೆಗೆ ಈಗಿಂದಲೇ ಆದಿಮ ಪಾಠಶಾಲೆ ಮಕ್ಕಳನ್ನು ಸರ್ವಾಂಗೀಣವಾಗಿ ಬೆಳೆಸಬೇಕೆಂಬ ಮನಸ್ಸು ರಾಮಣ್ಣನವರದು. ಆದರೆ ಅವರ ಸಿಡುಕುತನ, ಬಿರುಸು ಮಾತು ಶತ್ರುವಾಗುವುದು ಅವರಿಗೆ ಅರ್ಥವಾಗುತ್ತಿಲ್ಲ. ನನಗಂತೂ ಲಕ್ಷ್ಮೀಪತಿ, ಕೊಮ್ಮಣ್ಣ, ರಾಮಚಂದ್ರ, ರಾಜಪ್ಪ, ತುರಂಡಳ್ಳಿ ಶ್ರೀನಿವಾಸ, ರಘು, ನಾಯಕ್ ಇಂತಹವರು ರಾಮಣ್ಣನವರಿಂದ ದೂರವಾಗಲೇಬಾರದು. ಸಹನೆಯು ರಾಮಣ್ಣನಲ್ಲಿ ಇಲ್ಲ ಎಂದರೇ ಅವರು ಮೂರ್ಖರೇ ಆದರೆ ರಾಮಣ್ಣನವರ ತಿಳುವಳಿಕೆ ಅವರನ್ನು ಅವರಿಗೆ ಶತ್ರುವಾಗಿ ಮಾಡುತ್ತಿದೆ. ದೃರಾದೃಷ್ಟ ಮತ್ತು ನೋವಿನ ಸಂಗತಿ ಎಂದರೆ ಅದು ಅವರಿಗೆ ಅರ್ಥವಾಗುತ್ತಿಲ್ಲ.

⌘ ಭಂಗವಾದಿ ನಾರಾಯಣಪ್ಪ



ಪ್ರೀತಿಯ ಕೋಟಿಗಾನಹಳ್ಳಿ ರಾಮಯ್ಯ ಸರ್,

ನಮ್ಮ ನೆಲದ ಜನದ ಗುರುತುಗಳ ಹುಡುಕಾಟದಲ್ಲಿ ಬೆವರು ಹರಿಸುತ್ತಿರುವ ನಿಮಗೆ ಪ್ರೀತಿಯ ಭೀಮ ನಮಸ್ಕಾರಗಳು,

ನಿಮ್ಮಿಂದ ಪಡೆದ ಡಿಸ್ಸೆಂಬರ್ ತಿಂಗಳ "ಆದಿಮ ಲಿವಿಂಗ್ ಟೈಮ್ಸ್"- ಹುಣ್ಣಿಮೆಯಿಂದ ಹುಣ್ಣಿಮೆಗೆ ಬರುವ ಪತ್ರಿಕೆಯ 50 ಪತ್ರಗಳನ್ನು ಹಂಚಿದ್ದೇನೆ.

ಪ್ರತಿಯೊಬ್ಬರಿಗೂ ಹಂಚುವಾಗ ಇದರ ನೆಲೆ-ಬೆಲೆಯನ್ನು ಸಾಧ್ಯವಾದಷ್ಟು ವಿವರಿಸುವ ಪ್ರಯತ್ನ ಮಾಡಿರುತ್ತೇನೆ. ಕೆಲವರ ಪ್ರತಿಕ್ರಿಯೆ ಚೆನ್ನಾಗಿತ್ತು. ಕೆಲವರಂತು ಆಧುನಿಕ ಅಮಲುಗಳಲ್ಲಿ ತೇಲಿ ನೆಲವನ್ನೆ ಮರೆತಂತೆ, ಅಕಾಡೆಮಿಕ್ ಆಸೆಬುರುಕ, ಅಂಜುಬುರುಕರಂತೆ ಕಂಡುಬಂದರು. ಆದರೂ ಅವರಿಗೂ ತಣ್ಣಗೆ ಆದಿಮದ ಲಿವಿಂಗ್ ಟೈಮ್ಸ್ ಬಗ್ಗೆ ವಿವರಿಸಿದ್ದೇನೆ...

ಇನ್ನು, ನೀವು ತಿಳಿಸಿದಂತೆ ಮೈಸೂರಿನ ಕೆಲವರ ವಿಳಾಸವನ್ನು ಕಲೆಕ್ಟ್ ಮಾಡಿ, ಹಲವಾರು ನನ್ನ ಅಕಾಡೆಮಿಕ್ ಒತ್ತಡಗಳ ಮಧ್ಯೆ ಲೇಟಾಗಿ ಟೈಪ್ ಮಾಡಿ ಕಳುಹಿಸುತ್ತಿದ್ದೇನೆ. ಲೇಟ್ ಆಗಿದ್ದಕ್ಕೆ ನನ್ನ ಮೇಲೆ ನನಗೇ ಸಿಟ್ಟಿದೆ. ಕ್ಷಮಿಸಿ.

ಇನ್ನು, ಪತ್ರಿಕೆಗೆ ನೆಲಸಂಸ್ಕೃತಿಯ ದೇವರುಗಳ ಕುರಿತಾಗಿ ಲೇಖನವೊಂದನ್ನು ಬರೆಯುತ್ತಿದ್ದೇನೆ. ಅದನ್ನು ಇನ್ನು ಕೆಲವು ದಿನಗಳಲ್ಲಿ ಕಳುಹಿಸಿಕೊಡುತ್ತೇನೆ.

ನಿಮಗೆ ಪ್ರೀತಿಯ ವಂದನೆಗಳು

⌘ ಕೆ.ಎಂ.ಬೈರಪ್ಪ

ಮೈಸೂರು

"ಆದಿಮ ಲಿವಿಂಗ್ ಟೈಮ್ಸ್" ಪತ್ರಿಕೆಯನ್ನು ಕಳುಹಿಸಿದ್ದಕ್ಕೆ ಧನ್ಯವಾದಗಳು. ಪತ್ರಿಕೆಯ ಹೂರಣ ಚೆನ್ನಾಗಿದೆ, ಅಭಿನಂದನೆಗಳು

⌘ ಪಿ.ಶೇಷಾದ್ರಿ,ಬೆಂಗಳೂರು

ಕೆ.ರಾಮಯ್ಯನವರಿಗೆ ನಮಸ್ಕಾರಗಳು.
ನಿಮ್ಮ ಸಂಪಾದನೆಯ ಆದಿಮ ಲಿವಿಂಗ್ ಟೈಮ್ಸ್ ನೋಡಿದೆ. ತುಂಬಾ ಚೆನ್ನಾಗಿದೆ, ವಂದನೆಗಳು

⌘ ಶ್ರೀಧರ ಪಿಸ್ಸೆ, ಹೊಸಪೇಟೆ



ಮೋಟಮ್ಮ ಮತ್ತು ನಾಯಿ ಸಿದ್ದಯ್ಯನ ನೆನಪು

※ ಕೋಟಿಗಾನಹಳ್ಳಿ ರಾಮಯ್ಯ

ಇತ್ತೀಚೆಗೆ ವಿರೋಧ ಪಕ್ಷದ ನಾಯಕಿ ಮೋಟಮ್ಮ ಬಂದಿದ್ದರು. "ಆದಿಮ"ಕ್ಕೆ ವಿ.ಆರ್.ಸುದರ್ಶನ್ ಅವರನ್ನು ಒತ್ತಾಯಿಸಿ ಕರೆತಂದಿದ್ದರು. ಪ್ರತಿಯೊಂದನ್ನೂ ನೋಡಿ ಸಂತೋಷಪಟ್ಟರು. ಪ್ರತಿಯೊಬ್ಬರನ್ನೂ ತಾವೇ ಮುಂದಾಗಿ ಮಾತಾಡಿಸಿ, ಪ್ರಶ್ನೆ ಕೇಳಿ ಅವರ ಬಗ್ಗೆ ಸಾಕಷ್ಟು ತಿಳಿದುಕೊಂಡರು. ಅವರಿಗೆ ಹೀಗೆ ತಿಳಿದುಕೊಳ್ಳುವುದರಿಂದ ಏನೋ ಒಂದು ಸಂತೋಷ ಇರುವಂತಿತ್ತು. ಇನ್ನೊಬ್ಬರ ಕಷ್ಟಸುಖದ ಬದುಕನ್ನು ತಿಳಿಯುತ್ತಾ ತಮ್ಮ ಬದುಕಿನ ಸಂಕಷ್ಟಗಳನ್ನು ಹಗುರ ಮಾಡಿಕೊಳ್ಳುವಂತಿತ್ತು ಅವರ ಈ ರೀತಿ "ಇದು ಹೆಣ್ಣು ಮಕ್ಕಳ ಗದ್ದುಗೆ" ಏರುವುದರಿಂದ ಸಿಗಬಹುದಾದ ಅಂತಃಕರಣ ಸ್ಪರ್ಶ, ನೆಲದ ನಿಜ ರಾಜಕಾರಣದ ತಳಹದಿ ಇಂತಹ ಅಂತಃಕರಣವಾದಾಗ ಇವತ್ತಿನ ಅಸಮಾನತೆ ಅಳಿಯದೆ ಹೋದರೂ ಅದರ ದಾರುಣತೆಯನ್ನಾದರೂ ಸಹನೀಯಗೊಳಿಸಿಕೊಳ್ಳಬಹುದು.

ಮೋಟಮ್ಮನವರಿಗೆ ನನ್ನ ಪರಿಚಯ ಇರಲು ಸಾಧ್ಯವಿಲ್ಲ. ಆದರೆ ಅವರು ನನಗೆ ನೆನಪಿದ್ದಾರೆ. ನಾನು ದ.ಸಂ.ಸ ಹುಟ್ಟುವಾಗಿನ ದಿನಗಳಲ್ಲಿ ಶ್ರೀರಾಮಪುರಂ ಆರ್.ಜಿ.ಕಾಲನಿಯಲ್ಲಿದ್ದ ಸಿದ್ದಲಿಂಗಯ್ಯನವರ ಒಡನಾಟ, ಅವರು ಬಿ.ಎ ಆನರ್ಸ್ ಮುಗಿಸಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ ಓದಲು ಆರಂಭಿಸಿದಂದಿನಿಂದಲೂ ಇತ್ತು. ನಾನಾಗ ಆರ್.ಎಂ.ಎಸ್ ನಲ್ಲಿ ಸಾರ್ಟರ್ ನೌಕರಿಯಲ್ಲಿದ್ದೆ. ಹೀಗೇ ನೋಡಲು ಹೋಗಿದ್ದಾಗ ಒಮ್ಮೆ ಗಾಂಧಿ ಭವನಕ್ಕೆ ಜೊತೆಯಲ್ಲಿ ಕರೆದೊಯ್ದರು. ದ.ಸಂ.ಸ ಕುರಿತು ಸಭೆ ಇದೆ ಎಂದು. ಅಲ್ಲಿಗೆ ಮೋಹನ್ ಕೊಂಡಜ್ಜಿ, ಮೋಟಮ್ಮನವರೂ ಬಂದಿದ್ದರು. ಮತ್ತೊಬ್ಬ ಬ್ಯಾಂಕ್ ಉದ್ಯೋಗಿಯೂ ಇದ್ದರು. ಅವರು ಯಾರೆಂದು ಈಗ ನೆನಪಿಗೆ ಬರುತ್ತಿಲ್ಲ. ಆದರೆ ಅವರು ಆ ಕಾಲಕ್ಕೆ ಕ್ರಾಂತಿಕಾರಿಗಳ ಟಪಿಕಲ್ ಡ್ರೆಸ್‌ಕೋಡ್‌ನಲ್ಲಿದ್ದರು. ಜೀನ್ಸ್ ಪ್ಯಾಂಟ್, ವೈಟ್ ಜುಬ್ಬಾ ಕೊಲ್ಹಾಪುರಿ ಚಪ್ಪಲಿ, ನಾವು ಮಾತಾಡುತ್ತಾ ಇದ್ದಾಗ ದೂರದಲ್ಲಿ ಠಳಾಯಿಸುತ್ತಿದ್ದ ವ್ಯಕ್ತಿಯೊಬ್ಬರತ್ತ ಗಮನ ಸೆಳೆದು ಪೊಲೀಸ್ ಗುಪ್ತದಳದವರೆಂದು ಎಚ್ಚರಿಸಿದ್ದು ನೆನಪಿದೆ. ಆಗ ತುರ್ತು ಪರಿಸ್ಥಿತಿ ಕಾಲವಾದ್ದರಿಂದ ಈ ಎಚ್ಚರ ತಾಳುವುದು ಅಗತ್ಯವಿತ್ತೆನಿಸಿತು.

ಅದಾದ ನಂತರ ಕಾಂಗ್ರೆಸ್ ರಾಜಕಾರಣದಲ್ಲಿ ದಲಿತ ಮಹಿಳೆಗೆ ಸಿಕ್ಕ ಚಾರಿತ್ರಿಕ ಅವಕಾಶದಿಂದಾಗಿ ಅವರು ಗೆದ್ದು ಶಾಸಕಿಯಾದರು. ಆಮೇಲೆ ಅವರ ಮದುವೆಗೆ ದಿ: ಇಂದಿರಾಗಾಂಧಿಯವರು ಬಂದು ಹೋಗಿದ್ದು. ಇದರಲ್ಲಿ 'ದಾರದಳ್ಳಿ ಕುಟುಂಬಗಳ' ಪಾತ್ರ ಇತ್ಯಾದಿ ಎಲ್ಲರಿಗೂ ತಿಳಿದೇ ಇದೆ. ಅನಂತರ ಮೋಟಮ್ಮ ಈ ಅವಕಾಶವನ್ನು ಬಿ.ಬಿ.ನಿಂಗಯ್ಯನವರಿಗೆ ಬಿಟ್ಟುಕೊಟ್ಟರು. ಆಗಿನ ನಿಂಗಯ್ಯನ ರಾಜಕೀಯ ಪ್ರವೇಶಕ್ಕೆ ದಲಿತ ಸಂಘರ್ಷ ಸಮಿತಿ ವೇದಿಕೆಯಾಗಿತ್ತು. ಇನ್ನೂ ಏನೇನೋ ಆಗಿ ಈಗ ಮೋಟಮ್ಮನವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯ ಸಚಿವೆಯಾಗಿ ರಾಷ್ಟ್ರವೇ ಮೆಚ್ಚುವಂತೆ ಸ್ತ್ರೀಶಕ್ತಿ ಸಂಘಗಳ ಮೂಲಕ ಸ್ತ್ರೀಸಮುದಾಯದ ವ್ಯಾಪಕ ಸಾಮಾಜಿಕ ಗೋಚರಕ್ಕೆ ಕಾರಣರಾದರು. ಇದೀಗ ಅವರು ವಿರೋಧ ಪಕ್ಷದ ನಾಯಕಿಯಾಗಿದ್ದಾರೆ. ಅವರನ್ನು ಹತ್ತಿರದಿಂದ ನೋಡುವ ಮಾತಾಡುವ ಅವಕಾಶ ಸಿಕ್ಕಿದ್ದು ಇದೇ ಮೊದಲ ಬಾರಿ. ಈ ಹಿಂದೆ ಅವರನ್ನು 'ತಲಪರಿಗೆ'ಗಾಗಿ ಸಂದರ್ಶಿಸಲು ಡಾ: ಸಿ.ಜಿ.ಲಕ್ಷ್ಮಿಪತಿಯವರೊಂದಿಗೆ ಅವರ ಡಾಲರ್ ಕಾಲನಿಯ ಹೊಸ ಮನೆಗೆ ಹೋಗಿದ್ದೆ. ಮನೆ ಕಟ್ಟಿ ಮುಗಿಸಿ ತಾಪತ್ರಯಗಳಲ್ಲಿದ್ದ ಅವರು ಹಳ್ಳಿಯ ನಿಯತ್ತಿನ ಹೆಣ್ಣುಮಗಳಂತೆ ನೆರವಾದ ವರನ್ನು ಹೃದಯದುಂಬಿ ನೆನೆಯುತ್ತಿದ್ದರು. ಒಂದು ಮನೆ ಕಟ್ಟಿಕೊಳ್ಳುವುದಕ್ಕೂ ಇಷ್ಟು ವರ್ಷಗಳ ಅವರ ರಾಜಕಾರಣ ಅವರಿಗೆ ಅವಕಾಶ ಕೊಟ್ಟಿರಲಿಲ್ಲ. ಅಥವಾ ಸಿಕ್ಕ ಅವಕಾಶಗಳನ್ನು ಕಬಳಿಸಿಯೂ ಸಾಲದೆಂಬಂತೆ ಹೊಸ ಹೊಸ ನುಂಗುವ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಿರುವ ಇವತ್ತಿನ ಬಕಾಸುರ ರಾಜಕಾರಣಿಗಳ ನಡುವೆ ಮೋಟಮ್ಮ ನಂಥವರು ಭರವಸೆಯಾಗಿ ಕಾಣುತ್ತಾರೆ.

ಅವರು ಬಂದಾಗ 'ನಾಯಿತಿಪ್ಪ'ದ ರಿಹರ್ಸಲ್ ನಡೆದಿತ್ತು. ನಾಟಕದ ಹೆಸರು ಕೇಳಿಯೇ ಅವರು ದೃಶ್ಯವೊಂದರ ರಿಹರ್ಸಲ್ ನೋಡಬಯಸಿದರು. ಹಾಗೂ 'ನಾಯಿತಿಪ್ಪ' ನಾಟಕದ ಬಗ್ಗೆಯೂ ಕೇಳಿ ಅವರು ನಾಯಿ ಸಿದ್ದಯ್ಯನನ್ನು ನೆನಪಿಸಿಕೊಂಡರು. ನಾಯಿ ಸಿದ್ದಯ್ಯ ಸಿದ್ದಯ್ಯನಿಗೆ ಬಂದ ಹೊಸ ಹೆಸರು. ಸಿದ್ದಯ್ಯ ಬಿಳಿ ಪ್ಲಾಂಟರ್‌ಗಳ ಬಳಿ ನಾಯಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದನಂತೆ. ಆದ್ದರಿಂದಲೇ ಆತನನ್ನು ಅವರು ನಾಯಿ ಸಿದ್ದಯ್ಯ ಅಥವಾ ಡಾಗ್ ತಿಪ್ಪಯ್ಯ ಎಂದು ಕರೆಯುತ್ತಿದ್ದರಂತೆ. ಅವರು ಭಾರತ ಬಿಟ್ಟು ಹೋಗುವಾಗ ನಾಯಿ ಸಿದ್ದಯ್ಯನಿಗೆ ಐದು ಎಕರೆ ಕಾಫಿ ತೋಟ ಬಿಟ್ಟು ಹೋದರಂತೆ ಅವರು ಮಾಡಿದ ನಾಯಿ ಸೇವೆಗಾಗಿ. ಆದರೆ ಸ್ವಾತಂತ್ರ್ಯಾನಂತರ ಕಾಫಿ ತೋಟಗಳ ಮಾಲೀಕರಾದ ದೇಸೀ ಬ್ರಾಂಡಿನ ನವಮಾಲೀಕರು ಅಂತವರನ್ನು ಒಕ್ಕಲೆಬ್ಬಿಸುವುದರತ್ತ ಕಾರ್ಯೋನ್ಮುಖರಾದರೆ ಹೊರತು ಬ್ರಿಟೀಷರು ಮಾಡಿದಂತೆ ನಾಯಿ ಸೇವೆ, ಶೌಚ ಸೇವೆ, ದನದ ಕೊಟ್ಟಿಗೆ ಸಗಣಿ ಬಾಚುವ ಸೇವೆಗಳನ್ನೇ 'ಕುಳುವಾಡಿಕೆ' ಎಂದು ಭಾವಿಸಿ ತಲೆತಲೆಮಾರು ಜೀತ ಮಾಡಿದ ಜೀತಗಾರರಿಗೆ ಅಂಗೈ ಅಗಲ ನೆಲ ಕೊಟ್ಟ ನಿದರ್ಶನಗಳು ಅಪರೂಪ.

ಮೋಟಮ್ಮ ಮೂಲತಃ ಜನಪದ ಕಲಾವಿದೆಯಾಗಿರುವುದರಿಂದ ಅವರ ಅನುಭವಗಳು, ಸೂಕ್ಷ್ಮತೆ, ಕಕ್ಕುಲಾತಿ ಸದಾ ಚಿಗುರಾಗಿಯೇ ಇರುತ್ತದೆ. ನಾಯಿ ಸಿದ್ದಯ್ಯನಂತೆ ಅಥವಾ ಜನಪದ ಗೀತೆಯೊಂದೆ ಸೊಲ್ಲಿನೊಂತೆ. ಮೋಟಮ್ಮ ವಿರೋಧಪಕ್ಷದ ನಾಯಕಿಯಂತೆ ತೋರದೆ ತವರಿಗೆ ಬಂದು ಹೋದ ಸಾಧಾರಣ ಹಳ್ಳಿಯ ಹಿರಿಯಕ್ಕಳಂತೆ ನಡೆದುಕೊಂಡಿದ್ದು ಕಂಡು ಹೃದಯ ತುಂಬಿ ಬಂತು.

ಜೊತೆ...

ಜೊತೆ

ಸಂಪಾದಕೀಯ ಟಿಪ್ಪಣಿಗಳು



ಜೀವಂತ ಹೆಣ್ಣುಮಕ್ಕಳು ದಿವಂಗತ ಶಬ್ದಗಳು

ಪತ್ರಿಕೆಯಲ್ಲಿ ಬರುವ ನಿರ್ಭಾವುಕ, ವಸ್ತುನಿಷ್ಠ ವರದಿಗಳ ರೀತಿ ಹೇಗಿರುತ್ತದೆ ಎಂಬುದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಅದು ಯಾರಿಗೂ ಸಂಬಂಧಪಡದಂತೆ 'ಊರಿದ್ದರೆ ಹೊಲಗೇರಿ' ಎನ್ನುವ ರೀತಿಯಲ್ಲಿ ವರದಿಯಾಗಿರುತ್ತದೆ.

ಉದಾಹರಣೆಗೆ ಆಗಾಗ ಪತ್ರಿಕೆಗಳಲ್ಲಿ ಬರುವ 'ಲಾಡ್ಜ್‌ನಲ್ಲಿ ವೇಶ್ಯಾವಾಟಿಕೆ; ಆರು ಜನರ ಬಂಧನ'. 'ಖಾಸಗಿ ಮನೆಯಲ್ಲಿ ದಂಧೆ; ಬಂಧನ, ಹಣವಶ; ದಲ್ಲಾಳಿಗಳ ಬಂಧನ' ಇತ್ಯಾದಿ ನಮ್ಮ ಹೆಣ್ಣುಮಕ್ಕಳು ಬದುಕಬೇಕಾದರೆ ದೇಹ ಮಾರಿಕೊಳ್ಳಲೇಬೇಕಾದ ದಾರುಣ ಚಿತ್ರವನ್ನು ಇಂತಹ ವರದಿಗಳು ಕಟ್ಟಿಕೊಡುವುದಿಲ್ಲ. ಪತ್ರಿಕೆಗಳಿಗೆ ಅದು ಮುಖ್ಯವೂ ಅಲ್ಲ. ಆದರೆ ಈ ವರದಿಗಳ ಹಿಂದೆ ಇರಬಹುದಾದ 'ಮಾನವ ವ್ಯಾಪಾರ'ವನ್ನು ನಿರ್ಜೀವ ಅಕ್ಷರಗಳಿಂದ ಖಂಡಿತ ದಾಖಲಿಸಲಾಗದು. ಅಕಸ್ಮಾತ್ ದಾಖಲಿಸಲೇಬೇಕೆಂದು ಹೊರಟರೆ ಅವು ಹೇಗಿರಬಲ್ಲವು? ನೋಡಿ ಕೆಲವು ಸ್ಯಾಂಪಲ್‌ಗಳು. ಇವು ಇಂತಹ ಹೆಣ್ಣುಮಕ್ಕಳ ಒಳಿತಿಗಾಗಿ ದುಡಿಯುತ್ತಿರುವ ಲೈಂಗಿಕ ಕಾರ್ಯಕರ್ತೆಯರ 'ರಿಪೋರ್ಟ್'ಗಳಿಂದ ಆಯ್ದ ಭಾಗಗಳು....

ಪ್ರಕರಣ–1

" ಮಾರ್ಕೆಟ್‌ನಲ್ಲಿ ದಂಧಾ ಮಾಡುವ ಆರು ಮಹಿಳೆಯರನ್ನು ಹಿಡಿದು ಸ್ಟೇಟ್ ಹೋಂಗೆ ಕಳಿಸಿದ್ದರು. ನಾನು ಅಲ್ಲಿಗೆ ಹೋಗಿ 'ನೀವು ಯಾಕೆ ಹುಡುಗಿಯರನ್ನು ಹಿಡಿದಿದ್ದೀರಾ? ಅವರನ್ನು ಬಿಟ್ಟು ಕಳಿಸಿ' ಎಂದೆ. ಪೊಲೀಸರು 'ಇವರನ್ನು ಬಿಡಲು ಆಗುವುದಿಲ್ಲ' ಎಂದರು. ಕೇಸ್ ಹಾಕಿ ಕೋರ್ಟ್‌ಗೆ ಕಳಿಸಿದರು. ನಾನು ಆ ಮಹಿಳೆಯರಿಗೆ 'ತಪ್ಪಾಯ್ತು' ಎಂದು ಜಡ್ಜ್ ಮುಂದೆ ಒಪ್ಪಿಕೊಂಡು ದಂಡ ಕಟ್ಟಬೇಡಿ ನಮ್ಮ ಲಾಯರ್ಸ್ ನೋಡಿಕೊಳ್ಳುತ್ತಾರೆ' ಎಂದೆ.ಅದಕ್ಕೆ ಅವರು 'ಇಲ್ಲಮ್ಮ ನಮ್ಮ ಮನೆಗಳಲ್ಲಿ ತುಂಬಾನೆ ತೊಂದರೆ ಇದೆ. ಮನೆಗಳಲ್ಲಿ ಚಿಕ್ಕ ಮಕ್ಕಳಿದ್ದಾರೆ. ನಾವು ಪ್ರತಿದಿನ ದಂಧೆ ಮಾಡಿದರೇನೆ ನಮ್ಮ ಮಕ್ಕಳಿಗೆ ಊಟ' ಎಂದರು. ದಂಡಕಟ್ಟಿ ಬಂದರು. ಇದಕ್ಕೆ ಬೇಕಾದ ಹಣವನ್ನು ಲಾಡ್ಜ್ ಓನರ್ ಕೊಟ್ಟಿದ್ದಾರೆ'.

ಪ್ರಕರಣ–2

'ನಮ್ಮ ಸಮುದಾಯದ ಹುಡುಗಿಯೊಬ್ಬಳಿಗೆ ರೋಡಿನಲ್ಲಿ ಓಡಾಡುವ ಹುಡುಗನ್ನೊಬ್ಬ 'ನನಗೆ ನೀನು ಬೇಕು ನನ್ನನ್ನು ಮದುವೆ ಮಾಡಿಕೋ' ಎಂದು ಹಿಂಸೆಮಾಡುತ್ತಾನೆ. ಅವಳಿಗೆ ಇಷ್ಟ ಇಲ್ಲ. ಆದರೆ ಅವನು ಅವಳಿಗೆ ತುಂಬಾನೆ ಕಿರುಕುಳ ಕೊಡುತ್ತಿದ್ದಾನೆ.

ಪ್ರಕರಣ–3

'ಕದೆಲಾ' ಅನ್ನೋ ಹುಡುಗಿ ಇದುವರೆಗೂ ಲಾಡ್ಜ್‌ನಲ್ಲಿ ಇದ್ದಳು. ಈ ಹುಡುಗಿಯನ್ನು ಮುದುಕ ದುಡ್ಡಿನ ಆಸೆಗೆ ಇಪ್ಪತ್ತು ಸಾವಿರಕ್ಕೆ ಮಾರಿದ್ದ. ಲಾಡ್ಜ್ ರೈಡ್ ಆದಾಗ ಹಿಡಿದು ಸ್ಟೇಟ್ ಹೋಂಗೆ ಬಿಟ್ಟಿದ್ದಾರೆ. ಆ ಹುಡುಗಿ 'ನಾನು ಕೆಲಸಕ್ಕೆ ಹೋಗಬೇಕು,ವಿದ್ಯಾಭ್ಯಾಸ ಮಾಡಬೇಕು,ನಾನು ಎಲ್ಲರ ಥರ ಓಡಾಡಬೇಕು' ಎನ್ನುತ್ತಾಳೆ. ಅದಕ್ಕಾಗಿ ನಾವು ಲಾಯರ್ ಹಿಡಿದಿದ್ದೇವೆ.

ಪ್ರಕರಣ–4

'ಹೈದರಾಬಾದ್‌ನಿಂದ ಒಬ್ಬ ಹುಡುಗ ಅಲ್ಲಿನ ಹುಡುಗಿಯರನ್ನು ಬೆಂಗಳೂರಿಗೆ ಕರೆತಂದು ಲಾಡ್ಜ್ ಮಾಡಿ ಒಂದು ರಾತ್ರಿ ಅವಳ ಜೊತೆ ಕಳೆದು ಅನಂತರ ಅವಳನ್ನು ಲೈವ್ ಬ್ಯಾಂಡ್ ಓನರ್‌ಗೆ ಮಾರಿ ಹೊರಟುಹೋಗಿದ್ದಾನೆ. ಆ ಹುಡುಗಿಗೆ ತಾಯಿ–ತಂದೆ ಇದ್ದಾರೆ. ಆದರೆ ಅವಳು 'ನಾನು ಅವರ ಹತ್ತಿರ ಹೋಗುವುದಿಲ್ಲ' ಎನ್ನುತ್ತಿದ್ದಾಳೆ. 'ಓದಬೇಕು, ಕೆಲಸಕ್ಕೆ ಹೋಗಬೇಕು' ಎನ್ನುತ್ತಾಳೆ. ಇವತ್ತು ಅವಳಿದ್ದ ಲಾಡ್ಜ್‌ನ ಮೇಲೆ ರೈಡ್ ಆಗಿ ಈಗ ಸ್ಟೇಟ್ ಹೋಂ ನಲ್ಲಿದ್ದಾಳೆ. ಇವಳನ್ನು ಹೊರಗೆ ತರಲು ಕೋರ್ಟ್‌ಗೆ ಅರ್ಜಿ ಹಾಕಿದ್ದೇವೆ. ಈ ಕೇಸಿಗೆ ಅವಳನ್ನು ಮಾರಿದ ದಲ್ಲಾಳಿ ಕೂಡ ಬಂದಿದ್ದ. ಅವನು ನಮ್ಮನ್ನು ನೋಡಿ 'ನಿವೆಲ್ಲ ಸಹಾಯ

ಮಾಡುತ್ತೀರಾ...... ಆಮೇಲೆ ಅವಳನ್ನು ಕರೆದುಕೊಂಡು ಹೋಗಿ ದಂಧಾ ಮಾಡಿಸುತ್ತೀರಾ ?' ಎಂದು ನಮಗೇ ಅವಮಾನ ಮಾಡಿದ.

ಪ್ರಕರಣ–5

'ನಮ್ಮ ಸಮುದಾಯದ ಹುಡುಗಿ ಇನ್ನೊಂದು ಸಮುದಾಯದ ಹುಡುಗಿಯ ಗಂಡನನ್ನು ಇವಳು ಕೈಗೆ ಹಾಕಿಕೊಂಡು ಆ ಗಂಡನಿಗೆ 'ಅವಳ ಜೊತೆ ಇರಬಾರದು. ನನ್ನ ಜೊತೆ ಇರಬೇಕು' ಎನ್ನುತ್ತಾಳೆ. ಅದಕ್ಕೆ ನಾನು 'ಗಂಡ–ಹೆಂಡತಿ ಚೆನ್ನಾಗಿದ್ದಾರೆ. ಅವರ ವಿಷಯಕ್ಕೆ ನೀನು ಹೋಗಬಾರದು. ಹೋದರೆ ನಿನ್ನ ಮೇಲೆ ಹಾಗು ನಿನ್ನ ಪಾರ್ಟ್ನರ್ ಮೇಲೆ ಕಂಪ್ಲೇಂಟು ಕೊಡುತ್ತೇನೆ' ಎಂದಿದ್ದೇನೆ.

ಪ್ರಕರಣ–6

'ಸ್ಟ್ರೀಟ್‌ನಲ್ಲಿ ವ್ಯಕ್ತಿಯೊಬ್ಬ ಬಂದು ನಾನು ಖಿಗಿ–9ನಲ್ಲಿ ಕೆಲಸ ಮಾಡುವುದು. ನೀವು ನನಗೆ ರೋಲ್‌ಕಾಲ್ ಕೊಡಬೇಕು. ನನ್ನ ಜೊತೆ ದುಡ್ಡು ಕೇಳದೆ ಉಚಿತವಾಗಿ ಮಲಗಬೇಕು. ನೀವು ಮಲಗದಿದ್ದರೆ ಶೂಟ್ ಮಾಡಿ ದಂಧಾ ಮಾಡುವುದನ್ನು ನಿಲ್ಲಿಸುತ್ತೇನೆ' ಎಂದು ಹೇಳಿದ್ದಾನೆ. ನನ್ನ ಹತ್ತಿರ ಖಿಗಿ–9ನ ಒಬ್ಬರದು ಫೋನ್ ನಂಬರ್ ಇತ್ತು. ನಾನು ಫೋನ್ ಮಾಡಿ ವಿಷಯ ತಿಳಿಸಿದೆ. ಇದಕ್ಕೆ ಅವರು 'ಅಂಥವರು ಬಂದಾಗ ಕೆಲಸದ ಕಾರ್ಡ್ ತೋರಿಸಿ' ಎಂದು ಕೇಳಿ ಎಂದಿದ್ದಾರೆ ಅಕಸ್ಮಾತ್ ಹಾಗೆ ಬಂದಾಗ ನಮಗೆ ಫೋನ್ ಮಾಡಿ ಎಂದಿದ್ದಾರೆ.

'ಅಮೃತ' ಎಂಬ ಹುಡುಗಿ ಹೆಚ್.ಐ.ವಿ ಪೇಷಂಟ್. ಅವಳು ಸರಿಯಾಗಿ ಮಾತ್ರೆ ತೆಗೆದುಕೊಳ್ಳುತ್ತಿದ್ದಾಳೆ.

ಅಕ್ಟೋಬರ್

1-10-2011 – ಮಡಿವಾಳ ಪೊಲೀಸ್ ಠಾಣೆ – ದಂಧಾ ಮಹಿಳೆಯರು–2

2-10-2011 – ಕಾಟನ್ ಪೇಟೆ ದಂಧೆ – ಆರು ಜನ.

4-10-2011 – ಯಲಹಂಕ ಉಪನಗರ – 3 ದಂಧಾಮನೆ

5-10-2011 – ಜೀವನಭೀಮಾ ನಗರ ದಂಧೆ – 2 ರೈಡ್.

6-10-2011 – ಉಪ್ಪಾರ ಪೇಟೆ ದಂಧೆ– 2 ರೈಡ್.

9-10-2011 – ಕಾಟನ್ ಪೇಟೆ – 10 ಜನ ದಂಧೆ ಮಾಡುವ ಮಹಿಳೆಯರು.

11-10-2011 – ಅಶೋಕ ನಗರ – 8 ಜನ ದಂಧಾ ಮಹಿಳೆಯರು.

12-10-2011 – ಜಯನಗರ – 8 ಜನ ದಂಧೆ.

14-10-2011 – ಸಿಟಿ ಮಾರ್ಕೆಟ್ ದಂಧೆ– 10 ಜನ ಲಾಡ್ಜ್ ಕೇಸ್.

21-10-2011 – ಚಾಮರಾಜಪೇಟೆ – 4 ದಂಧಾ ಮಹಿಳೆಯರು.

21-10-2011 – ಹುಳಿಮಾವು ದಂಧಾ ಮಹಿಳೆಯರು.

24-10-2011 , 26-10-2011 – ವಿಲ್ಸನ್ ಗಾರ್ಡನ್ – ಇಬ್ಬರು ದಂಧಾ ಮಹಿಳೆಯರು.

ಅಂದ ಹಾಗೆ ಈ ಅಂಕಿ ಅಂಶಗಳ ಮಟ್ಟಕ್ಕಿಳಿದ ಹೆಣ್ಣುಮಕ್ಕಳ ಬದುಕು ಏನಾಯಿತು ಎಂದು ಪತ್ರಿಕೆಗಳು ಬರೆದಿರುವುದು ನಿಮ್ಮ ನೆನಪಲ್ಲಿದೆಯೆ?

ಜೀವಂತ ಹೆಣ್ಣುಮಕ್ಕಳು ದಿವಂಗತ ಶಬ್ದಗಳಾಗಿದ್ದು ಹೀಗೆ... ಏಕೆಂದರೆ ನಮ್ಮ ಪತ್ರಿಕೋದ್ಯಮ ಐಸಿಯುನಲ್ಲಿ ಮಲಗಿದೆ...



ನಾಗದೇವನಹಳ್ಳಿಯಲ್ಲಿ ಜಾತಿ ಬಸವ ಪ್ರತ್ಯಕ್ಷ

⌘ ಡಾ. ರವಿಕುಮಾರ್ ಬಾಗಿ

ರಾಜಧಾನಿ ಬೆಂಗಳೂರಿನ ಗ್ರಾಮ ನಾಗದೇವನಹಳ್ಳಿಗೆ ಚಿಕ್ಕರಸಿನಕೆರೆಯ ಕಾಲ ಭೈರವೇಶ್ವರ ಬಸವಣ್ಣನವರು ಬಂದಿದ್ದರು. ನಾಗದೇವನಹಳ್ಳಿಗೆ ಅವರು ಬಂದಿಳಿದ ವೈಭವ ನೋಡಬೇಕಿತ್ತು. ಅವರನ್ನು ದೊಡ್ಡ ಟೆಂಪೋ ನಲ್ಲಿ ನಿಲ್ಲಿಸಿಕೊಂಡು ಥೇಟ್ ಮಹಾರಾಜನಂತೆಯೇ ಕರೆತರಲಾಗಿತ್ತು. ಅವರು ಇಳಿಯಲು ಅನುಕೂಲವಾಗಲಿ ಎಂದು ಟೆಂಪೋದ ಹಿಂಭಾಗ ಮರಳಿನ ಗುಡ್ಡೆಯನ್ನು ಹಾಕಿ ಮೃದುವಾಗಿ ಇಳಿಸಿಕೊಳ್ಳಲಾಯಿತು. ನೂರಾರು ಜನ ಅವರ ಬರುವಿಗೆ ಕಾದಿದ್ದರು. ಮಹಿಳೆಯರು ಕಳಸ ಹೊತ್ತು ನಿಂತಿದ್ದರು. ಮಕ್ಕಳಿಗೆ ಖುಷಿ ಮತ್ತು ಸಂಭ್ರಮ. ಬಸವಣ್ಣನವರು ಮಾತ್ರ ದಿವ್ಯ ಮೌನ ತಾಳಿದ್ದರು. ಗಂಭೀರವಾಗಿ ನಿಂತಿದ್ದರು. ಜನರಲ್ಲಿ ಕಲರವ, ಗುಜುಗುಜು. ಏಕೆಂದರೆ ಅವರನ್ನು ನಾಗದೇವನಹಳ್ಳಿಯ ಮತ್ತೊಂದು ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯಲು ಸಕಲ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಆ ವೈಭವವನ್ನು ನೋಡಿದರೆ ಹನ್ನೆರಡನೆಯ ಶತಮಾನದ ಭಕ್ತಿ ಭಂಡಾರಿ ಬಸವಣ್ಣನವರೂ ನಾಚುತ್ತಿದ್ದರೋ ಏನೋ?

ಮುಂದೆ ತಮಟೆ ವಾಲಗದ ಸದ್ದು, ಅದರ ಹಿಂದೆ ರಸ್ತೆಯ ತುಂಬಾ ನೀರನ್ನು ಚೆಲ್ಲುತ್ತಾ, ಬಸವಣ್ಣನವರ ಹೆಜ್ಜೆಗಳಿಗೆ ಮೈಲಿಗೆಯಾಗಬಾರದೆಂದು ಹೊರಟ ವಾಟರ್ ಟ್ಯಾಂಕರ್, ಅದರ ಹಿಂದೆ ಮಹಾರಾಜ ಬಸವಣ್ಣನವರ ಮೆರಣಿಗೆ ಹೊರಟಿತು. ಸೀದಾ ನಾಗದೇವನಹಳ್ಳಿಯ ಮತ್ತೊಂದು ದೇವಸ್ಥಾನಕ್ಕೆ. ಅಲ್ಲಿಯೋ ವಿಪ್ರೋತ್ತಮರು ವೇದ ಘೋಷಗಳೊಂದಿಗೆ ಅವರನ್ನು ಸ್ವಾಗತಿಸಿದರು. ಅವರು ತಲೆಯಾಡಿಸುತ್ತಾ, ಗೊತ್ತಾದರೂ ಗೊತ್ತಾಗದಂತೆ ಮುಗುಳ್ನಗುತ್ತಿದ್ದರು. ಚಿಕ್ಕರಸಿನಕೆರೆಯ ಬಸವಣ್ಣನವರಿಗೆ ತೀರಾ ಇತ್ತೀಚೆಗೆ ಜನಪ್ರಿಯತೆ ಬಂದುಬಿಟ್ಟಿತು. ಅವರನ್ನು ಎಲ್ಲರೂ ತಿರುಗುಬಸವ ಎಂದೇ ಕರೆಯುತ್ತಿದ್ದರು. ಅದು ಯಾವ ಘಳಿಗೆಯಲ್ಲಿಯೋ ಏನೋ, ಅವರಿಗೆ ದೇವರ ಕೃಪೆಯುಂಟಾಯಿತು. ಎಲ್ಲರಿಗೂ ಭಕ್ತಿ ಭಾವ ಉಕ್ಕಿ ಹರಿಯತೊಡಗಿತು. ಹೋರಿಗರು ವಾಗಿದ್ದ ಬಸವಣ್ಣನವರನ್ನು ಹಳ್ಳಿಯ ಜನ ಒಂದು ಕಡೆ ಕಟ್ಟಿ ಹಾಕಿ, ಚೆನ್ನಾಗಿ ಸೀಮೆ ಹುಲ್ಲನ್ನು ಕೊಟ್ಟು ಕೊಬ್ಬುವಂತೆ ಬೆಳೆಸಿದರು. ಬಸವಣ್ಣನವರಿಗೆ ಈ ಸುಖದಿಂದ ವಿಶೇಷವಾದ ಬುದ್ಧಿ ಬಂದಿತು. ಅವರು ಹೆಚ್ಚಿಗೆ ಕಾಣಿಕೆ ಕೊಟ್ಟವರ ಎದುರು ತಲೆಯಾಡಿಸುವುದು. ಅವರ ಮುಂದೆ ಹೋಗಿ ನಿಂತುಕೊಳ್ಳುವುದು. ದೊಡ್ಡ ದೊಡ್ಡ ಕಟ್ಟಡಗಳು ಕಂಡರೆ, ಅದರ ಮುಂದೆ ವಿಶೇಷವಾಗಿ ದಾನ ಪಡೆಯುವ ಸೌಭಾಗ್ಯವನ್ನೂ ಪಡೆದುಕೊಂಡರು. ಕೂಲಿಯವರೂ ಬಡ ರೈತರು, ಬಸವಣ್ಣನವರ ಕೊಂಬಿಗೆ ವಿವಿಧ ತಂತ್ರಗಳನ್ನು ಅನುಸರಿಸಿ ಒಂದು ರೂಪಾಯಿ, ಎರಡು ರೂಪಾಯಿ, ಐವತ್ತು ರೂಪಾಯಿಯವರೆಗೆ ಅಂಟಿಸುತ್ತಿದ್ದರು. ಇವರ ವಿಚಾರ ಕರ್ನಾಟಕ ವಿವಿಧ ವಾರ್ತಾ ವಾಹಿನಿಗಳಲ್ಲಿ ಹಬ್ಬಿ, ಬಸವನನ್ನು ನೋಡಿಕೊಳ್ಳುತ್ತಿದ್ದವರಿಗೂ, ವಿಪ್ರೋತ್ತಮರಿಗೂ ವಿಶೇಷವಾದ ಆನಂದವುಂಟಾಯಿತು. ಅವರ ಕೀರ್ತಿಯನ್ನು ಪಕ್ಕದ ಸೀಮೆಗೆಲ್ಲಾ ಹಬ್ಬಿಸಿ ವಿವಿಧ ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿ ಟೂರಿಂಗ್ ಟಾಕೀಸಿನಂತೆ ದುಡ್ಡು ಮಾಡತೊಡಗಿದ್ದಾರೆ. ಈ ಬಸವಣ್ಣ ತನ್ನ ಪ್ರಾಣಿಗುಣವನ್ನು ಮರೆತು, ರಾಜಕಾರಣಿಯಂತೆಯೇ ವರ್ತಿಸಲು ಕಲಿತಿದ್ದಾರೆ. ಅಷ್ಟು ಮಾತ್ರವಲ್ಲ, ಶುದ್ಧ ಹಳ್ಳಿಯಲ್ಲಿ ಬೆಳೆದಿದ್ದರಿಂದ ಜಾತಿ ಪದ್ಧತಿಯನ್ನೂ ಚಾಚೂ ತಪ್ಪದೆ ಅನುಸರಿಸುತ್ತಾರೆ. ಚಿಕ್ಕರಸಿನಕೆರೆಯ ಹೊಲಗೇರಿಯಲ್ಲಿ ಎಂತಹ ಇಂಡಿ, ಬೂಸ, ಸೀಮೆ ಹುಲ್ಲು ವಿವಿಧ ಬಗೆಯ ಭಕ್ಷ್ಯಗಳನ್ನಿಟ್ಟರೂ ಆ ಕಡೆ ಸುಳಿಯುವುದೂ ಇಲ್ಲ. ಹೀಗೆ ಅಸ್ಪೃಶ್ಯತೆಯನ್ನು ಪಾಲಿಸಿ, ಭಾರತದ ಸನಾತನ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾ, ಅಪ್ಪಟ ಭಾರತೀಯ ಮನುಷ್ಯನಾದ ದನವನ್ನು ನಾವು ನಾಗದೇವನಹಳ್ಳಿಯಲ್ಲಿ ಕಂಡು ಧನ್ಯರಾದೆವು.



ತಾಯ ಮೊಲೆವಾಲು ನಂಜಾದೊಡೆ...

ಮೇಲ್ಜಾತಿ ಜನರೊಂದಿಗೆ ದಲಿತ ಚಳುವಳಿ ಮುಖಂಡರೂ ದೇವದಾಸಿಗಳನ್ನ ದುರುಪಯೋಗ ಮಾಡಿಕೊಳ್ಳುವುದು ಎಂಥ ದ್ರೋಹ...

⌘ ಸಂದರ್ಶನ: ಸಿ.ವಿ. ನಾಗರಾಜ್

ಕುಮಾರಿ ಮಂಜುಳ ಮಾಳ್ಗಿ ಶೋಷಿತ ಸಮುದಾಯದಲ್ಲೇ ಹುಟ್ಟಿ ಬಿಡುಗಡೆಯ ಕನಸುಗಳನ್ನು ಹೊತ್ತು ಎರೆ ಹುಳುವಿನಂತೆ ಸಮಾಜವನ್ನು ಹದ ಮಾಡಲು ಹೊರಟಿರುವ ಒಬ್ಬ ಉದಯೋನ್ಮುಖ ದಲಿತ ಮಹಿಳಾ ನಾಯಕಿ. ಅವರು ಎಲೆ ಮರೆಯಲ್ಲಿ ಕಳಂಕಿತ ಸಮುದಾಯಗಳ ವಿಮೋಚನೆಗಾಗಿ ನಡೆಸುತ್ತಿರುವ ಹೋರಾಟ ಸಣ್ಣ ಮಟ್ಟದ್ದಾದರೂ ಒಬ್ಬ ಸಮಾಜ ಬದಲಾವಣೆಗಾಗಿ ದುಡಿಯುತ್ತಿರುವ ಸಾಮಾಜಿಕ ಕಾರ್ಯಕರ್ತ, ಅಥವಾ ಚಳುವಳಿಯ ನಾಯಕತ್ವ ವಹಿಸಿಕೊಂಡಿರುವ ಮುಖಂಡರಿಗೆ ಸಮಸ್ಯೆಗಳ ಬಗ್ಗೆ ಇರಬೇಕಾದ ಒಂದು ಒಳನೋಟ, ದಿಟ್ಟತನ, ಧೈರ್ಯ ಹಾಗೂ ಕಳಂಕಿತ ಸಮುದಾಯಗಳ ಬಗ್ಗೆ ಇರಬೇಕಾದ ಅಂತಃಕರಣ ಇವೆಲ್ಲವನ್ನೂ ಮಂಜುಳ ಮಾಳ್ಗಿಯವರ ನಿತ್ಯ ನಡವಳಿಕೆಯಲ್ಲಿ ಕಾಣಬಹುದು.

ಮಂಜುಳ ಮಾಳ್ಗಿಯವರು ಇತ್ತೀಚೆಗೆ ಯಲಹಂಕದ ಸಂವಾದ ಸಂಸ್ಥೆಯಲ್ಲಿ ದಲಿತ ಫೌಂಡೇಶನ್ ಕರ್ನಾಟಕ ಸಹ ಭಾಗಿದಾರರ ಸಭೆಯಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಬದುಕಿನ ಕೆಲವು ಅನುಭವನಗಳನ್ನು ಅಲ್ಲಿನ ಗೆಳೆಯರೊಂದಿಗೆ ಹಂಚಿಕೊಳ್ಳುತ್ತಿದ್ದಾಗ, ಅದನ್ನು ಗಂಭೀರವಾಗಿ ಗಮನಿಸುತ್ತಿದ್ದ ಕೋಟಿಗಾನಹಳ್ಳಿ ರಾಮಯ್ಯನವರು ಅವರ ಅನುಭವಗಳನ್ನು ನೇರವಾಗಿ ದಾಖಲಿಸಿ ಆದಿಮ ಲಿವಿಂಗ್ ಟೈಮ್ಸ್‌ಗೆ ಕಳುಹಿಸಿಕೊಡಲು ಹೇಳಿದರು. ಆಗ ಸಿಕ್ಕ ಸ್ವಲ್ಪ ಸಮಯದಲ್ಲೇ ಮಂಜುಳ ಮಾಳ್ಗಿ ಅವರ ಅನುಭವಗಳನ್ನು ನೇರ ಪ್ರಶ್ನೆಗಳ ಮೂಲಕವೇ ಈ ಕೆಳಕಂಡಂತೆ ದಾಖಲಿಸಲಾಗಿದೆ.

ಪ್ರಶ್ನೆ: ಮಂಜುಳ ತಮ್ಮ ಪರಿಚಯ. . .

ನನ್ನ ಹೆಸರು ಮಂಜುಳ ಮಾಳ್ಗಿ. ನಾನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎಸ್.ಡಬ್ಲ್ಯೂ ಓದಿದ್ದೇನೆ. ನನ್ನ ಊರು ಬಳ್ಳಾರಿ ಜಿಲ್ಲೆಯ ಹೊಸಪೇಟೆಗೆ ಸೇರಿದ ಮರಿಯಮ್ಮನಹಳ್ಳಿ.

ಪ್ರಶ್ನೆ: ನಿಮ್ಮ ಕುಟುಂಬದ ಹಿನ್ನೆಲೆ ತಿಳಿಸುವಿರಾ ?

ನಮ್ಮನ್ನು ಮಾಳಿಗ್ಯಾರು ಅಥವಾ ಮಾಳಿಗೆ ಮನೆಯವರು ಅಥವಾ ಮಾಳ್ಗಿ ಎಂದು ಕರೆಯುತ್ತಾರೆ. ನಾವು ಮಾದಿಗ ಜನ ಆಗಿದ್ದು, ವಿಶೇಷವಾಗಿ ದೇವದಾಸಿ ಮನೆತನ ಎಂದು ನಮ್ಮ ಹಳ್ಳಿಯವರು ಗುರುತಿಸುತ್ತಾರೆ. ನನ್ನ ಅಜ್ಜಿ ದೊಡ್ಡನಾಗಮ್ಮ, ಅವರ ಮಗಳು ಸಣ್ಣನಾಗಮ್ಮ ನನ್ನ ತಾಯಿಯ, ಅಜ್ಜಿ ದೇವದಾಸಿಯಾಗಿದ್ದವರು, ನನ್ನ ತಾಯಿ ಸಹ ದೇವದಾಸಿಯಾಗಿ ಸ್ವತಂತ್ರವಾಗಿ ತುಂಬ ಶ್ರಮಜೀವನ ಸಾಗಿಸಿ ಕುಟುಂಬವನ್ನು ಮುನ್ನಡೆಸಿದ್ದು ನನ್ನ ಕಣ್ಣೆದುರು ಕಾಣುತ್ತಿದೆ.

ನಾವು ಮನೆಯಲ್ಲಿ ಈಗ ಒಟ್ಟು 6 ಜನ ಇದ್ದೇವೆ. ನನ್ನ ತಾಯಿ ಹೊಲಗದ್ದೆ ಕೆಲಸ, ಆಡು ಮೇಯಿಸುವ ಕೆಲಸ ಮಾಡುತ್ತಾರೆ. ಅಜ್ಜಿ ಹಣ್ಣು ಮಾರುವುದು, ಹೊಲಗದ್ದೆ ಕೆಲಸ, ಹಿಟ್ಟಿನ ಜಿನ್ನಿನಲ್ಲಿ ಕಸ ಬಳಿಯುವ ಕೆಲಸ ಮಾಡುತ್ತಿದ್ದಳು. ಈಗ ಬೇರೆಯವರ ಮನೆಗೆ ಜೀತ ಕೆಲಸಕ್ಕೆ ಹೋಗುವುದಿಲ್ಲ. ಅಕ್ಕ ಲಕ್ಷ್ಮಿ ನಮ್ಮ ಆರೈಕೆಗಾಗಿ 4ನೇ ತರಗತಿ ಓದುತ್ತಿದ್ದವಳು ಶಾಲೆ ಬಿಟ್ಟಳು, ಈಗ ಗೋಡೆ ಕಟ್ಟುವ ಕೆಲಸ , ಹೊಲಗದ್ದೆ, ಮನೆ ಕೆಲಸ ಮಾಡುತ್ತಾಳೆ, ನನ್ನ ತಂಗಿ ನಾಗವೇಣಿ ಎಸ್.ಎಸ್.ಎಲ್.ಸಿ ಓದಿ ಫೇಲಾದದ್ದಕ್ಕೆ ಶಾಲೆ ಬಿಟ್ಟಳು, ಈಗ ಕ್ರಿಶ್ಚಿಯನ್ ಹುಡುಗನನ್ನು ಮದುವೆಯಾಗಿ 2 ಮಕ್ಕಳಿಗೆ ಒಳ್ಳೆಯ ತಾಯಿಯಾಗಿ ಸಂಸಾರವನ್ನು ಉತ್ತಮ ರೀತಿಯಲ್ಲಿ ನಿಭಾಯಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಈಗ ತಂಗಿ ಗಂಡನೊಂದಿಗೆ ಫ್ಯಾಕ್ಟರಿಯಲ್ಲಿ ಇಬ್ಬರೂ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ನನ್ನ ತಮ್ಮ ಕೋಟಿ 6ನೇ ತರಗತಿ ಓದಿ ಆಡು ಕಾಯಲಿಕ್ಕೆ ಬಿಟ್ಟು ಬಿಟ್ಟ. ನಾನು 2009ನೇ ಸಾಲಿನಲ್ಲಿ ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ಎಂ.ಎಸ್.ಡಬ್ಲ್ಯೂ ಮುಗಿಸಿದೆ. ನಂತರ ಸಖಿ ಸಂಸ್ಥೆಯ ಸಹಕಾರದಿಂದ ದಲಿತ್ ಫೌಂಡೇಶನ್ ಫೆಲೋ ಆಗಿ ವರ್ಷದಿಂದ ಸ್ವತಂತ್ರ ವಾಗಿ ನಮ್ಮ ಹಳ್ಳಿಯಲ್ಲಿ ನಮ್ಮ ಸಮುದಾಯದವರೊಟ್ಟಿಗೆ ಕೆಲಸ ಮಾಡುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ನಮ್ಮದು ದೇವದಾಸಿ ಕುಟುಂಬ ಆದರೂ ವೇಶ್ಯಾವಾಟಿಕೆ/ಲೈಂಗಿಕ ವೃತ್ತಿ/ ಯಾವ ಗಂಡಸರ ಆಸೆ ಆಕಾಂಕ್ಷೆಗಳ ಆಶ್ವಾಸನೆಗಳಿಗೆ ಒಳಗಾಗಿಲ್ಲ ಎಂದು ತಿಳಿಯಬಹುದು. ನನ್ನ ಅಜ್ಜಿ ಪ್ರಕಾರ ದೇವದಾಸಿ ಎಂದರೆ ಸ್ವತಂತ್ರವಾಗಿ ಸ್ವಾವಲಂಭಿಗಳಾಗುವುದು. ನನ್ನ ತಾಯಿ ಕೇಳಿದರೆ, "ನಾನು ದೇವದಾಸಿ ಆದಂಗ

ನನ್ನ ಮಕ್ಕಳು ಆಗಬಾರದು" ಎಂದು ಹೇಳಿ ನಾಲ್ಕು ಮಕ್ಕಳನ್ನು ಓದಿಸಿದಳು. ಆದರೆ ನಾನು ಒಬ್ಬಳೆ ಎಂ.ಎಸ್.ಡಬ್ಲ್ಯು ಓದಿ ಮುಗಿಸಿ ಶಿಕ್ಷಣ ಪಡೆಯಲು ಸಾಧ್ಯವಾಯಿತು. ನಾನು ನಮ್ಮಂತಹ ಕುಟುಂಬದವರು ಶಿಕ್ಷಣ ಪಡೆದುಕೊಳ್ಳುವುದಕ್ಕಾಗಿ ಶ್ರಮಿಸುತ್ತಿದ್ದೇನೆ. ನನ್ನ ಶಿಕ್ಷಣದ ಯಶಸ್ಸಿನ ಹಿಂದೆ ನಮ್ಮ ಮನೆಯವರೆಲ್ಲರ ಸಹಕಾರ ಇದೆ.

ಪ್ರಶ್ನೆ: ದೇವದಾಸಿ ಮಗಳಾಗಿ ನಿಮ್ಮ ಅನುಭವ ಏನು?

ಪ್ರಮಾಣಿಕವಾಗಿ ಹೇಳುತ್ತೇನೆ. ನಾನು ಶಾಲೆಯಲ್ಲಿ ಕಾಲೇಜಿನಲ್ಲಿ ಎಂದೂ ದೇವದಾಸಿ ಮಗಳು ಎಂದು ಹೇಳಿಕೊಂಡಿಲ್ಲ. ಕಾರಣ ಯಾವ ಗಂಡಸು ನನ್ನನ್ನು ಆ ದೃಷ್ಟಿಯಿಂದ ನೋಡಬಾರದು ಎಂದು ಹಾಗೇನೆ ನನ್ನ ಸುತ್ತಮುತ್ತಲಿನ ಗಂಡಸರು ನನಗೆ ಬೇಕಂತಲೇ ಹೇ... ನಿಮ್ಮದಳೆ ಮಿಂಡ್ರಿಗುಟ್ಟಿದ್ದ ಎಂದು ನಗುತ್ತಾ ಬೈಯುತ್ತಿದ್ದರು. ಅವರು ಮಾಡುವ ತಪ್ಪುಗಳನ್ನು, ಶೋಷಣೆಯನ್ನು ಪ್ರಶ್ನಿಸಿ ತಿರುಗೇಟಾಗಿ "ನೀನು ಎಷ್ಟು ಮಂದಿಗೆ ಹುಟ್ಟೆ ಅಂತ ನಿನಗೆ ಗೊತ್ತಾ, ನಾನು ಅದಕ್ಕೆ ತಿರುಗೇಟು ಕೊಟ್ಟಿದ್ದು. "ನಿನ್ನಂಥವರು ಹೀಗೆ ಹುಟ್ಟಿಸೋರು ಇರೋತನಕ ನಾವು ಹುಟ್ಟಬೇಕಾಗೈತಿ, ಅದು ನಿಮ್ಮ ತಪ್ಪು, ನಮ್ಮದಲ್ಲ, ಹೆಚ್ಚು ಕಡಿಮೆ ಮಾತಾಡಿದ್ರೆ ಏನಾಗ್ತಿ ಗೊತ್ತಿಲ್ಲ, ಹೇಳಲ್ಲ ಮಾಡಿ ತೋರಿಸಬೇಕಾಗೈತಿ" ಎಂದೆ ಮತ್ತೇ ಅದೇ ರೀತಿ ನಮ್ಮ ಅವ್ವನಿಗೆ ಬೈದಾಗ, ಪೊಲೀಸ್‌ರವರನ್ನ, ಕೇರಿಯ ಮುಖಂಡರನ್ನ ಒಂದು ಕಡೆ ಸೇರಂಗ ಮಾಡಿದೆ "ಹೀಂಗ ನಮ್ಮ ಅವ್ವನಿಗೆ ಮತ್ತು ನಮಗೆ ಇನ್ನೊಂದು ಸಾರಿ ಏನಾದ್ರು ಇಂಗ ಬೈದ್ರೆ, ನಿನ್ನ ಅಂಗಾಂಗಗಳನ್ನು ಕಡಿದು ಸಣ್ಣಾಗಿ ತುಂಡು-ತುಂಡು ಮಾಡಿ ನಾಯಿಗೆ ಹಾಕ್ತೀನಿ ನೋಡು, ಉಷಾರ್", ಎಂದು ತುಂಬಾ ಗಟ್ಟಿಯಾಗಿ ಹೇಳಿದೆ. ಹಂಗ ಅಂದಾಗ ಅಲ್ಲಿದ್ದ ಪೊಲೀಸರು, ದಲಿತ ಲೀಡರ್‌ಗಳು, ನಾಯಕರು ಯಾರೂ ಒಂದೇ ಒಂದು ಮಾತಾಡಲಿಲ್ಲ. ಸುಮ್ಮೆ ನಿಂತಗೊಂಡು ನನ್ನ ಮುಖವನ್ನೇ ನೋಡಿ ಇನ್ನೊಂದು ಮಾತನಾಡದೆ ಸುಮ್ನೆ ಹೋಗಿಬಿಟ್ರು.

ಬಳ್ಳಾರಿಯ ರಾಜಪ್ಪ [ಹೆಸರು ಬದಲಾಯಿಸಲಾಗಿದೆ] ಎನ್ನುವ ದಲಿತ ಚಳುವಳಿಯ ಮುಖಂಡ ಯಂಕಮ್ಮ ಎನ್ನುವ ಸುಂದರ ಹೆಣ್ಣು ಮಗಳನ್ನು ದೇವದಾಸಿ ಎನ್ನುವ ಕಾರಣಕ್ಕೆ ಎರಡು ಮಕ್ಕಳಾದ ನಂತರ ಬಿಟ್ಟು ಹೋಗಿದ್ದಾನೆ. ಅದೇ ರೀತಿ ಈಗ ಇರುವ ನಮ್ಮ ಊರಿನ ಪಿ.ಡಿ.ಎಸ್ ಅಧ್ಯಕ್ಷರೊಬ್ಬರು ಮದುವೆ ಆಗುತ್ತೇನೆ ಎಂದು ನಂಬಿಸಿ 3 ಹುಡುಗಿಯರನ್ನು ಲೈಂಗಿಕವಾಗಿ ಬಳಸಿಕೊಂಡು ಗರ್ಭಿಣಿಯಾದ ಮೇಲೆ ಅಬಾರ್ಷನ್ ಮಾಡಿಸಿ, ಇಬ್ಬರಿಗೆ ದುಡ್ಡು ಕೊಟ್ಟು, ಇನ್ನೊಂದು ಹುಡುಗಿಗೆ ದೇವದಾಸಿ ಮಾಡಿದ.

ಪ್ರಶ್ನೆ: ದೇವದಾಸಿಗಳನ್ನು ದಲಿತ ಚಳವಳಿ ಹೇಗೆ ನೋಡುತ್ತದೆ?

ಈ ಹಿಂದೆ ಮೇಲ್ಜಾತಿಯವರು ಬಳಸಿಕೊಂಡ್ರು, ಈಗ ನಾವೇನು ಕಡಿಮೆ ಇಲ್ಲ ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಮಾಡುವುದರಲ್ಲಿ ಎನ್ನುವುದಕ್ಕೆ ನನ್ನ ಹಳ್ಳಿಯಲ್ಲಿ ನಡೆದಂತಹ ಘಟನೆಗಳೇ ಸಾಕ್ಷಿ:

ಬಳ್ಳಾರಿಯ ರಾಜಪ್ಪ [ಹೆಸರು ಬದಲಾಯಿಸಲಾಗಿದೆ] ಎನ್ನುವ ದಲಿತ ಚಳುವಳಿಯ ಮುಖಂಡ ಯಂಕಮ್ಮ ಎನ್ನುವ ಸುಂದರ ಹೆಣ್ಣು ಮಗಳನ್ನು ದೇವದಾಸಿ ಎನ್ನುವ ಕಾರಣಕ್ಕೆ ಎರಡು ಮಕ್ಕಳಾದ ನಂತರ ಬಿಟ್ಟು ಹೋಗಿದ್ದಾನೆ. ಅದೇ ರೀತಿ ಈಗ ಇರುವ ನಮ್ಮ ಊರಿನ ಪಿ.ಡಿ.ಎಸ್ ಅಧ್ಯಕ್ಷರೊಬ್ಬರು ಮದುವೆ ಆಗುತ್ತೇನೆ ಎಂದು ನಂಬಿಸಿ 3 ಹುಡುಗಿಯರನ್ನು ಲೈಂಗಿಕವಾಗಿ ಬಳಸಿಕೊಂಡು ಗರ್ಭಿಣಿಯಾದ ಮೇಲೆ ಅಬಾರ್ಷನ್ ಮಾಡಿಸಿ, ಇಬ್ಬರಿಗೆ ದುಡ್ಡು ಕೊಟ್ಟು, ಇನ್ನೊಂದು ಹುಡುಗಿಗೆ ದೇವದಾಸಿ ಮಾಡಿದ. ಕಾರಣ ಆ ಹುಡುಗಿ ಕುಟುಂಬ ತುಂಬಾ ಬಡತನ ಮತ್ತು ಅನಕ್ಷರಸ್ಥ ಕುಟುಂಬ ಆಗಿತ್ತು. ಹೀಗೆ ದಲಿತ ಚಳುವಳಿ ಮುಖಂಡರು ಈ ಸಮಸ್ಯೆಯನ್ನು ವಿಶೇಷವಾಗಿ ನೋಡಿಲ್ಲ. ಅದನ್ನೇ ಬಂಡವಾಳವನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಇತರೆ ಮದುವೆ ಆದ ಹೆಣ್ಣು ಮಕ್ಕಳಿಗೆ ಇರುವ ಗೌರವ ಸ್ಥಾನಮಾನ ದೇವದಾಸಿ ಮಕ್ಕಳಿಗೆ ಕೊಡುವುದಿಲ್ಲ. ಅವರು ಏನಿದ್ರು ದೇವದಾಸೀನೇ ಎನ್ನುತ್ತಾರೆ.

ಪ್ರಶ್ನೆ: ದೇವದಾಸಿಗಳ ಕುಟುಂಬದೊಂದಿಗೆ ಬದುಕು ಸಾಗಿಸುತ್ತಿರುವ ನಿಮ್ಮ ಅನುಭವ ಏನು?

ನನ್ನ ಹಾಗೂ ಸುತ್ತಮುತ್ತಲಿನವರಿಗೆ ಆದಂತಹ ಕೆಟ್ಟ ಅನುಭವಗಳನ್ನಾಧಾರವಾಗಿಟ್ಟುಕೊಂಡು ಅವು ಮುಂದೆ ಆಗಬಾರದು ಎಂದು ದೇವದಾಸಿ ಮಕ್ಕಳನ್ನು ಶಾಲೆ-ಕಾಲೇಜುಗಳಿಗೆ ಸೇರಿಸುವ, ವೃತ್ತಿ ತರಬೇತಿ, ಟೈಲರಿಂಗ್ ತರಬೇತಿ ಕೊಡುತ್ತಿದ್ದೇನೆ. ಹಾಗೇನೆ ಬದಲಾವಣೆ ಸುಸ್ಥಿರ ಬೆಳವಣಿಗೆಗಾಗಿ ಅಂಬೇಡ್ಕರ್ ಸಂಘದಿಂದ ಹಿಡಿದು ಪಂಚಾಯ್ತಿ ಮತ್ತು ಇತರೆ ಸಂಬಂಧಪಟ್ಟ ಸ್ಥಳಗಳಿಗೆ ಭಾಗವಹಿಸಿ, ಅರ್ಥಮಾಡಿಕೊಂಡು ನಮ್ಮ ಸಂಕೋಲೆಗಳಿಂದ ಬಿಡಿಸಿಕೊಂಡು ಬರಲು ಪ್ರಯತ್ನ ಮಾಡುತ್ತಿದ್ದೇವೆ. ವಿಶೇಷ ಮತ್ತು ಕೆಟ್ಟ ದೃಷ್ಟಿಯಿಂದ ಗಂಡಸರು ನೋಡುವುದು, ಮಹಿಳೆಯರನ್ನು ಮಾರಾಟ ಮಾಡುವವಳು ಎಂದು, ಏನೋ ಲಾಭ ಪಡೆಯಲು ಈ ರೀತಿ ಕಾರ್ಯಕ್ರಮ ಮಾಡುತ್ತಿದ್ದಾಳೆ, ಏನೋ ಲಾಭ ಬರುತ್ತಿದೆ ಎಂದು ಕೆಟ್ಟದಾಗಿ ಮಾತಾಡಿದ್ದೇ ತುಂಬಾ ಅನುಭವ.

ಒಂದು ಹುಡುಗಿಯುನ್ನ ದೇವದಾಸಿ ಆಗುವುದನ್ನು ತಡೆದೆ, ಪರಿಣಾಮವಾಗಿ ಹಾಗೆ ಲೈಂಗಿಕ ಅತ್ಯಾಚಾರ ಮಾಡಿದ ನಮ್ಮ ಜಾತಿ ಹುಡುಗನೇ, ಮೊದಲು ನಿನಗೆ ತಾಳಿ ಕಟ್ಟುತ್ತೇನೆ, ನಂತರ ಆಕೆಗೆ ತಾಳಿ ಕಟ್ಟುತ್ತೇನೆ ಎಂದು ಸವಾಲು ಹಾಕಿದ. ಆಗ ನಾನು ನನ್ನ ಮೈಮೇಲೆ ಇರುವ ಬಟ್ಟೆಯ ಒಂದು ಎಳೆಯನ್ನು ಟಚ್ ಮಾಡು ಆಗ ಗೊತ್ತಾಗುತ್ತೆ ಏನು ಯೋಗ್ಯತೆ ಎಂದು ತಿರುಗೇಟು ಹಾಕಿದೆ.

ಪ್ರಶ್ನೆ: ನಿಮ್ಮ ಪ್ರಕಾರ ದೇವದಾಸಿಗಳ ಬಿಡುಗಡೆಗೆ ಇರುವ ದಾರಿಗಳೇನು ?


ಶಿಕ್ಷಣ, ವೃತ್ತಿ ತರಬೇತಿ, ಮನೆಯಲ್ಲಿ ಎಲ್ಲರೂ ಮನ ಪರಿವರ್ತನೆಗೆ ಪ್ರೋತ್ಸಾಹ ಕೊಡಬೇಕು.

ಪ್ರಶ್ನೆ: ನಿಮಗೆ ಮೊದಲ ಬಾರಿಗೆ ಜಾತಿಯ ಅನುಭವ ಹೇಗಾಯಿತು ?

ನಾನು 6 ವರ್ಷ ಇದ್ದಾಗ, ನಮ್ಮ ಕೇರಿಗೆ ನೀರು ಬರುತ್ತಿರಲಿಲ್ಲ. ಆಗ ನಾನು ನಾಯಕರು ಇದ್ದ ಓಣಿಗೆ ಹೋದಾಗ ಗೊತ್ತಿಲ್ಲದೆ ಅವರ ನಲ್ಲಿ ಹತ್ತಿರ ಕೊಡಗಳನ್ನು ಇಟ್ಟಿದ್ದಕ್ಕೆ ಮಡಿಯಾಯಿತೆಂದು ಕಾಲಿಂದ ನನ್ನ ಕೊಡವನ್ನು ಬಿಸಾಕಿ ದೂರ ಚಾಡಿಸಿದ್ದರು, ಆಗ ನನಗೆ ಗೊತ್ತಾಗಿದ್ದು ನಾವು ಕೀಳು ಜಾತಿಯವರು ಎಂದು.

69ನೇ ಹುಣ್ಣಿಮೆ ಹಾಡಿನಲ್ಲಿ ವೇಷದ ಹುಲಿ

ರುದ್ರೇಶ ಅದರಂಗಿ, ಕೋಲಾರ



ವಿಮರ್ಶೆ

ಫೆಬ್ರುವರಿ 7ರ ಹುಣ್ಣಿಮೆ ಹಾಡು-69 ರಲ್ಲಿ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಡಾ॥ ಎಂ.ಬೈರೇಗೌಡ ಅವರ 'ವೇಷದ ಹುಲಿ' ನಾಟಕವನ್ನು ಅಭಿನಯಿಸಿದರು. ಎಂದಿನ ಹುಣ್ಣಿಮೆಗಿಂತ ಈ ಹುಣ್ಣಿಮೆ ಹಲವು ಕಾರಣಗಳಿಂದ ಮುಖ್ಯವಾಗಿತ್ತು. ಕೋಟಗಾನಹಳ್ಳಿ ರಾಮಯ್ಯನವರು ಪ್ರತಿ ಹುಣ್ಣಿಮೆಯ ಸಂದರ್ಭದಲ್ಲಿಯೂ ಬಂದಂತಹ ಅತಿಥಿ ಅಭ್ಯಾಗತರನ್ನು ವಿಚಾರಿಸುವುದು, ಮೇಲ್ವಿಚಾರಣೆ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ವೇದಿಕೆಗೆ ಬರುತ್ತಿರಲಿಲ್ಲ. ಆದಿಮಕ್ಕೆ ಇನ್ನೂ ಒಳ್ಳೆಯ ಕಾಲ ಬರುತ್ತಿರುವ ಸೂಚನೆಯೋ ಎಂಬಂತೆ ರಾಮಯ್ಯನವರು ವೇದಿಕೆ ಮೇಲೆ ಬಂದಿದ್ದರು. ಅಷ್ಟೇ ಅಲ್ಲ ಅಂದು ಅದ್ಭುತವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ 'ಆದಿಮ' ಸಂಸ್ಥಾಪಕ ಸದಸ್ಯರಲ್ಲೊಬ್ಬರಾದ ವಿ.ಎಸ್.ಎಸ್.ಶಾಸ್ತ್ರಿ ಅವರಿಗೆ ವಿಜ್ಞಾನ ಸಂವಹನ ಪ್ರಶಸ್ತಿ ಸಂದ ಅಭಿನಂದಿಸಲಾಯಿತು.

ಒಂದು ಕಾಲದಲ್ಲಿ ಚಳುವಳಿಯ ರೂಪದಲ್ಲಿ ಕಾಲೇಜುಗಳಲ್ಲಿಯೂ ಸಂತೋಷಕ್ಕಾಗಿ ರಂಗಭೂಮಿ ಚಟುವಟಿಕೆಯಿಂದ ಕೂಡಿತ್ತು. ಹಲವು ಮಹತ್ವದ ನಾಟಕಗಳು ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಡುತ್ತಿದ್ದವು. ರಂಗಭೂಮಿಯಿಂದ ಬಂದ ವಿದ್ಯಾರ್ಥಿಗಳು ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಹಲವು ಉದಾಹರಣೆಗಳಿವೆ. ಇತ್ತೀಚೆಗೆ ಕಾಲೇಜಿನಲ್ಲಿ ರಂಗಭೂಮಿಯ ಚಟುವಟಿಕೆಗಳು ಕಡಿಮೆಯಾಗುತ್ತಿವೆ. ಮೊದಲಿನ ಹಾಗೆ ವಾರ್ಷಿಕ ಪರೀಕ್ಷೆಗಳಿಲ್ಲದೆ ಸೆಮಿಸ್ಟರ್ ಪರೀಕ್ಷಾ ಪದ್ಧತಿ ಒಂದು ಕಾರಣವಾದರೆ, ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತಿರುವ ಆಧುನಿಕ ಸಮೂಹ ಮಾಧ್ಯಮಗಳು ಕೂಡ ಕಾರಣವಾಗಿವೆ. ಶಾಲಾ ಕಾಲೇಜುಗಳ ವಾರ್ಷಿಕೋತ್ಸವ ಸಮಾರಂಭದಲ್ಲಿ ಮೊದಲೆಲ್ಲಾ ನಾಟಕಗಳು ಪ್ರಯೋಗವಾಗುತ್ತಿದ್ದವು. ಆದರೆ ಇಂದು ಸಂಗೀತದ ಅಬ್ಬರದ ಹುಚ್ಚು ಕುಣಿತಗಳು ಹಾಗೂ ಫ್ಯಾಷನ್ ಶೋಗಳು ಆಕ್ರಮಿಸಿಕೊಂಡಿವೆ. ಇದು ಸಾಂಸ್ಕೃತಿಕ ದುರಂತವಲ್ಲದೆ ಮತ್ತಿನ್ನೇನು?

ಭಾರತ ಯಾತ್ರಾ ಕೇಂದ್ರ ಪ್ರತಿ ವರ್ಷ ಜ್ಞಾನಭಾರತಿ ಅಂತರ್‌ಕಾಲೇಜು ನಾಟಕ ಸ್ಪರ್ಧೆಗಳನ್ನು ಏರ್ಪಡಿಸುತ್ತಿರುವುದು ಅಭಿನಂದನೀಯ ವಿಷಯವಾಗಿದೆ. ಮೊದಲಿನಂತೆ ಹೆಚ್ಚಿನ ಸ್ಪರ್ಧೆಗೆ ಬರದಿದ್ದರೂ ತೃಪ್ತಿಕರವಾಗಿ ನಾಟಕಗಳು ಪ್ರಯೋಗಗೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಂತರ್ ಕಾಲೇಜು ನಾಟಕ ಸ್ಪರ್ಧೆಗೆ ಸಿದ್ಧಪಡಿಸಿದ ನಾಟಕ "ವೇಷದ ಹುಲಿ".

ಕಥೆಯ ವಸ್ತುವು ಕ್ರಿ.ಶ.15ನೇ ಶತಮಾನದಲ್ಲಿ ನಡೆದಿರಬಹುದಾದ ಘಟನೆಯನ್ನು ಆದರಿಸಿದೆ. ಪ್ರಭುತ್ವ ತನ್ನ ಕಬಂಧಬಾಹುಗಳನ್ನು ಎಲ್ಲೆಡೆ ಚಾಚುತ್ತಿರುವಂತೆ ಜನಸಾಮಾನ್ಯರ ಖಾಸಗಿ ಬದುಕಿನ ಮೇಲೂ ಪ್ರಭಾವವನ್ನು ಬೀರಿ ತನ್ನ ಕ್ರೂರ ನೀತಿಯ ಮೂಲಕ ಸಂಬಂಧಗಳನ್ನು ಮುರಿಯುವ ಹಾಗೂ ಹೆಣ್ಣನ್ನು ತನ್ನ ವಶಮಾಡಿಕೊಳ್ಳುವ ಹುನ್ನಾರದ ಕಥೆ ಇದು. ಮನುಷ್ಯನಲ್ಲೇ ಅಡಗಿರುವ ಮೃಗೀಯ ವರ್ತನೆ ಹಾಗೂ ಮೃಗೀಯ ವ್ಯಕ್ತಿಯಲ್ಲಿ ಅಡಗಿರುವ ಮಾನವೀಯತೆಯನ್ನು ಏಕಕಾಲಕ್ಕೆ ಅನಾವರಣ ಮಾಡುತ್ತಲೇ ಮನುಷ್ಯನ ಅಮಾನವೀಯತೆಯನ್ನು ನಾಟಕವು ಚರ್ಚೆಗೆ ಒಳಗುಮಾಡುತ್ತದೆ. ನಾಟಕದಲ್ಲಿ ಕಥೆ ಹೇಳುವ ಜಾನಪದೀಯ ಅಂಶವನ್ನು ಸೇರಿಸಲಾಗಿದೆ. ಅಲ್ಲದೆ ಜನಪದ ಕಲಾಪ್ರಕಾರಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಡಾ॥ ಎಂ. ಬೈರೇಗೌಡರವರು ನಾಟಕದಲ್ಲಿ ಜನಪದ ಕಥಾವಸ್ತುವನ್ನು ತಾತ್ವಿಕ ಚರ್ಚೆಗೆ ಒಳಗುಮಾಡಿದ್ದಾರಲ್ಲದೆ ಹಲವು ಪ್ರಯೋಗಗಳಿಗೆ ತಮ್ಮನ್ನು ನಾಟಕ ರಚನೆಯಲ್ಲಿ ಒಡ್ಡಿಕೊಂಡಿದ್ದಾರೆ.

ನಾಟಕವನ್ನು ಅಭಿನಯಿಸಿದವರೆಲ್ಲಾ ವಿದ್ಯಾರ್ಥಿಗಳೆಂದು ತೀರಾ ಸಲೀಸಾಗಿ ನಾಟಕದ ಅಭಿನಯದಲ್ಲಿನ ದೋಷಗಳನ್ನು ಗಮನಕ್ಕೆ ತರದೆ ಮೆಚ್ಚುಗೆಯನ್ನು ಸೂಚಿಸಬಹುದು. ಆದರೆ ಅಭಿನಯಿಸಿದವರೆಲ್ಲಾ ಪದವಿ ವಿದ್ಯಾರ್ಥಿಗಳಾದ್ದರಿಂದ ನಾಟಕದ ನಿರ್ದೇಶಕರಾದ ರಾಜುಗುರು ಹೊಸಕೋಟೆ ಅವರು ಕಲಾವಿದರನ್ನು ಮತ್ತಷ್ಟು ದುಡಿಸಿಕೊಂಡು ತರಬೇತಿ ನೀಡಬಹುದಾಗಿತ್ತು. ಆದರೆ ನಿರ್ದೇಶಕರಿಗೆ ನಾಟಕದ ಪಠ್ಯದ ಕಡೆಗೆ ಗಮನವಿದ್ದಂತೆ ನಟರ ಅಭಿನಯದ ಕಡೆಗೆ ಅಷ್ಟಾಗಿ ಗಮನವಿದ್ದಂತಿಲ್ಲ. ಹಾಗಾಗಿ ನಟರ ಅಭಿನಯದ ತಪ್ಪುಗಳನ್ನು ತಿದ್ದುವ ಗೊಡವೆಗೆ ಹೋದಂತಿಲ್ಲ. ಹೀಗಾಗಿ ನಾಟಕ ಪ್ರೇಕ್ಷಕರಿಗೆ ರಂಜನೆಯನ್ನುಂಟುಮಾಡದೆ ಬೇಸರವನ್ನುಂಟುಮಾಡಿತು.

ರಂಗದ ಮೇಲೆ ಯೋಗೇಶ್ ಎಸ್.ಸಿ, ಸುರೇಶ್.ಕೆ.ಎಂ, ಶಿಲ್ಪ.ಕೆ, ಪ್ರಕಾಶ್ ಶಿವಪ್ಪ, ಶಿವಪ್ರಸಾದ್ ಕೆ.ಎನ್, ಸೌಮ್ಯ ಎನ್, ಸುಮತಿ, ಕಾವೇರಿ.ಎಂ, ಪ್ರಕಾಶ್ ಕೆ.ಹೆಚ್, ವಿನೋದ್.ವಿ.ಎ, ವಿಜಯ ಕುಮಾರ್.ಅರ್, ಮಹದೇವಮ್ಮ, ಶ್ರೀದೇವಿ, ಪೃಥ್ವಿಶಂಕರ, ರೂಪಪ್ರಿಯ.ಅರ್, ಪುನೀತ್ ಕುಮಾರ್.ಎಲ್, ಚೈತ್ರ ಎಚ್.ಜಿ, ಶಶಿಕುಮಾರ್ ಅವರುಗಳು ಪಾತ್ರವನ್ನು ಅಭಿನಯಿಸಿದರು. ಮೈಕೋ ಶಿವಶಂಕರ್‌ರವರದು ಬೆಳಕು ನಿರ್ವಹಣೆ, ರಾಮಕೃಷ್ಣ ಬೆಳತ್ತೂರು ಅವರದು ಪ್ರಸಾದನ, ಲವ ಮತ್ತು ಪ್ರೇಮ್ ಅವರದು ರಂಗಸಜ್ಜಿಕೆ, ನಿಶಾ ಮತ್ತು ರಮ್ಯ ಅವರದು ನೃತ್ಯ ಸಂಯೋಜನೆ, ಲಕ್ಷ್ಮಣ್ ಮತ್ತು ಯಶವಂತ್ ಅವರದು ವಸ್ತ್ರ ವಿನ್ಯಾಸ, ಶಿವಪ್ರಸಾದ್.ಕೆ.ಎನ್. ಮತ್ತು ಸುರೇಶ್ ಕೆ.ಎಂ. ಅವರದು ಮೇಳ, ಸಂಗೀತ ಮತ್ತು ನಿರ್ದೇಶನ ರಾಜಗುರು ಹೊಸಕೋಟೆ ಅವರದು.



ರೈತ ಚಳುವಳಿಯು ಕರ್ನಾಟಕದಲ್ಲಿ ಹೊಸ ಕನಸಿನಂತೆ ಬಂದು ಹೋಯಿತು. ತನ್ನ ಎಲ್ಲ ಮಿತಿಗಳ ನಡುವೆಯೂ ಅದರ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರ ನೆಲಮೂಲ ಜ್ಞಾನವನ್ನು ತನ್ನದೇ ರೀತಿಯಲ್ಲಿ ವಿಸ್ತರಿಸಿತು. ರೈತ ಸಂಘ ಉಚ್ರಾಯ ಸ್ಥಿತಿಯಲ್ಲಿದ್ದಾಗ ಅದರ ನಾಯಕ ಪ್ರೊ:ನಂಜುಂಡಸ್ವಾಮಿಯವರು ಚಳುವಳಿಯ ಪ್ರಣಾಳಿಕೆಯಾಗಿ ನಮ್ಮ ನಾಡು ಪತ್ರಿಕೆಯನ್ನು ಹೊರತಂದರು. ಅರ್ಥಪೂರ್ಣವಾಗಿ ಮೂಡಿಬರುತ್ತಿದ್ದ ಪತ್ರಿಕೆಯಲ್ಲಿ ಪ್ರೊಫೆಸರ್ ತಮ್ಮ ಪ್ರಖರ ಚಿಂತನೆಗಳನ್ನು ಹಂಚಿಕೊಳ್ಳುತ್ತಿದ್ದರು. ರೈತಸಂಘದ ಅಜೆಂಡಾದಲ್ಲಿ ದಲಿತ ಚಿಂತನೆಯ ಅಭಾವ ಇದ್ದರೂ ವಿಶಾಲಾರ್ಥದಲ್ಲಿ ಅದನ್ನು ಒಳಗೊಂಡಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಈ ವಿಚಾರದಲ್ಲಿ ರೈತಸಂಘದ ನಿಲುವನ್ನು ಪ್ರೊಫೆಸರ್ ಮೀಸಲಾತಿ ವಿರೋಧಿಗಳ ಅವಿವೇಕ ಎಂಬ ಟಿಪ್ಪಣಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ನಮ್ಮ ಓದುಗರಿಗಾಗಿ ಮಾರ್ಚ್ 8, 1985ರ ನಮ್ಮ ನಾಡು ಪತ್ರಿಕೆಯ ಲೇಖನವನ್ನು ನೀಡುತ್ತಿದ್ದೇವೆ.

ಮೀಸಲಾತಿ ವಿರೋಧಿಗಳ ಅವಿವೇಕ

⌘ ಪ್ರೊ: ನಂಜುಂಡಸ್ವಾಮಿ

ಸಾವಿರಾರು ವರ್ಷಗಳಿಂದ ವೈದಿಕರು ರೂಪಿಸಿದ ಜಾತಿ ಪದ್ದತಿ ಬೆಳೆಸಿಕೊಂಡು ಬಂದಿರುವ ಅಸಮಾನತೆಯನ್ನು ನಾಶಮಾಡಲು, ಎಲ್ಲ ಕ್ಷೇತ್ರಗಳಲ್ಲಿಯೂ ಇದುವರೆಗೂ ಭಾಗವಹಿಸದೆ ವಂಚಿತರಾಗಿರುವ ಹಿಂದುಳಿದ ವರ್ಗಗಳಿಗೆ ಎಲ್ಲ ಕ್ಷೇತ್ರಗಳಲ್ಲಿಯೂ ಅವಕಾಶಗಳನ್ನು ಮೀಸಲಿಡಬೇಕೆಂದು ಒತ್ತಾಯ ಮತ್ತು ಚಳುವಳಿಗಳು ನಡೆಯುತ್ತಲೇ ಬಂದಿವೆ.

ಈ ಚಳುವಳಿಗಳ ವಿರುದ್ಧ ಚಳುವಳಿಗಳೂ ಆಗಾಗ್ಗೆ ಕಾಣಿಸಿಕೊಳ್ಳುತ್ತಿವೆ. ಇತ್ತೀಚೆಗೆ ಇಂತಹ ಮೀಸಲಾತಿ ವಿರೋಧಿ ಚಳುವಳಿ ಗುಜರಾತ್, ಬಿಹಾರ ಮತ್ತು ಮಧ್ಯಪ್ರದೇಶಗಳಲ್ಲಿ ಕಾಣಿಸಿಕೊಂಡಿದೆ. ಮೀಸಲಾತಿ ನೀತಿಯಿಂದಾಗಿ ದೇಶದಲ್ಲಿ ಸಾಮರ್ಥ್ಯ ಮತ್ತು ದಕ್ಷತೆ [ಮೆರಿಟ್]ಗೆ ಧಕ್ಕೆ ಬರುತ್ತದೆ ಎನ್ನುವ ವಾದ ಈ ಮೀಸಲಾತಿ ವಿರೋಧಿಗಳ ಮುಖ್ಯವಾದ ವಾದಗಳಲ್ಲಿ ಪ್ರಮುಖವಾದುದು.

ಸಾಂಪ್ರದಾಯಿಕವಾಗಿ ಹುಟ್ಟಿನಿಂದಲೇ ಉತ್ತಮರೆಂದು ತಾವೆ ಘೋಷಿಸಿಕೊಳ್ಳುವ ಈ ವೈದಿಕರುಗಳಿಗೆ ತಾವು ಸಮರ್ಥರು ಎನ್ನುವ ಭ್ರಮೆಯೊಂದಿಗೆ. ಈ ಭ್ರಮೆಯ ನಡುವೆ, ಭಾರತ ದೇಶ ಹೊರಗಿನಿಂದ ಯಾವುದೇ ಆಕ್ರಮಣಕಾರರು ಬಂದಾಗಲೂ ಅವರೆದುರು ಸೋತು ಸುಣ್ಣವಾದ ಅದಕ್ಷತೆಗೆ, ಅಸಾಮರ್ಥ್ಯಕ್ಕೆ ಕಾರಣಗಳೇನೆಂಬುದು ಈ ವೈದಿಕರುಗಳಿಗೆ ಗೊತ್ತಾಗುವುದಿಲ್ಲ. ಇಷ್ಟೊಂದು ಜನಶಕ್ತಿಯಿದ್ದರೂ ಏಕೆ ಅರೆ ಹೊಟ್ಟೆಯ ಮೂರನೆ ದರ್ಜೆಯ ದೇಶವಾಗಿದ್ದೇವೆ ಎನ್ನುವುದಕ್ಕೂ ಕಾರಣಗಳು ಈ ವೈದಿಕರುಗಳಿಗೆ ಗೊತ್ತಾಗುವುದಿಲ್ಲ.

ರಾಜಕೀಯವಾಗಿ ಮತ್ತು ಆರ್ಥಿಕವಾಗಿ ನಾವು ಇಷ್ಟೊಂದು ದುರ್ಬಲರಾಗುತ್ತಿರುವುದಕ್ಕೆ ಕಾರಣವೇ ಈ ವೈದಿಕಶಾಹಿಗಳು ಪ್ರತಿಪಾದಿಸುತ್ತಿರುವ ಜಾತಿ ಪದ್ದತಿ. ಸಾವಿರಾರು ವರ್ಷಗಳಿಂದ ಹುಟ್ಟಿನ ಕಾರಣಕ್ಕಾಗಿಯೇ ಸೀಮಿತ ಉದ್ಯೋಗಗಳನ್ನು ಮಾಡಿಕೊಂಡು ಬಂದು ನಾವೆಲ್ಲರೂ ಸೀಮಿತ ಸಾಮರ್ಥ್ಯದ ವ್ಯಕ್ತಿಗಳಾಗಿದ್ದೇವೆ. ಸೀಮಿತ ಸಾಮರ್ಥ್ಯದ ಗುಂಪುಗಳಾಗಿದ್ದೇವೆ. ಸೀಮಿತ ಸಾಮರ್ಥ್ಯದ ಜಾತಿಗಳಾಗಿದ್ದೇವೆ.

ಈ ಕಾರಣದಿಂದಾಗಿ ಯುದ್ಧಕ್ಕೆ ತರಬೇತಿ ಪಡೆದ ಕೆಲವೇ ಕ್ಷತ್ರಿಯರು ಹೋರಾಡುತ್ತಿದ್ದಾಗ ಮಿಕ್ಕವರೆಲ್ಲ ದೂರ ನಿಂತು ನೋಡುವ ವೀಕ್ಷಕರಾದದ್ದು, ಭಾರತ ಹೊರಗಿನ ಆಕ್ರಮಣಕಾರರಿಗೆ ಸೋಲುತ್ತಿದ್ದರೂ ಏನನ್ನೂ ಮಾಡಲಾಗದೆ ಮಿಕ್ಕ ಜಾತಿಯವರೆಲ್ಲ ಮೌನ ಪೇಕ್ಷಕರಾಗಿದ್ದವರು ನಾವು.

ಕೆಲವೇ ಕ್ಷೇತ್ರಗಳಲ್ಲಿ ಉತ್ಪಾದನೆ ಮಾಡಿದ ನಾವು ಬೇರೆ ಕ್ಷೇತ್ರಗಳಲ್ಲಿ ಸಾಮರ್ಥ್ಯ ಬೆಳೆಸಿಕೊಳ್ಳಲು ಸಾಧ್ಯವಾಗದೆ, ಉತ್ಪಾದನೆ ಒಂದು ಮಟ್ಟಕ್ಕೆ ತಲುಪಿ, ಸ್ಥಗಿತವಾಗಿ, ಬಡತನ, ದಾರಿದ್ರ್ಯ ದಿನೇ ದಿನೇ ಹೆಚ್ಚಾಗಲೂ ಇರುವ ಕಾರಣವೂ ಜಾತಿ ಪದ್ದತಿಯೇ.

ಸಾವಿರಾರು ವರ್ಷಗಳು ಈ ರೀತಿ ಸೀಮಿತ ಕ್ಷೇತ್ರಗಳಲ್ಲಿ ಕೆಲಸ ಮಾಡಿ ನಾವು ಒಂದು ವಕ್ರ ಸಮಾಜವಾಗಿ ರೂಪುಗೊಂಡಿದ್ದೇವೆ.

ಭಾರತದಲ್ಲಿಂದು ಎರಡು ರೀತಿಯ ಮಕ್ಕಳು ಹುಟ್ಟುತ್ತವೆ. ಒಂದಕ್ಕೆ ತಲೆ ಮಾತ್ರ ಬೆಳೆದು ಕೈಕಾಲು ಸಣಕಲಾಗಿವೆ. ಮತ್ತೊಂದಕ್ಕೆ ಕೈಕಾಲುಗಳು ಮಾತ್ರ ಬೆಳೆದು ತಲೆ ಗುಲಗಂಜಿಯಾಗಿದೆ. ಭಾರತದಲ್ಲಿ ಈಗಿರುವ ಸಾಮರ್ಥ್ಯ ಇಂತಹ ಎರಡು ರೀತಿಯ ವಕ್ರ ಶಿಶುಗಳಿಂದ ಪ್ರದರ್ಶಿತವಾಗಬಹುದಾದ ಸಾಮರ್ಥ್ಯ.

ಈ ಕಾರಣದಿಂದಲೇ ನಾವು ಹಾರಿಸಿದ ಕ್ಷಿಪಣಿ ವೈಜ್ಞಾನಿಕ ದೋಷದಿಂದ ಕೆಟ್ಟರೆ ಮಂಗಳಾರತಿ ಮಾಡಿ ದೇವರನ್ನು ಪ್ರಾರ್ಥಿಸುವಂತಹ ವಿಜ್ಞಾನಿಗಳನ್ನು ಹೊಂದಿರುವುದು. ಇಂತಹವರೇ ದಕ್ಷರೆಂದು ಎಲ್ಲ ಕ್ಷೇತ್ರಗಳನ್ನೂ ಇವರಿಗೆ ಬಿಟ್ಟರೆ ದೇಶದ ಸ್ಥಿತಿ ಏನಾಗಬಹುದು ಎನ್ನುವುದನ್ನು ಯಾರಾದರೂ ಊಹಿಸಿಕೊಳ್ಳಬಹುದು.

ದೇಶವನ್ನು ಪೂರ್ಣವಾಗಿ ಸಮರ್ಥವನ್ನಾಗಿ ಮಾಡಬೇಕಾದರೆ, ಈ ಕೈಕಾಲೇ ಇಲ್ಲದ ಶಿಶುಗಳಿಗೆ ಕೈಕಾಲುಗಳನ್ನು ಬಳಸಬೇಕಾಗುವ ಕ್ಷೇತ್ರಗಳಲ್ಲಿ ಕೆಲಸ ಮಾಡಿಸಬೇಕು. ಈ ಗುಲಗಂಜಿ ತಲೆಯ ಶಿಶುಗಳಿಗೆ ಮೆದುಳು ಬಳಸಬೇಕಾಗುವ ಕ್ಷೇತ್ರಗಳಲ್ಲಿ ಕೆಲಸ ಮಾಡಿಸಬೇಕು.


ಇಂತಹ ಅವಕಾಶಗಳನ್ನು ಕಲ್ಪಿಸಿ ಮೀಸಲಿಡುವ ಮೀಸಲಾತಿ ನೀತಿಯೇ ದೇಶದ ಎಲ್ಲ ವ್ಯಕ್ತಿಗಳನ್ನು ಸಮಗ್ರವಾಗಿ ದಕ್ಷರನ್ನಾಗಿ ಮಾಡಲೂ ಆ ಮೂಲಕ ಇಡೀ ಸಮಾಜವನ್ನೇ ಸಮರ್ಥವನ್ನಾಗಿ ಮಾಡಲು ಸಾಧ್ಯ.

ಇಂತಹ ಅವಶ್ಯ ಕಾರ್ಯಕ್ರಮವನ್ನು ವಿರೋಧಿಸುವವರು ಅವಿವೇಕಿಗಳಷ್ಟೇ ಅಲ್ಲ, ಇವರೆಲ್ಲ ಸಮಾಜದ್ರೋಹಿಗಳು ಮತ್ತು ದೇಶದ್ರೋಹಿಗಳು.

ಹಟ್ಟಿ–ಕಟ್ಟೆ ಒಕ್ಕೂಟ ಎಂಬ ಜಲದ ಕಣ್ಣು

'ಹಟ್ಟಿ–ಕಟ್ಟೆ ಒಕ್ಕೂಟ' ಎಂಬ ಸಾಂಸ್ಕೃತಿಕ ವೇದಿಕೆಯ ಕೆಳಗೆ ದೇಶೀ ಸಾಂಸ್ಕೃತಿಕ ವೀರರನ್ನು ಕುರಿತು, ಸಾವಯವ ಸಹಜ ಕೃಷಿಯನ್ನು ಕುರಿತು, ಜಾನಪದ ಕಾವ್ಯಗಳನ್ನು ಕುರಿತು, ದಲಿತ–ರೈತ ಮತ್ತು ಸ್ತ್ರೀಯನ್ನು ಕುರಿತು ಅಪ್ಪಟ ದೇಶೀ ಶೈಲಿಯಲ್ಲಿಯೇ ಶಿಬಿರವನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದ್ದರಿಂದ, ಆ ತೀರ್ಮಾನದಂತೆ ಸಿದ್ಧರಬೆಟ್ಟದ ಬುಡದಲ್ಲಿ ಹೊಂಗೆ ಮರಗಳ ಕೆಳಗೆ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು.

⌘ ವಡ್ಡಗೆರೆ ನಾಗರಾಜಯ್ಯ



ಭಾರತೀಯ ಸಾಮಾಜಿಕ ವ್ಯವಸ್ಥೆಯು ಮೇಲು–ಕೀಳುಗಳಿಂದ ಕೂಡಿದ ಜಾತಿ–ಉಪಜಾತಿ, ಪಂಗಡ–ಉಪಪಂಗಡ, ಮತ–ಪಂಥ ಭೇದಗಳ ಶ್ರೇಣೀಕರಣಕ್ಕೆ ಸಿಕ್ಕಿ ನಲುಗಿ ಹೋಗಿದೆ. ಇಂತಹ ಸಾಮಾಜಿಕ ಕುರೂಪ ನೇಯ್ಗೆಯು ದೇಶದ ಪ್ರಗತಿಗೆ ಅಡ್ಡಿಯಾಗಿ ಪರಿಣಮಿಸಿದೆ. ಎಲ್ಲಾ ಜಾತಿ ಸಮುದಾಯಗಳ ನಡುವೆ ಸಾಮಾಜಿಕ–ಆರ್ಥಿಕ ಸಮಾನತೆಗಳು ಸಾಧ್ಯವಾದಾಗ ಮಾತ್ರ ಸಮಾಜದ ಸರ್ವಾಂಗೀಣ ಪ್ರಗತಿ ಸಾಧ್ಯವೆಂಬುದು ಇಲ್ಲೀವರೆಗಿನ ಸಾಮಾಜಿಕ ಸುಧಾರಣಾ ಚಳುವಳಿಗಳಿಂದ ಮನದಟ್ಟಾಗಿದೆ.

ಸಾಮಾಜಿಕ ಶ್ರೇಣೀಕರಣದ ಮೇಲ್‌ತುದಿಯಲ್ಲಿರುವ ವಲಯಗಳು ಸಂಪತ್ತು, ಅಧಿಕಾರ ಮತ್ತು ಜ್ಞಾನದ ಫಲಾನುಭವಿಗಳಾಗಿದ್ದರೆ ಅದೇ ಸಾಮಾಜಿಕವಾಗಿ ಕೆಳಗಿರುವ ವಲಯಗಳು ಇವುಗಳಿಂದ ವಂಚಿತವಾಗಿ ಸಂತ್ರಸ್ತರಾಗಿ ನರಳುತ್ತಿದ್ದಾರೆ. ಶೋಷಿತ ವರ್ಗಗಳು ಪಟ್ಟಭದ್ರ ಬಲಾಢ್ಯರ ಕೈಯಲ್ಲಿ ಅನುಭವಿಸುತ್ತಿರುವ ದಮನ–ದೌರ್ಜನ್ಯಗಳಿಂದ ಪಾರಾಗಬೇಕಾದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕು. ಇಂತಹ ಬದಲಾವಣೆ ತರಲು ಹೋರಾಟ–ಸಂಘರ್ಷಗಳು ಅನಿವಾರ್ಯ.

ಪ್ರಸ್ತುತ ಲೇಖನದ ಮಟ್ಟಿಗೆ ಇಂತಹದ್ದೊಂದು ಕ್ರಾಂತಿಕಾರಿ ಬದಲಾವಣೆಗಾಗಿ ಗಾಢವಾಗಿ ಹಂಬಲಿಸುತ್ತಾ ಹಗಲಿರುಳು ಎಣಗುತ್ತಿರುವ ಪಶುವೈದ್ಯ ಡಾ. ರಘುಪತಿಯವರು ರೂಪಿಸುತ್ತಿರುವ ಸಾಮಾಜಿಕ ಸಂಘರ್ಷದ ಸ್ವರೂಪದ ಕಿರು ಎಳೆಯೊಂದನ್ನು ವಿವರಿಸಲು ಬಯಸುತ್ತೇನೆ. ಊರಾಚೆಯ ಡೇರೆ ಬಿಡಾರಗಳಲ್ಲಿ ಬದುಕುತ್ತಿರುವ ಅಲೆಮಾರಿ ದಕ್ಕಲಿಗರು ಮತ್ತಿತರ ಅಲಕ್ಷಿತ ಸಮುದಾಯಗಳ ಪಾಲಿಗೆ ಭರವಸೆಯ ಆಶಾಕಿರಣವಾಗಿ ಒದಗಿ ಬಂದಿರುವ ಡಾ. ರಘುಪತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಸರ್ಕಾರಿ ಪಶು ಆಸ್ಪತ್ರೆಯ ವೈದ್ಯಾಧಿಕಾರಿಯಾಗಿರುತ್ತಾರೆ. ಪಿ.ಲಂಕೇಶ್, ಕೆ.ರಾಮದಾಸ್, ಪ್ರೊ.ಬಿ.ಕೃಷ್ಣಪ್ಪ, ಪ್ರೊ.ಎಂ.ಡಿ.ನಂಜುಂಡಸ್ವಾಮಿ, ಕೋಟಿಗಾನಹಳ್ಳಿ ರಾಮಯ್ಯ, ಡಾ.ಸಿ.ಎಸ್. ದ್ವಾರಕಾನಾಥ್, ಡಾ.ಬಂಜಗೆರೆ ಜಯಪ್ರಕಾಶ್, ಮುಂತಾದವರೊಂದಿಗೆ ಜನಪರ ಹೋರಾಟಗಳಲ್ಲಿ ವಿದ್ಯಾರ್ಥಿ ದಿಸೆಯಿಂದಲೇ ತೊಡಗಿಕೊಂಡು ತಮ್ಮದೇ ಆದ ವಿಶಿಷ್ಟ ರೀತಿಯ ಹೋರಾಟದ ಉಪಕ್ರಮ ಗಳನ್ನು ಶೋಧಿಸತೊಡಗಿದ ಡಾ. ರಘುಪತಿ 'ಲಂಕೇಶ್ ವಿಶ್ವವಿದ್ಯಾಲಯ'ದಲ್ಲಿ ಮೂಡಿದ ಅರಿವಿನ ಕಿಡಿ!

ನನಗೂ ರಘುಪತಿಯವರಿಗೂ ಬಹುಕಾಲದ ಸ್ನೇಹದ ನಂಟು ಬೆಸೆದಿರುವ ಕಾರಣ ಅವರು ರೂಪಿಸುತ್ತಿರುವ ಚಳುವಳಿಗಳ ನಡಿಗೆ ಮತ್ತು ಸ್ವರೂಪಗಳನ್ನು ಕುತೂಹಲದಿಂದ ಗಮನಿಸುತ್ತಾ, ಅವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಜತೆಗೂಡಿ ನನ್ನ ಹೆಜ್ಜೆ ಗುರುತುಗಳನ್ನೂ ಮೂಡಿಸುತ್ತಾ ಸಾಗುತ್ತಿದ್ದೇನೆ. ಚಿಕ್ಕನಾಯಕನಹಳ್ಳಿ ದಕ್ಕಲಿಗರಿಗೆ ನಿವೇಶನ ಮಂಜೂರು ಮಾಡಿಸಲು ಹೋಗಿ, ಪೊಲೀಸ್ ಕೇಸುಗಳು ಸೇರಿದಂತೆ ಅನೇಕ ರೇಜಿಗೆಗಳನ್ನು ಮೈಮೇಲೆ ಎಳೆದುಕೊಂಡದ್ದು ಒಂದು ಪ್ರತ್ಯೇಕ ಅಧ್ಯಾಯವೇ ಆಗುತ್ತದೆ.

ಡಾ. ರಘುಪತಿಯವರ ವಿಶಿಷ್ಟ ಪಯಣದ ಪಾದ ಗುರುತು ಮೂಡಲು ಪ್ರಾರಂಭವಾದದ್ದು ದಲಿತ ಚಳುವಳಿಯ ವಿಘಟನೆಯ ನಂತರದ ದಿನಗಳಲ್ಲಿ. ದಲಿತ ಸಂಘರ್ಷ ಸಮಿತಿಯು ಜಾತಿ ನಾಯಕತ್ವ ಮತ್ತು ವ್ಯಕ್ತಿ ಹಿತಾಸಕ್ತಿಗಳಲ್ಲಿ ಸೀಳಿಹೋದ ನಂತರದಲ್ಲಿ ಕೋಟಿಗಾನಹಳ್ಳಿ ರಾಮಯ್ಯನವರು ಎಳೆಯ ಮಕ್ಕಳ ಪುಟ್ಟಪಾದಗಳಿಗೆ ಮರೆಬಿದ್ದರು. ನೆಲ ಸಂಸ್ಕೃತಿಯ ಪೂರ್ವಿಕ ಜಲಪಾದಗಳ ನೆಲಗುರುತುಗಳನ್ನು ಹುಡುಕಿ ಮರೆತದಾರಿಗಳ ಮೇಲೆ ದೀರ್ಘ ಪಯಣವನ್ನೇ ಆರಂಭಿಸಿದರು.

ಡಾ. ರಘುಪತಿಯವರ ಧ್ಯಾನಕ್ಕೆ ಅಸ್ಪಷ್ಟ ಆಕಾರ ದೊರೆಯಲು ಪ್ರಾರಂಭವಾದದ್ದು

ನಾವು ದೇಶೀ ಸಾಂಸ್ಕೃತಿಕ ವೀರರ ಹೆಸರುಗಳಲ್ಲಿ ನಡೆಯುತ್ತಿರುವ ಮೈಲಾರಲಿಂಗನ ಜಾತ್ರೆ, ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ, ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆ ಎಂದು ಜಾತ್ರೆಗಳಿಗೆ ಹೋಗತೊಡಗಿದ ದಿನಗಳಲ್ಲಿಯೇ ಅನ್ನಿಸುತ್ತದೆ. ಆಳುವ ವರ್ಗಗಳ ಯಾಜ್ಯಮಾನ್ಯವನ್ನು ಮತ್ತು ಅವುಗಳು ಕಟ್ಟಿದ ಕುರೂಪ ಸಾಮಾಜಿಕ-ಆರ್ಥಿಕ ರಚನೆಗಳನ್ನು ಸ್ಫೋಟಿಸುವ ದಾರಿಯಲ್ಲಿ ತಳಸಮುದಾಯಗಳು ನಡೆಸುವ ಈ ಜಾತ್ರೆಗಳು ಯಾವುದೇ ಜನಪರ ಚಳುವಳಿಗಿಂತಲೂ ಪರಿಣಾಮಕಾರಿಯಾದ ಫಲಗಳನ್ನು ನೀಡಬಲ್ಲವು. ಕೆಳಜಾತಿಗಳನ್ನು ಸಾಮಾಜಿಕವಾಗಿ ವಿಮೋಚಿಸಲು ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸಲು ಹಾಗೂ ಸಂಪತ್ತು ಮತ್ತು ಅಧಿಕಾರ ರಚನೆಗಳನ್ನು ವಿಕೇಂದ್ರೀಕರಿಸಲು ಮಂಟೇಸ್ವಾಮಿ, ಮಲೆಮಹದೇಶ್ವರ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮೈಲಾರಲಿಂಗ, ಎತ್ತಪ್ಪ-ಜುಂಜಪ್ಪ ಮುಂತಾದ ದೇಶೀ ಸಾಂಸ್ಕೃತಿಕ ವೀರರು ನಡೆಸಿದ ಆಧ್ಯಾತ್ಮಿಕ ದಂಗೆಗಳು ತಳಸಮುದಾಯಗಳಿಗೆ ಸಾಂಸ್ಕೃತಿಕ ಘನತೆಯನ್ನು ತಂದುಕೊಟ್ಟಿದ್ದು ಸಾಮಾಜಿಕ ಬದಲಾವಣೆಯ ನಿಟ್ಟಿನಲ್ಲಿ ಒಂದು ಕ್ರಾಂತಿಕಾರಿ ಬೆಳವಣಿಗೆ.

ಗೋವಳಿಗ ಸಮುದಾಯಗಳ 'ಜೀವಧನ'ದ ಆರ್ಥಿಕತೆ; ಹಾಲು, ಮಾಂಸ, ತುಪ್ಪಟ ಮತ್ತು ಗೊಬ್ಬರಗಳನ್ನು ಅವಲಂಬಿಸಿದ ಆರ್ಥಿಕತೆ, ಕುಶಲಕರ್ಮಿಗಳ ಆರ್ಥಿಕತೆ; ಕುಂಬಾರಿಕೆ, ಕಮ್ಮಾರಿಕೆ, ಚಮ್ಮಾರಿಕೆ, ಮರಗೆಲಸ ಮುಂತಾದ ಕೈಕಸುಬುಗಳನ್ನು ಅವಲಂಬಿಸಿದ ಆರ್ಥಿಕತೆ, ರೈತಾಪಿ ನೆಲ-ಜಲದ ಆರ್ಥಿಕತೆ ಹಾಗೂ ರಟ್ಟೆಯ ಶಕ್ತಿಯನ್ನು ನೆಚ್ಚಿದ ಬೆವರಿನ ಆರ್ಥಿಕತೆಗಳೊಂದಿಗೇ ಸಾಮಾಜಿಕ ಸಮಾನತೆಗಾಗಿ ನಡೆಸಬೇಕಾದ ಪ್ರಯತ್ನಗಳು ಇನ್ನು ಮುಂದೆ ಯಾವ ಬಗೆಯಲ್ಲಿ ಇರಬೇಕೆಂಬುದನ್ನು ಕುರಿತು ಆ ಜಾತ್ರೆಗಳಲ್ಲಿ ನಾವು ಯೋಚಿಸತೊಡಗಿದೆವು.

'ಹಟ್ಟಿ-ಕಟ್ಟೆ ಒಕ್ಕೂಟ' ಎಂಬ ಸಾಂಸ್ಕೃತಿಕ ವೇದಿಕೆಯ ಕೆಳಗೆ ದೇಶೀ ಸಾಂಸ್ಕೃತಿಕ ವೀರರನ್ನು ಕುರಿತು, ಸಾವಯವ ಸಹಜ ಕೃಷಿಯನ್ನು ಕುರಿತು, ಜಾನಪದ ಕಾವ್ಯಗಳನ್ನು ಕುರಿತು, ದಲಿತ-ರೈತ ಮತ್ತು ಸ್ತ್ರೀಯನ್ನು ಕುರಿತು ಅಪ್ಪಟ ದೇಶೀ ಶೈಲಿಯಲ್ಲಿಯೇ ಶಿಬಿರವನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದ್ದರಿಂದ, ಆ ತೀರ್ಮಾನದಂತೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಸಿದ್ದರಬೆಟ್ಟದ ಬುಡದಲ್ಲಿ ಹೊಂಗೆ ಮರಗಳ ಕೆಳಗೆ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು. ಡಾ. ರಘುಪತಿ, ಅನಂತ್ ಮತ್ತು ಕುರಿಗಾರ ಸಿದ್ದಣನವರು ವಾರಕಾಲ ಸುತ್ತಾಟ ನಡೆಸಿ ಈ ಜಾಗವನ್ನು ತೀರ್ಮಾನಿಸಿದ್ದರು.

ಅಂದಿನ ಶಿಬಿರ ಮತ್ತು ವಿಚಾರ ಸಂಕಿರಣದಲ್ಲಿ ಮುಖ್ಯವಾಗಿ ಹಳ್ಳಿಯ ರೈತಾಪಿಗಳು, ಕುರಿಗಾರರು, ಕೃಷಿಕೂಲಿಗಳು, ಜಾನಪದ ಕಲಾವಿದರು, ಕುಶಲಕರ್ಮಿಗಳು, ಜನಪದ ಕವಿಗಳು, ಹಳ್ಳಿಗಾಡಿನ ಯುವಕರು-ಹೆಂಗಸರು, ತತ್ವಪದಕಾರರು ಒಟ್ಟಾರೆಯಾಗಿ ಸ್ಥಳೀಯ ತಳವಂದಿಗರೇ ಸಂಪನ್ಮೂಲ ವ್ಯಕ್ತಿಗಳಾಗಿ ತಮ್ಮ ಲೋಕಾನುಭವಗಳನ್ನು ಸಂವಾದ ರೂಪದಲ್ಲಿ ಮಂಡಿಸಿದರು. ಅಕಾಡೆಮಿಕ್ ಪರಿಭಾಷೆ, ಪೆನ್ನು, ಪೇಪರ್‌ಗಳನ್ನೆಲ್ಲಾ ಎರಡು ದಿನ ಬದಿಗಿರಿಸಿ ಕೇವಲ ಅನುಭವಗಳನ್ನು ಮಾತ್ರ ಹಂಚಿಕೊಳ್ಳುವ ಹೊಸರೀತಿಯ ವಿಚಾರ ಸಂಕಿರಣವಾಗಿ ಅದು ಸುತ್ತಲೂ ಮನೆ ಮಾತಾಯಿತು.


ಒಂದು ದಿನ ರಾತ್ರಿ ಕೋಲಾರದ ಆದಿಮಕ್ಕೆ ನನ್ನೊಂದಿಗೆ ಡಾ. ರಘುಪತಿ, ಕೂನಿಕೆರೆ ರಾಮಣ್ಣ, ಕಸವನಹಳ್ಳಿ ಶಿವಣ್ಣ, ಕಾಮ್ರೇಡ್ ಅನಂತ್ ಹೋದೆವು. ಅಂದು 'ಉಣ್ಣಿಮೆ ಹಾಡು' ಕಾರ್ಯಕ್ರಮ ಇರದ ರಾತ್ರಿ, ನಾವೆಲ್ಲರೂ 'ಆದಿಮ'ದ ನೆಲಸಂಸ್ಕೃತಿಯ ನಡೆಯ ಹೆಜ್ಜೆಗುರುತುಗಳಲ್ಲಿ ಪುರಾತನರ ಅರಿವಿನ ಕಣ್ಬೆಳಕು ಇರುವುದನ್ನು ಕಂಡುಕೊಂಡೆವು. ಈ ಕಣ್ಬೆಳಕಿನಲ್ಲಿ ಡಾ. ರಘುಪತಿಯವರಿಗೆ ಪೂರ್ವಿಕರ ದೇಶಿ ಸಂಸ್ಕೃತಿಯ ನೆಲಗುರುತುಗಳು ಕಂಡು, ಕೋಟಿಗಾನಹಳ್ಳಿ ರಾಮಯ್ಯನವರಲ್ಲಿ ಮಲೆಮಹದೇಶ್ವರನೋ ಮಂಟೇಸ್ವಾಮಿಯೋ ಎದೆಗೂಡಿನಲ್ಲಿ ನಿಂತಿರುವುದರಿಂದಲೇ ಇಲ್ಲಿ ಬೆಟ್ಟದ ಮೇಲೆ 'ಆದಿಮ' ಎಂಬುದು ರೂಪುಗೊಳ್ಳಲು ಸಾಧ್ಯವಾಗಿದೆ ಎಂದು ಬಲು ಬೆರಗಿನಿಂದ ನಮ್ಮೊಡನೆ ಹೇಳಿಕೊಂಡರು.

ಆದಿಮದಿಂದ ಮರಳಿ ಬಂದ ಡಾ. ರಘುಪತಿ ಯೋಚಿಸಿದ ರೀತಿ ಬೇರೆಯದೇ ಆಗಿತ್ತು. 'ಆದಿಮ'ದಲ್ಲಿ ಎಳೆ ಮಕ್ಕಳು ಸೇರಿದಂತೆ ನಮ್ಮೂರ ಕಡೆ ದೊಡ್ಡವರನ್ನು ಸೇರಿಸಿ ಹುಣ್ಣಿಮೆ ರಾತ್ರಿಗಳಲ್ಲಿ 'ಬೆಳದಿಂಗಳ ಬುತ್ತಿ' ಕಾರ್ಯಕ್ರಮದ ಹೆಸರಿನಲ್ಲಿ ಎಲ್ಲರೂ ಒಟ್ಟಿಗೆ ಉಂಡು-ತಿಂದು-ಹಾಡಿ-ಕುಣಿದು ಕುಪ್ಪಳಿಸುವಂತೆ ಮಾಡಲು ಸಾಧ್ಯವಿಲ್ಲವೆ? ಎಂದು ಯೋಚಿಸಿದರು. ಹಟ್ಟಿ-ಕಟ್ಟೆ ಒಕ್ಕೂಟದ ಶೋಧನೆಯೊಂದಿಗೆ ಪ್ರಾರಂಭವಾದ ದೇಶೀ ಹುಡುಕಾಟ 'ದನಿ ಮಂಟಪ'ದ ರೂಪಿನಲ್ಲಿ 'ಬೆಳದಿಂಗಳ ಬುತ್ತಿ' ಬಿಚ್ಚಿ ಮಾತುಕತೆ -ಹಾಡು ಹಬ್ಬವಾಗಿ ಸಮುದಾಯದೆಡೆಗೆ ನಮ್ಮ ನಡಿಗೆ ಪ್ರಾರಂಭವಾಯಿತು. ಅತ್ತ ಕೋಟಿಗಾನಹಳ್ಳಿ ರಾಮಯ್ಯನವರು ಪುಟ್ಟ ಪಾದಗಳ ಪಯಣ ಪ್ರಾರಂಭಿಸಿದ್ದರೆ, ಇತ್ತ ನಾವು ದೊಡ್ಡ ಪಾದಗಳಿಗೆ ಜೀವನಿಲ್ದಾಣ ನಿರ್ಮಿಸುತ್ತಲೇ ಎಳೆಯ ಕಣ್ಣುಗಳಿಗೆ 'ಆದಿಮ'ದ ಕಡೆಗೆ ಕೈ ತೋರಿಸುತ್ತಾ 'ಕೈಮರ'ವಾಗಿ ನಿಂತುಕೊಂಡಿದ್ದೆವು.

'ಹಟ್ಟಿ-ಕಟ್ಟೆ ಒಕ್ಕೂಟ' ಪ್ರಾರಂಭವಾದಾಗ ನಮ್ಮೊಂದಿಗೆ ಕೈ ಜೋಡಿಸದೆ ದೂರ ನಿಂತಿದ್ದ ಬಿಳಿಗೆರೆ ಕೃಷ್ಣಮೂರ್ತಿ, ಎಸ್ ಗಂಗಾಧರಯ್ಯ, ಎನ್.ಕೆ. ಹನುಮಂತಯ್ಯ ಮುಂತಾದ ಕವಿ ಗೆಳೆಯರು 'ಸಕಲ' ಎಂಬ ಸಂಘಟನೆಯನ್ನು ಜೂನ್ 2006ರಲ್ಲಿ ಆರಂಭಿಸಿ ನಮ್ಮೊಳಗಿನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ತುಡಿತಗಳಿಗೆ ಖಚಿತ ನೆಲೆ ಕಂಡುಕೊಳ್ಳಬೇಕೆಂಬ ಇರಾದೆಯಿಂದ ಪ್ರಸ್ತುತ ಕಾಲದ ಸವಾಲುಗಳಿಗೆ ಮುಖಾಮುಖಿಯಾಗಲು ನಮ್ಮ ಮೇಲೆ ನಾವೇ ಹಲವಾರು ಪ್ರಯೋಗಗಳನ್ನು ನಡೆಸಿಕೊಳ್ಳಬೇಕೆಂದು ಬಯಸಿ ದಿ: 18-06-2006ರಂದು ಕವಿ ಎನ್.ಕೆ.ಹನುಮಂತಯ್ಯನವರ ಮನೆ ನಂ.389, ಶಾರದಾನಗರ ತಿಪಟೂರು ಇಲ್ಲಿ ಸಭೆ ಕರೆಯಲಾಗಿತ್ತು. 'ದುಡಿಮೆ -ಅಧ್ಯಯನ-ಆನಂದ' ಎಂಬ ಧ್ಯೇಯ ದೊಂದಿಗೆ ಪ್ರಾರಂಭವಾದ ಸಂಘಟನೆ ಆರಂಭದ ದಿನವೇ ಚರಮಗೀತೆಯನ್ನೂ ಹಾಡಿ ಕರಪತ್ರದಲ್ಲಿಯೇ ಅಸುನೀಗಿತು.ಹೀಗೆ 'ಸಕಲ' ರೂಪು ತಳೆಯದೇ ಹೋದಾಗ ಎನ್ಕೆ, ಎಸ್. ಗಂಗಾಧರಯ್ಯ,ಚಿಟ್ಟೆ ಸತೀಶ್,ಸೂರ್ಯ ಪ್ರಕಾಶ್ ಕೋಲಿ ಮುಂತಾದವರು ನಮ್ಮ ಹಟ್ಟಿ-ಕಟ್ಟೆ ಒಕ್ಕೂಟದ ಟಿಸಿಲಾದ 'ದನಿ ಮಂಟಪ'ದೊಂದಿಗೆ ಗುರುತಿಸಿಕೊಂಡು ಡಾ.ರಘುಪತಿಯವರೊಂದಿಗೆ ಸ್ನೇಹದ ನಂಟನ್ನು ಬೆಸೆದುಕೊಂಡರು.

ಒಂದು ರಾತ್ರಿ ನಾವೆಲ್ಲಾ ಶನಿವಾರ ರಾತ್ರಿ ಚಿಕ್ಕನಾಯಕನಹಳ್ಳಿಯ ಭರಣಾಪುರ ಗ್ರಾಮದಲ್ಲಿ ಸಿದ್ದರಾಮ ಮತ್ತು ಹರಳಯ್ಯ ಎಂಬ ಕಾಯಕ ಜೀವಿಗಳ ನೆನಪಿನಲ್ಲಿ 'ಬೆಳದಿಂಗಳ ಬುತ್ತಿ' ಕಾರ್ಯಕ್ರಮ ಆಯೋಜಿಸಲಾಯಿತು. ಊರಿನ ಜಾತಿ ಜನವರ್ಗಗಳು ಒಂದೆಡೆ ಸೇರಿ ಅಡುಗೆ ಬೇಯಿಸಿ ಸಹಪಂಕ್ತಿ ಭೋಜನ ಮಾಡಿ ಯಾವುದೇ ಜಾತಿ ಭೇದಗಳನ್ನು ವೈರಭಾವನೆಗಳನ್ನು ತೋರದೆ ಎಲ್ಲರೂ ಒಂದಾಗಿ ಸೇರಿ ಮಾತುಕತೆ-ಹಾಡು ಹಬ್ಬ ನಡೆಸುವುದು ಹಾಗೂ ಇಡೀ ಸಮುದಾಯ ತನ್ನೊಳಗಿನ ಭೇಧಗಳನ್ನು ಕರಗಿಸಿ ನಿರ್ಮಲ ಕಾಲವನ್ನು ನಿರ್ಮಿಸುವುದೇ ಬೆಳದಿಂಗಳ ಬುತ್ತಿಯ ಜೀವಪರ ಆಶಯ. ವಡ್ಡಗೆರೆ ನಾಗರಾಜಯ್ಯ ಮತ್ತು ವೆಂಕಟಾಪು ಸತ್ಯಂರವರು ಅಂದಿನ ಕಾರ್ಯಕ್ರಮದ ಮುಖ್ಯ ಸಂವಾದಕರಾಗಿದ್ದರು. ಅಂದು ಕರಿಯ ಜಾಲಿ ಕೊರಡಿನಂತೆ ನನ್ನೆದುರು ಕುಳಿತು ಬೆಳದಿಂಗಳ ಹಾಲುನಗೆ ನಗುತ್ತಾ ಸಂವಾದಕ್ಕೆ ಕಳೆ ತಂದ ಕವಿ ಗೆಳೆಯ ಎನ್ಕೆ ಈಗ ಇಲ್ಲವೆಂಬ ಸಂಕಟ ನನ್ನನ್ನು ಬಾಧಿಸುತ್ತಿದೆ.

'ಕರ್ನಾಟಕದ ಅಲೆಮಾರಿ ಬುಡಕಟ್ಟು ಮಹಾಸಭಾ' ಸಂಘಟನೆಯ ಮೂಲಕ ಕರ್ನಾಟಕದ ಅಲೆಮಾರಿಗಳ ಪರ ಹಾಗೂ ದಕ್ಕಲಿಗರ ಸಾಮಾಜಿಕ ಹಕ್ಕು ಬಾಧ್ಯತೆಗಳ ಪರ ಹೋರಾಟವನ್ನು ರೂಪಿಸುತ್ತಿರುವ ಈ ಹೊತ್ತಿನಲ್ಲಿ ಡಾ. ರಘುಪತಿಯವರು ಡಾ.ಸಿ.ಎಸ್ ದ್ವಾರಕನಾಥ್, ಬಾಲಗುರುಮೂರ್ತಿ, ಬಾಲಕೃಷ್ಣ ರೇಣುಕೆ,ದಕ್ಕಲ ಶಾಂತರಾಜು ಮುಂತಾದವರೊಂದಿಗೆ ಹೇಗೋ ಹಾಗೆ ನನ್ನೊಂದಿಗೂ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಾ ಸಾಗುತ್ತಿದ್ದಾರೆ. ರಘುಪತಿ ಕೇವಲ ಸರ್ಕಾರಿ ನೌಕರ ಮಾತ್ರವಲ್ಲ; ಅಲಕ್ಷಿತ ಸಮುದಾಯಗಳ ಬೆಳಕು.



ಬರದ ಬೆವರು ಡೆವೆಲಪ್‌ಮೆಂಟ್ ಎಂಬ ಡಿಯೋಡರೆಂಟು..!

ಕೆಳಗೆ ಉಲ್ಲೇಖಿಸಲಾಗಿರುವ ಘಟನೆಗಳನ್ನು ಒಮ್ಮೆ ಓದಿ ನೋಡಿಕೊಳ್ಳಿ

1) ಕರ್ನಾಟಕದಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ. ಎಚ್ಚೆತ್ತ ಮುಖ್ಯಮಂತ್ರಿಯವರು "ಯುದ್ಧೋಪಾದಿಯಲ್ಲಿ ಕೆಲಸ ಮಾಡಿ, ಜನರಿಗೆ ನೀರು ಕೊಡಿ" ಎಂದು ವೀರ ಸೈನಿಕನಂತೆ ಅನೌನ್ಸ್ ಮಾಡಿ "ಎಚ್ಚೆತ್ತು" ಬಿಟ್ಟರು. ಪಕ್ಷದ ಆಂತರಿಕ ಕಚ್ಚಾಟಗಳಿದ್ದರೂ ಎಷ್ಟೊಂದು "ಜನಪ್ರೀತಿ"!

2) ಹೀಗೆ ಅನೌನ್ಸ್ ಮಾಡಿಹೋದ ಸಿಎಂ ಎರಡು ದಿನಗಳಲ್ಲೇ ದೆಹಲಿಯಲ್ಲಿ ರೋಡ್‌ಶೋ ಮಾಡಿದರು. ಇದು ಬರಪೀಡಿತ ಕರ್ನಾಟಕದ ಏಳಿಗೆಗಲ್ಲ. ಕರ್ನಾಟಕದ ಕೃಷಿಭೂಮಿಯನ್ನು, ಜಲಸಂಪನ್ಮೂಲಗಳನ್ನು ಬಂಡವಾಳಶಾಹಿಗಳಿಗೆ ಅಡವು ಇಡಲಿಕ್ಕಾಗಿ ! ಆಗ ಸಿಎಂ ಜೊತೆಗಿದ್ದ ಮಹಾಶಯನಾರು ಗೊತ್ತೆ? ಗದಗಿನ ಹಳ್ಳಿಕೇರಿ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಫಲವತ್ತಾದ ಕೃಷಿಭೂಮಿಯನ್ನು ಅದ್ಯಾವುದೋ ಪೊಸ್ಕೊ ಎಂಬ ಪರದೇಶಿ ಕಂಪನಿಯ ಒಡಲಿಗೆ ಹಾಕಿ ತನ್ನ ಜೋಳಿಗೆಯನ್ನು ತುಂಬಿಕೊಳ್ಳಲು ಯತ್ನಿಸಿ, ವಿಫಲನಾದರೂ ರೈತರ ವಿರುದ್ಧ ಜಿದ್ದು ಸಾಧಿಸುತ್ತಿರುವ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ.. ಈತ ಲಿಂಗಾಯತ, ಬಸವಣ್ಣ ಈತನ ಪಾಲಿಗೆ ನಗಣ್ಯ. ಅದಕ್ಕೇ ಈತ ಪೊಸ್ಕೊ ವಿರುದ್ಧ, ಕರ್ನಾಟಕದ ರೈತಾಪಿ ಜನರ ಪರ ನಿಂತ ಗದಗಿನ ಸಿದ್ದಲಿಂಗಸ್ವಾಮಿಗಳ ವಿರುದ್ಧ ತನ್ನ ಪಕ್ಷದ ಕೆಲವು ಚೇಲಾಗಳನ್ನು ಎದುರು ನಿಲ್ಲಿಸಲು ನೋಡಿದ. ಆದರೆ , ಹಳ್ಳಿಕೇರಿ ಸುತ್ತಮುತ್ತಲಿನ ರೈತಾಪಿ ಸಮುದಾಯ–ಎಲ್ಲಕ್ಕಿಂತ ಮುಖ್ಯವಾಗಿ, ಜಾತಿ–ಭೇದ ಮರೆತು ತಮ್ಮೂರುಗಳ ಸಮೃದ್ಧ ಭೂಮಿಗಳ ರಕ್ಷಣೆಗಾಗಿ, ಆ ಮೂಲಕ ತಮ್ಮ ಬದುಕುವ ಕ್ರಮಗಳ ಎಚ್ಚೆತ್ತ ಮಹಿಳಾ ರೈತರು ಮತ್ತು ಕೃಷಿಕಾರ್ಮಿಕರು–ಸೆಟೆದೆದ್ದು ನಿಂತ ನಂತರ ಈ ನಿರಾಣಿ ಎಂಬ ದಲ್ಲಾಳಿ, ಮತ್ತವರ 'ಸ್ವಾಮೀಜಿ' ಯಡಿಯೂರಪ್ಪ ಕುಂಡಿ ಸುಟ್ಟಿಕೊಂಡು ಸುಮ್ಮಗಾಗಿದ್ದರು. ಈಗದೇ ನಿರಾಣಿ ಸದಾನಂದಗೌಡರ ಪಕ್ಕ ನಿಂತುಕೊಂಡು ಮತ್ತೆ ಅಂಬಾನಿ, ಟಾಟಾ, ಮಿತ್ತಲ್, ಪೊಸ್ಕೊ ಎಂಬ ದರೋಡೆಕೋರರ ಮುಂದೆ ಅಂಗಲಾಚಿ ಕೇಳುತ್ತಾ ರೋಡ್‌ಶೋ ಮಾಡುತ್ತಿದ್ದಾರೆ.

3) ಇದೇ ಹೊತ್ತಲ್ಲೇ ಇವತ್ತು ಹಾವೇರಿಯಲ್ಲಿ ಟಾಟಾ ಮೆಟಾಲಿಕ್‌ಗೆ ಕಣ್ಣು ಮುಚ್ಚಿ ಸಾವಿರಾರು ಎಕರೆ ಕೃಷಿ ಭೂಮಿ ಮಾರುತ್ತಿರುವ ಈ ಸರ್ಕಾರದ ವಿರುದ್ಧ ಪ್ರತಿಭಟನೆ ತೀವ್ರಗೊಳ್ಳುತ್ತಿದೆ.

4) ಇದೇ ಮಾರ್ಚ್‌ನಲ್ಲಿ ಎಂದಿನಂತೆ ರಾಜ್ಯ ಸರ್ಕಾರ ಬಜೆಟ್ ಎಂಬ 'ನಕಲಿ' ಯೋಜನೆಯನ್ನು ಮಂಡನೆ ಮಾಡಲಿದೆ. ಕಳೆದ ವರ್ಷ ಮೊದಲ ಬಾರಿಗೆ ಕೃಷಿ ಬಜೆಟ್ ಮಂಡಿಸಿ ದಾಖಲೆ ಮಾಡಿದ್ದ ಸರ್ಕಾರ, ಅದನ್ನು ಬರೀ ದಾಖಲೆಗಳಲ್ಲಷ್ಟೇ ಮುಚ್ಚಿ ಹಾಕಿ ನಗೆಪಾಟಲೀಗಿಡಾಗಿದ್ದರೂ, ಈ ವರ್ಷ ಮತ್ತೆ ಕೃಷಿ ಬಜೆಟ್ ಮಂಡಿಸಲು ತಯ್ಯಾರಿ ನಡೆಸುತ್ತಿರುವೆ ಎಂದು ಉಗುಳು ಸುರಿಸಿದ ಸಿಎಂ ಸಾಹೇಬರು ಈಗ ದೆಹಲಿಯಲ್ಲಿ ಬಂಡವಾಳ ಹೂಡಿಕೆಗಾಗಿ ಅಂಗಲಾಚಿ, ಕರ್ನಾಟಕ್ಕೆ ವಾಪಸ್ ಆಗಿದ್ದಾರೆ. ಈಗವರ ಆದ್ಯತೆ ಉಡುಪಿ–ಚಿಕ್ಕಮಗಳೂರು ಎಂಪಿ ಚುನಾವಣೆಗೆ ಬೇಕಾಬಿಟ್ಟಿಯಾಗಿ ಹರಿಸಬೇಕಾದ 'ಬಜೆಟ್' ಅನ್ನು ಹೊಂದಿಸಿಕೊಳ್ಳುವುದೇ ಆಗಿದೆ.

5) ಮೊನ್ನೆ ತಾನೆ ಫೆಬ್ರುವರಿಯಲ್ಲಿ ಒಂದೇ ದಿನ ನಡೆದ ಈ ಘಟನೆಗಳನ್ನು ಗಮನಿಸಿ: ದೆಹಲಿಯಲ್ಲಿ ಸುಪ್ರಿಂಕೋರ್ಟಿನಲ್ಲಿ ವೀಶೇಷ ಅಹವಾಲು ಸಲ್ಲಿಸಿದ ರಾಜ್ಯ ಸರ್ಕಾರ, "ಗಣಿಗಾರಿಕೆಗೆ ಹೇರಿರುವ ನಿರ್ಬಂಧವನ್ನು ಕೂಡಲೇ ತೆಗೆದು ಹಾಕಿ. ಇದರಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತಿದೆ" ಎಂದು ಮನವಿಯನ್ನು ಸಲ್ಲಿಸಿತು! (ಬೆದರಿಕೆ ಹಾಕಿತೇನೋ, ಯಾರಿಗೊತ್ತು?).

ಅವತ್ತೇ ಬೆಂಗಳೂರಿನಲ್ಲಿ ಥಟ್ ಅಂತಾ ಬಾನಿನಿಂದ ಇಳಿದ ಕೆಲವು 'ನ್ಯಾಷನಲ್ ಲೆವೆಲ್' ಗಣಿ ಉದ್ಯಮಿಗಳು 'ಅಖಿಲ ಭಾರತ ಗಣಿ ಉದ್ಯಮಿಗಳ ಒಕ್ಕೂಟ' ಎಂಬ ಅನಾಮಿಕ ಬ್ಯಾನರಿನಡಿ ಪತ್ರಿಕಾಗೋಷ್ಠಿ ನಡೆಸಿ, "ಬಳ್ಳಾರಿ, ಚಿತ್ರದುರ್ಗಗಳಲ್ಲಿ ಗಣಿಗಾರಿಕೆಗೆ ನಿರ್ಬಂಧ ವಿಧಿಸಿದ್ದರಿಂದ ರಾಷ್ಟ್ರೀಯ ಸಂಪತ್ತಿನಲ್ಲಿ ನಷ್ಟವಾಗುತ್ತಿದೆ, ಕೂಡಲೇ ಅಲ್ಲೆ 'ನೆಲದಡಿಯ ಗಣಿಗಾರಿಕೆ'ಗೆ ಅನುಮತಿ ನೀಡಿ" ಎಂದು ಕೇಂದ್ರ, ರಾಜ್ಯ ಸರ್ಕಾರಗಳನ್ನು ಆಗ್ರಹಿಸಿ (ಎಚ್ಚರಿಸಿ!) ಸೊಯ್ಯಂತ ಗಣಿ ಧೂಳಿನ ವೇಗದಲ್ಲಿ ಆಕಾಶದ ಮಾರ್ಗದಲ್ಲಿ ಹಾರಿ ಹೋಗಿದೆ!

****

ಬಹುತೇಕ ಫೆಬ್ರುವರಿ ಮತ್ತು ಈ ಮಾರ್ಚ್‌ನ ಮೊದಲ ವಾರದಲ್ಲಿ ನಡೆದ ಘಟನಾವಳಿಗಳನ್ನು ಉಲ್ಲೇಖಿಸಿ ಮೇಲಿನ ಸಾಲುಗಳನ್ನು ಬರೆಯಲಾಗಿದೆ. ಆ ಸಾಲುಗಳ ಹಿಂದಿರುವ ಅರ್ಥಗಳು ತಿಳಿದರೆ, ಇಲ್ಲಿ ಪ್ರಭುತ್ವಗಳು (ಅಥವಾ/ಮತ್ತು ಸರ್ಕಾರಗಳು) ಜನರನ್ನು ಹೇಗೆ ಬೀದಿಪಾಲು ಮಾಡುತ್ತಿವೆ, ಈ ದೇಶದ


ಜನರ ಸಮಾಧಿಗಳ ಮೇಲೆ ಬಂಡವಾಳಶಾಹಿಗಳ ಸ್ವಾರ್ಥ,ಲಾಭಗಳ ಬೆಳೆಗಳನ್ನು ಬೆಳೆಯಲು ನೆರವು ನೀಡುತ್ತಿವೆ ಎಂಬುದು ಮನನವಾಗುತ್ತದೆ. ಇಲ್ಲಿ ಬಡವರಬರದ ಬೆವರ ಮುಚ್ಚಲು 'ಅಭಿವೃದ್ಧಿ' ಎಂಬ ಹೆಸರಿನ ಡಿಯೊಡ್ರಂಟನ್ನು ಸಿಂಪಡಿಸುವ ಮೂಲಕ ಲೂಟಿ ಮಾಡಲಾಗುತ್ತಿದೆ. ಇದರಲ್ಲಿ ಎಲ್ಲ ರಾಜಕೀಯ ಸಂಘಟನೆಗಳು ಮತ್ತು ಅವುಗಳ ಚೇಲಾ ಸಂಘಟನೆಗಳು ತಮ್ಮ ಪಾಲಿನ ಬಂಡವಾಳಶಾಹಿ ಎಂಜಲು ಅನ್ನವನ್ನು (ಅಲ್ಲಲ್ಲ, ಪಿಜ್ಜಾವನ್ನು) ಸೇವಿಸುತ್ತಲೇ ಇವೆ.

**

ಈಗ ಮತ್ತೆ ಬರದ ವಿಷಯಕ್ಕೆ ಬರೋಣ. ಈಗ ಬೇಸಿಗೆ ಶುರುವಾದ ಕೂಡಲಷ್ಟೇ ಸರ್ಕಾರಕ್ಕೆ ಎಚ್ಚರವಾಗಿಬಿಟ್ಟಿತಾ? 2011ರ ನೈರುತ್ಯ ಮಾನ್ಸೂನ್ ವಿಫಲವಾದಾಗಲೇ ಇದು ಅರಿವಾಗಬೇಕಿತ್ತು. ಆದರೆ ಅಧಿಕಾರ ದಾಹದಲ್ಲಿ ಮುಳುಗಿದ ಆಡಳಿತ ಪಕ್ಷಕ್ಕೆ ಇದು ಗೊತ್ತಾಗುವುದು ಸಾಧ್ಯವೇ? ಹೇಗಾದರೂ ಸೈ ಅಧಿಕಾರ ಸಿಕ್ಕರೆ ಸಾಕು ಎಂದು ಹೊಂಚು ಹಾಕಿಯೇ ಕೂಡುವ ವಿರೋಧ ಪಕ್ಷಗಳಿಗೂ ಇದು ಬೇಕಾಗಿರಲಿಲ್ಲ! ಈಗ ಆಡಳಿತ ಪಕ್ಷ, ವಿರೋಧ ಪಕ್ಷಗಳೆಲ್ಲ ಬರದ ಬಗ್ಗೆ ಮಾತಾಡುತ್ತಿವೆ.

2011ರ ನವಂಬರ್‌ನಲ್ಲೇ ರಾಜ್ಯದ ಕಂದಾಯ ಮತ್ತು ಕೃಷಿ ಇಲಾಖೆಗಳು "99 ತಾಲ್ಲೂಕುಗಳು ಬರಪೀಡಿತವಾಗಿವೆ, ತುರ್ತಾಗಿ ಪರಿಹಾರ ನಿಧಿ ಒದಗಿಸಿ" ಎಂದು ಕೇಂದ್ರ, ರಾಜ್ಯ ಸರ್ಕಾರಗಳಿಂದ ಬರಬೇಕಾದ ನಿಧಿಗೆ ಕಾಯ್ದವು. ಈಗಲೂ ಆ 99 ತಾಲೂಕುಗಳಲ್ಲಿ ಅದೇ ಪರಿಸ್ಥಿತಿ ಇದೆ. ಈಗ ಬರಪೀಡಿತ ತಾಲೂಕುಗಳ ಸಂಖ್ಯೆ 123.

ಗಡ್ಡಕ್ಕೆ ಬೆಂಕಿ ಹತ್ತಿಕೊಂಡಾಗ ಬಾವಿ ತೆರೆಯುವಂತೆ ದಿಢೀರ್ ಆಗಿ ಪರಿಹಾರ ಕಾರ್ಯಗಳಿಗಾಗಿ ನಿಲ್ಲುವುದರ ಹಿಂದಿನ ಮರ್ಮವಾದರೂ ಏನಿರುತ್ತದೆ? ಪರಿಹಾರ, ಅನುದಾನ ಎಂಬ ಡಿಯೊಡ್ರಂಟನ್ನು ಚಿಮುಕಿಸಿದಂತೆ ಮಾಡಿ, ಬೆವರ ವಾಸನೆಯ ಪ್ರತಿರೋಧವನ್ನು ಹೂತು ಹಾಕುವುದೇ ಆಗಿದೆ ಅಲ್ಲವೇ? ಪಿ. ಸಾಯಿನಾಥ್ ಹೇಳುವಂತೆ ಇದು "ಎವೆರಿಬಡಿ ಲವ್ಸ್ ಎ ಗುಡ್ ಡ್ರಾಟ್" ಅಲ್ಲವೇ? ಆದರೆ ಇದು ನಿಜವಾಗಿಯೂ ಅದಕ್ಕಿಂತ ಭೀಕರವಾದುದು ಎಂಬ ಅನುಭವ, ಈ ಬರಹದ ಆರಂಭಿಕ 'ಘಟನೆಗಳನ್ನು' ನೆನಪಿಸಿಕೊಂಡಾಗ ನಿಮಗಾಗಬಹುದು....



'ಬರ' ಎಂಬುದು ನೈಸರ್ಗಿಕ ವಿದ್ಯಮಾನ, ಅದನ್ನು ತಪ್ಪಿಸಲು ಅಸಾಧ್ಯ, ಪಾಪ ಸರ್ಕಾರಗಳೇನು ಮಾಡಿಯಾವು ಎಂಬ ಅನುಕಂಪ ತೋರುವವರೂ ಇರಬಹುದು. ಆದರೆ ವಸ್ತುಸ್ಥಿತಿ ಹಾಗಿಲ್ಲ. 'ಅಭಿವೃದ್ಧಿ' ಎಂಬ ಮೋಸದ ಮೂಲಕ ಇಲ್ಲಿ ಕೆಲವೇ ಕೆಲವು ಜನರ ಹಿತಾಸಕ್ತಿಯನ್ನು ಕಾಪಾಡುತ್ತಾ, ಅದಕ್ಕಾಗಿ ದಮನಿತರನ್ನು ಇನ್ನಷ್ಟು ತುಳಿಯಲಾಗುತ್ತಿದೆ. ಇದಕ್ಕೆ ಮೂಲಭೂತ ಕಾರಣಗಳಾಗಿರುವುದು ಜಾಗತೀಕರಣ, ಉದಾರೀಕರಣ, ಮುಕ್ತ ಮಾರುಕಟ್ಟೆ ನೀತಿಗಳು. ಇವು "ಬಹುಸಂಖ್ಯಾತ ಬಡವರ ಭಾರತದ ಮೇಲೆ, ಕೆಲವೇ ಕೆಲವು 'ಉಚ್ಛ ಜಾತಿಯವರಿಗೆ' ಮತ್ತು ಮೇಲ್ವರ್ಗದವರಿಗೆ ನೆರವು ನೀಡುತ್ತಿವೆ.

'ಬರ' ಎಂಬುದು ನೈಸರ್ಗಿಕ ವಿದ್ಯಮಾನ, ಅದನ್ನು ತಪ್ಪಿಸಲು ಅಸಾಧ್ಯ, ಪಾಪ ಸರ್ಕಾರಗಳೇನು ಮಾಡಿಯಾವು ಎಂಬ ಅನುಕಂಪ ತೋರುವವರೂ ಇರಬಹುದು. ಆದರೆ ವಸ್ತುಸ್ಥಿತಿ ಹಾಗಿಲ್ಲ. 'ಅಭಿವೃದ್ಧಿ' ಎಂಬ ಮೋಸದ ಮೂಲಕ ಇಲ್ಲಿ ಕೆಲವೇ ಕೆಲವು ಜನರ ಹಿತಾಸಕ್ತಿಯನ್ನು ಕಾಪಾಡುತ್ತಾ, ಅದಕ್ಕಾಗಿ ದಮನಿತರನ್ನು ಇನ್ನಷ್ಟು ತುಳಿಯುತ್ತಾ ಸಾಗಲಾಗುತ್ತಿದೆ. ಇದಕ್ಕೆ ಮೂಲಭೂತ ಕಾರಣಗಳಾಗಿರುವುದು ಜಾಗತೀಕರಣ, ಉದಾರೀಕರಣ, ಮುಕ್ತ ಮಾರುಕಟ್ಟೆ ನೀತಿಗಳು. ಇವು "ಬಹುಸಂಖ್ಯಾತ ಬಡವರ ಭಾರತದ ಮೇಲೆ, ಕೆಲವೇ ಕೆಲವು 'ಉಚ್ಛ ಜಾತಿಯವರಿಗೆ' ಮತ್ತು ಮೇಲ್ವರ್ಗದವರಿಗೆ ನೆರವು ನೀಡುತ್ತಿವೆ.

2001–2011 ರ ಅವಧಿಯಲ್ಲಿ(ಮುಕ್ತ ಮಾರುಕಟ್ಟೆಯ ಎರಡನೇ ದಶಕದಲ್ಲಿ) ಈ 'ಜೈ ಭಾರತ ಜನನಿಯ ತನುಜಾತೆಯಾದ' ಕರ್ನಾಟಕವೂ 'ಕೇವಲ' ಎಂಟು–ಒಂಭತ್ತು ಬರಗಳನ್ನು, ನಾಕು–ಐದು ನೆರೆಪ್ರವಾಹಗಳನ್ನು ಸಹಿಸಿಕೊಂಡು ಬದುಕಿದೆ. ಈ ಅವಧಿಯಲ್ಲಿ ಎಲ್ಲ ಮೂರೂ ಪ್ರಮುಖ ಪಕ್ಷಗಳು ಈ ರಾಜ್ಯವನ್ನು (ಅಕ್ಷರಶಃ) ಆಳಿ ಕೃತಾರ್ಥ ಆಗಿವೆ!


1995–2010ರ ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ 2,50,000 ರೈತರ ಆತ್ಮಹತ್ಯೆಗಳ ಪೈಕಿ ಬಹುಪಾಲು ಸಂಭವಿಸಿದ್ದು, 'ಉದಾರವಾದೀ ಸಿದ್ಧಾಂತ, ಮುಕ್ತ ಮಾರುಕಟ್ಟೆಯ ನೀತಿ'ಗಳನ್ನು ಜನರ ಮೇಲೆ ಬಲವಂತವಾಗಿ ಹೇರಿ, ಅಭಿವೃದ್ಧಿಗೊಂಡ ರಾಜ್ಯಗಳು ಎಂಬ ಹಣೆಪಟ್ಟಿ ಹೊತ್ತಿರುವ 'ಟಾಪ್' ಐದು ರಾಜ್ಯಗಳಲ್ಲೇ. ಇದರಲ್ಲಿ ಕರ್ನಾಟಕವೂ ಇದೆ, ಅದು ಈ ಅವಧಿಯಲ್ಲಿ 35,053 ರೈತರ ಆತ್ಮಹತ್ಯೆಗಳನ್ನು 'ಸುಲಭವಾಗಿ' ಸ್ವೀಕರಿಸಿಬಿಟ್ಟಂತೆ ಕಾಣುತ್ತಿದೆ!

ಆದರೂ 'ಡಿಯೊಡ್ರೆಂಟ್' ಎಂಬ ಡೆವೆಲಪ್‌ಮೆಂಟು ತನ್ನ ನಾತವನ್ನು ಪಸರಿಸುತ್ತಲೇ ಇದೆ.

ಸೋ, ' ಭಾರತದ ಬೆವರಿಗೆ ಈಗ ಇಂಡಿಯಾದಲ್ಲಿ ಡಿಯೊಡ್ರಂಟು ಇದೆ: ಭಾರತದ ನೀರಿಗೆ ಪರ್ಯಾಯವಾಗಿ ಮಿನರಲ್ ಇದೆ' ಎಂಬುದೇ ಸತ್ಯವೋ?

ಹಾಗಾದರೆ ಇಲ್ಲಿ ಮಿನರಲ್ಲೂ ಇರುವುದಿಲ್ಲ, ನೀರೂ ಇರುವುದಿಲ್ಲ.. ಭೂಮಿ ಬಿಡಿ ಅದಾಗಲೇ ಸಂಪೂರ್ಣ ಹರಾಜಿಗೆ ಬಂದಂತಿದೆ.

ಇಷ್ಟಾದರೂ ಇಲ್ಲಿ ಎಲ್ಲ ಅವಘಡಗಳನ್ನು ಮೆಟ್ಟಿ ನಿಲ್ಲುವ ಜೀವಚೈತನ್ಯವಂತೂ ಇದ್ದೆ ಇದೆ. ಅದು ಪುಟಿದು ಭುಗಿಲೇಳುವ ಕಾಲ ಬಂದಾಗಿದೆ.



ಎಲ್ಲಿಯತನಕ ಬ್ಯಾಟ್ ಮಾತನಾಡುತ್ತಿರುತ್ತದೋ ಅಲ್ಲಿತನಕ ಸರಿ, ಆದರೆ ಬ್ಯಾಟ್‌ನ ಚಮತ್ಕಾರ ನಡೆಯದಿದ್ದರೆ...

ಃ ಪಾರ್ವತೀಶ

ಈ ಹೋರಾಟ ಕ್ರಿಕೆಟ್ ಪಿಚ್‌ನಲ್ಲಿ ನಡೆಯುವಂತಾದ್ದಲ್ಲ. ಅಂತೆಯೇ ಎದುರಾಳಿ ಕೂಡ ಇನ್ನೊಂದು ಟೀಂನ ದಾಳಿಕೋರ ಬೌಲರ್‌ನಂತೆಯೂ ಇರುವುದಿಲ್ಲ.

ಇಂಡಿಯಾದ ಕ್ರಿಕೆಟ್ ಸ್ಟಾರ್ ಯುವರಾಜ್ ಸಿಂಗ್‌ಗೆ ಕ್ಯಾನ್ಸರ್ ಆಗಿದೆ. ಅವನು ಅದನ್ನು ಬಹಳ ದಿಟ್ಟತನದಿಂದ ಎದುರಿಸಿ ಹೋರಾಡಲು ಸಜ್ಜಾಗುತ್ತಿದ್ದಾನೆ. ಈ ಕ್ಯಾನ್ಸರ್ ಎಂಬ ರಕ್ಕಸನ ಆಟದೆದುರು ಹುಲುಮಾನವರ ಹೋರಾಟಗಳ ಬಗ್ಗೆ ಅನೇಕ ಕತೆಗಳಿವೆ.

ಕೆಲವರು ಇದರಲ್ಲಿ ಗೆದ್ದು ಬಂದಿರುವುದುಂಟು.

ಸೋತು ಶರಣಾಗಿ ಜೀವ ಚೆಲ್ಲಿರುವವರು ಅಸಂಖ್ಯ ಬಿಡಿ.

ಈಗ್ಗೆ ಎರಡು ವರ್ಷಗಳ ಹಿಂದೆ ಇಂಗ್ಲೆಂಡ್‌ನ ಹೆಸರಾಂತ ನಟಿ ಮಾತುಗಾರ್ತಿ ಜೇಡ್ ಗೂಡಿಗೆ ಗರ್ಭಕೋಶದ ಕ್ಯಾನ್ಸರ್ ಆಗಿದೆಯೆಂದು ಗೊತ್ತಾಯಿತು. ಅವಳು ತಕ್ಷಣ ತನಗುಳಿದಿರುವ ಬದುಕೆಷ್ಟು ದಿನದ್ದು ಅಂತ ಲೆಕ್ಕ ಹಾಕಿ ಚಕಚಕನೆ ಅಂದುಕೊಂಡಿದ್ದನ್ನು ಮಾಡಿ ಮುಗಿಸಿಕೊಂಡಳು. ಜೈಲಿನಲ್ಲಿದ್ದ ತನ್ನ ಹಳೆಯ ಗೆಳೆಯನೊಬ್ಬನನ್ನು ಪರೋಲ್ ಮೇಲೆ ಬಿಡಿಸಿ ಹೊರತಂದು ಮದುವೆಯಾಗಿ ಒಂದು ದಿನ ಜೊತೆಗಿರಲು ಅವಕಾಶ ಪಡೆದುಕೊಂಡಳು. ಸ್ವತಃ ಇಂಗ್ಲೆಂಡ್‌ನ ಪ್ರಧಾನಿಯೇ ಇಷ್ಟಕ್ಕೆ ಅವಕಾಶ ಮಾಡಿಸಿಕೊಟ್ಟ. ಈಚಿಟಟುಟಿರಿ ಖಣಚಿಡಿ ಎಂದು ಹೆಸರಿಟ್ಟು ತನ್ನ ಬದುಕಿನ ಕತೆಯನ್ನು ವೇಗದಲ್ಲಿ ಬರೆದು (ಅಥವಾ ಬರೆಸಿ) ಮಾರಾಟಕ್ಕಿಟ್ಟಳು. ಆಕೆ ಆಸ್ಪತ್ರೆಗೆ ಹೋಗಿ ಬರುತ್ತಿದ್ದದು, ತಲೆಗೂದಲನ್ನು ಶೇವ್ ಮಾಡಿಸಿದ್ದು, ಅತ್ತಿದ್ದು, ನಕ್ಕಿದ್ದೆಲ್ಲವೂ ಇಂಗ್ಲೆಂಡ್‌ನ ಟಿವಿ–ಪತ್ರಿಕೆಗಳಲ್ಲಿ ನಿತ್ಯದ ಸುದ್ದಿಯಾಗುತ್ತಿತ್ತು.

ಆಶ್ಚರ್ಯ ಅಂದರೆ ಇದೆಲ್ಲಾ ತಂತಾನೆ ಆದದ್ದಲ್ಲ. ಇಂತದ್ದನ್ನೆಲ್ಲಾ ಆರ್ಗನೈಸ್ ಮಾಡುವ ಈವೆಂಟ್ ಮ್ಯಾನೇಜಿಂಗ್ ಕಂಪನಿಗಳೇ ಅಲ್ಲಿವೆ. ಅವರು ಒಬ್ಬರ ಸಾವನ್ನೂ ಬೇಕಿದ್ದರೆ ಮಾರುತ್ತಾರೆ. ಗೂಡಿಗೆ ಇದು ಗೊತ್ತಿತ್ತು. ತನ್ನ ಸಾವಿನ ನಂತರ ಮಕ್ಕಳ ಜೀವನಕ್ಕಾದರೂ ಭದ್ರತೆ ಸಿಗಲೆಂದು ಅವಳು ಇದಕ್ಕೆ ಒಪ್ಪಿಕೊಂಡಳು. ಒಟ್ಟಾರೆ ಸಾರಾಂಶದಲ್ಲಿ ಜೇಡ್ ಗೂಡಿಯ ಕ್ಯಾನ್ಸರ್ ಕಾಯಿಲೆ ಹಾಗೂ ಆವರಿಸಿಕೊಂಡ ಸಾವು ಒಂದು ಸಾರ್ವಜನಿಕ ಈವೆಂಟ್ ಎನ್ನುವ ರೀತಿಯಲ್ಲಿ ನಡೆಯಿತು. ಜೇಡ್ ತನ್ನ ಸಾವನ್ನು ಸಾರ್ವಜನಿಕವಾಗಿ ಅಭಿನಯಸಿದ್ದಾಕ್ಕಾಗಿ ಅವಳಿಗೆ ಅಪಾರ ಮೊತ್ತದ ಹಣ ಸಿಕ್ಕಿತು.

ಮತ್ತೊಂದೆಡೆ ಈಗತಾನೆ ಕ್ಯಾನ್ಸರ್ ವಿರುದ್ಧದ ಮೊದಲ ಹಂತದ ಹೋರಾಟ ಆರಂಭಿಸಿರುವ ಯುವರಾಜ್ 'ತನ್ನ ಖಾಸಗಿ ಬದುಕಿನ' ಬೇಲಿ ದಾಟದಂತೆ ಎಲ್ಲರಲ್ಲೂ ಮನವಿ ಮಾಡಿಕೊಂಡಿದ್ದಾನೆ. ಸ್ವಲ್ಪಮಟ್ಟಿಗೆ ಜನ ಇದನ್ನು ಒಪ್ಪಿಕೊಂಡಿದ್ದಾರೆ ಕೂಡ. ಈಗಿನ್ನೂ 29 ವರ್ಷದ ಯುವರಾಜ್ ಇಂಡಿಯಾ ಇತ್ತೀಚೆಗೆ ವಿಶ್ವಕಪ್ ಕ್ರಿಕೆಟ್ ಗೆದ್ದು ಚಾಂಪಿಯನ್ ಆದಾಗ ಹೆಚ್ಚಿನ ಕೊಡುಗೆ ನೀಡಿದ್ದವನು. ಲಕ್ಷಾಂತರ ಜನರೆದುರು ಕ್ರಿಕೆಟ್ ಆಡುತ್ತಿದ್ದವನು, ಚಾಂಪಿಯನ್ ಎನಿಸಿಕೊಂಡಿದ್ದವನು ಈಗ ಆತ ಏಕಾಂಗಿಯಾಗಿ ಸಾವಿನೊಂದಿಗೆ ಹೋರಾಡಬೇಕಾಗಿ ಬಂದಿದೆ.

ಈ ತರುಣನ ಕುಟುಂಬದೊಳಗೆ ಇನ್ನಷ್ಟು ನೋವಿನ ಕತೆಗಳಿವೆ.

ಯುವರಾಜನ ತಂದೆ ಯೋಗರಾಜ್ ಬಹಳ ಹಿಂದೆ ಇಂಡಿಯಾ ಪರವಾಗಿ ಒಂದೇ ಒಂದು ಟೆಸ್ಟ್ ಮ್ಯಾಚ್ ಆಡಿದ್ದಾನೆ. ಅದೇಕೋ ಅವರಿಗೆ ಆಡಲು ಆಗ ಜಾಸ್ತಿ ಅವಕಾಶ ಸಿಕ್ಕಿರಲಿಲ್ಲ. ಆದರೆ ಯೋಗರಾಜ್ ಸುಮ್ಮನಾಗದೆ ಮಗ ಯುವರಾಜ್ ಸಿಂಗ್‌ನನ್ನು ಕ್ರಿಕೆಟ್ ಪ್ಲೇಯರ್‌ನನ್ನಾಗಿ ರೂಪಿಸಲು ಪಣತೊಟ್ಟರು. ಆ ನಡುವೆ ಪತ್ನಿಯೊಂದಿಗೆ ವಿರಸಬಂತು. ಅದು ವಿಚ್ಛೇದನದಲ್ಲಿ ಕೊನೆಯಾಯಿತು. ಯುವರಾಜ್ ತಂದೆಯ ಜೊತೆ ಇರಬೇಕಾಗಿ ಬಂತು. ಅಪ್ಪ ಬಹಳ ಸ್ಟ್ರಿಕ್ಟ್ ಆದ್ದರಿಂದ ಯುವರಾಜ್ ಬಾಲ್ಯವನ್ನು ಅತ್ಯಂತ ಕಠಿಣ ಶಿಸ್ತಿನಿಂದ ಕಳೆದ. ತಾಯಿಯನ್ನು ನೋಡಲೂ ಸಹ ಅವನಿಗೆ ಆಗ ಅವಕಾಶವಿರಲಿಲ್ಲ. ನಂತರ ಕೊಂಚ ದೊಡ್ಡವನಾದಾಗ ಅಪ್ಪನಿಗೆ ಹೇಳದೇ ಅಮ್ಮನ ಭೇಟಿಯಾಗತೊಡಗಿದ.

ಇನ್ನೇನು ಅಮ್ಮ ಮತ್ತೆ ಸಿಕ್ಕಳಲ್ಲಾ ಎಂದು ಯುವಿ ಸಂಭ್ರಮಪಡುತ್ತಿರುವಾಗಲೇ ಅಮ್ಮನಿಗೆ ಈಗ ಮಗನನ್ನು ಕಳೆದುಕೊಳ್ಳುವ

ಭೀತಿ ಎದುರಾಗಿದೆ. ಆಕೆ ಈಗ ಅಮೇರಿಕಾದ ಆಸ್ಪತ್ರೆಯಲ್ಲಿ ಯುವಿ ಜೊತೆಗಿದ್ದಾಳೆ. ಈ ಯಾತನೆಯನ್ನು ಭರಿಸುವುದು ಅಷ್ಟು ಸುಲಭವಲ್ಲ.

ದೆಹಲಿಯಲ್ಲಿ ಆಸ್ಪತ್ರೆಯೊಂದರ ಉದ್ಘಾಟನೆಗೆಂದು ಯುವರಾಜ್ ಹೋಗಿದ್ದಾಗ ಆತ ಕೆಮ್ಮುತ್ತಿದ್ದುದನ್ನು ನೋಡಿ ಆತನದೇ ಮೊದಲ ಎಕ್ಸ್‌ರೇ ತೆಗೆದು ಚೆಕ್ ಮಾಡಿದಾಗ ಅವನಿಗೆ ಕ್ಯಾನ್ಸರ್ ಕಾಣಿಸಿಕೊಂಡಿರುವುದು ಗೊತ್ತಾಯಿತು. ಅದಕ್ಕೂ ಮುನ್ನ ಯುವಿಯ ಅಸಹಜ ಕೆಮ್ಮಿನ ಬಗ್ಗೆ ತಂದೆ ಎಚ್ಚರಿಸಿ ಚೆಕಪ್ ಮಾಡಿಸಿಕೊಳ್ಳಲು ಹೇಳಿದ್ದರೂ ಯುವಿ ಅದನ್ನು ಲೈಟಾಗಿ ತೆಗೆದುಕೊಂಡಿದ್ದ. ಈ ಬಗ್ಗೆ ಯೋಗರಾಜ್ ಸಿಂಗ್ ಬಹಳ ನೋವಿನ ಮಾತುಗಳನ್ನು ಹೇಳಿಕೊಂಡಿದ್ದಾನೆ.



ಈ ಮಧ್ಯೆ ದೆಹಲಿಯ ಒಂದೆರಡು ಕ್ಯಾನ್ಸರ್ ಚಿಕಿತ್ಸಾ ಸಂಸ್ಥೆಗಳು "ಯುವರಾಜ್ ನಮ್ಮಲ್ಲಿಗೆ ಬರಲಿ, ಟ್ರೀಟ್‌ಮೆಂಟ್ ನೀಡುತ್ತೇವೆ" ಎಂದು ಘೋಷಿಸಿಕೊಂಡರು. ನಂತರ ಗೊತ್ತಾಗಿದ್ದೇನೆಂದರೆ ಆ ಕೇಂದ್ರಗಳಿಗೆ ಆ ಮಟ್ಟದ ಕೆಪ್ಯಾಸಿಟಿ ಸೌಲಭ್ಯ ಇಲ್ಲ ಎಂಬುದು. ಯುವರಾಜ್‌ನಂತಹ ಸ್ಟಾರ್ ಒಬ್ಬ ತಮ್ಮ ಆಸ್ಪತ್ರೆಗೆ ಬಂದರೆ ತಮಗೂ ಭಾರಿ ಪ್ರಚಾರ ಸಿಗುತ್ತದಲ್ಲಾ ಎಂದು ಕೆಲವರು ಯೋಚಿಸಿದ್ದರಂತೆ. ಅದಕ್ಕೂ ಮುನ್ನ ಇದೇ ಯುವರಾಜ್ ಸಿಂಗ್ 'ಬಿರ್ಲಾ ಸನ್ ಲೈಫ್ ಇನ್ಶೂರೆನ್ಸ್ ಕಂಪನಿ'ಗೂ ಒಂದು ಜಾಹೀರಾತು ನೀಡುತ್ತಿದ್ದ.

"ಜಬ್ ತಕ್ ಬಲ್ಲಾ ಚಲಾ ಠೀಕ್ ಹೈ.

ಜಬ್ ಬಲ್ಲಾನಹೀ ಚಲಾ..." (ಎಲ್ಲಿಯತನಕ ಬ್ಯಾಟ್ ಮಾತನಾಡುತ್ತಿರುತ್ತದೋ ಅಲ್ಲಿತನಕ ಸರಿ, ಆದರೆ ಬ್ಯಾಟ್‌ನ ಚಮತ್ಕಾರ ನಡೆಯದಿದ್ದರೆ....)?- ಎಂಬರ್ಥದ ಜಾಹೀರಾತದು. ಈಗ ಯುವರಾಜನ ಬ್ಯಾಟ್ ಮತ್ತೆ ಮಾತನಾಡಲಿ ಎಂದು ಆಶಿಸೋಣ...

ಇವರೆಲ್ಲರಿಂದ ತಪ್ಪಿಸಿಕೊಂಡು ಅಮೆರಿಕಾಗೆ ಹೋಗಿದ್ದಾನೆ ಯುವರಾಜ್. ಭಾರತ ಕ್ರಿಕೆಟ್ ಮಂಡಳಿ ಅವನ ಚಿಕಿತ್ಸೆಯ ಖರ್ಚುನ್ನು ನಾವೇ ಕೊಡುತ್ತೇವೆ ಅಂದಿದೆ. ಇದು ಬಹುಶಃ ಕೋಟಿ ರೂಪಾಯಿಗಳ ಲೆಕ್ಕದಲ್ಲಿರುತ್ತದೆ. ಕೊಡಲಿ, ಆದರೆ ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಸುವ ಈ ಕ್ರಿಕೆಟ್ ಜನ ಬೇರೆಲ್ಲಾ ನಾಗರಿಕರಂತೆ ತೆರಿಗೆ ಕಟ್ಟಲು ಒಪ್ಪುವುದಿಲ್ಲ. ನೆರೆ, ಬರಗಾಲವೆನ್ನುವ ಕೆಟ್ಟ ಪರಿಸ್ಥಿತಿ ಬಂದಾಗ ಒಂದು ರೂಪಾಯನ್ನೂ ಜನರಿಗಾಗಿ ದೇಣಿಗೆ ಕೊಡುವುದಿಲ್ಲ. ಈ ಯುವರಾಜ ಕೂಡಾ "ನಾನು ಭಾರತ ದೇಶಕ್ಕಾಗಿ ಕ್ರಿಕೆಟ್ ಆಡುತ್ತೇನೆ" ಎಂದು ಹೇಳುತ್ತಲೇ ದುಡ್ಡಿಗಾಗಿ ಟಿ-20 ಕ್ರಿಕೆಟ್ ಆಡಲು ಶುರುಮಾಡಿದ್ದ. ಪೇಜ್ ತ್ರೀ ಪಾರ್ಟಿಗಳ ಖಾಯಂ ಗಿರಾಕಿಯಾಗಿದ್ದ ಈ ಯುವರಾಜ, ವಿರಾಟ್ ಕೋಹ್ಲಿ ಮುಂತಾದ ಕ್ರಿಕೆಟರ್‌ಗಳು ಹುಡುಗಿಯರಿಗೆ ಆಮಿಷ ತೋರಿಸಿ ಬಳಸಿ ಬಿಸಾಡುತ್ತಿದ್ದ ಬಗ್ಗೆ ಕತೆಗಳೇ ಇವೆ. ಯುವರಾಜ್ ಬಗ್ಗೆ ನಮಗೆ ಪ್ರೀತಿ ಮತ್ತು ಅನುಕಂಪವಿರಲಿ, ಆದರೆ ಒಟ್ಟಾರೆ ಈ ದೇಶದ ಕ್ರಿಕೆಟ್ ವ್ಯವಸ್ಥೆ ಅಸಹ್ಯಕರವಾಗಿದೆ ಅಷ್ಟೆ.

ಈ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ದಣಿಯುವವರ ಪ್ರತಿಕ್ರಿಯೆಗಳು ಬೇರೆ ಬೇರೆ ರೀತಿ ಇರುತ್ತವೆ. ಪ್ರೊ॥ ಕೆ. ರಾಮದಾಸ್ ಧೀರೋದಾತ್ತ ಯೋಧನಂತೆ ಸಾವನ್ನು ಬರಮಾಡಿಕೊಂಡರು. ನಮ್ಮ ಬಳಗದ ಮಿತ್ರರೊಬ್ಬರು ಕ್ಯಾನ್ಸರ್ ಅನ್ನು ಎದುರಿಸಿದ ಬಗ್ಗೆ ಇಲ್ಲಿ ಹೇಳಬೇಕು. ಅವರು ಸೂಸೈ ಅಂತ.

ಈ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ದಣಿಯುವವರ ಪ್ರತಿಕ್ರಿಯೆಗಳು ಬೇರೆ ಬೇರೆ ರೀತಿ ಇರುತ್ತವೆ. ಪ್ರೊ॥ ಕೆ. ರಾಮದಾಸ್ ಧೀರೋದಾತ್ತ ಯೋಧನಂತೆ ಸಾವನ್ನು ಬರಮಾಡಿಕೊಂಡರು. ನಮ್ಮ ಬಳಗದ ಮಿತ್ರರೊಬ್ಬರು ಕ್ಯಾನ್ಸರ್ ಅನ್ನು ಎದುರಿಸಿದ ಬಗ್ಗೆ ಇಲ್ಲಿ ಹೇಳಬೇಕು. ಅವರು ಸೂಸೈ ಅಂತ.

ಎಚ್‌ಎಎಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸೂಸೈನಾಥನ್ ಅಲ್ಲಿನ ಕಾರ್ಮಿಕ ನಾಯಕರಾಗಿದ್ದರು. ಬೆಂಗಳೂರಿನ ಪ್ರಗತಿಪರ ಸಂಗಟನೆಗಳ ಚಟುವಟಿಕೆಗಳಲ್ಲಿ ಸದಾ ಇರುತ್ತಿದ್ದ ಸೂಸೈ ಐವತ್ತನೇ ವರ್ಷದ ಆಸುಪಾಸಿನಲ್ಲಿದ್ದಾಗ ಕ್ಯಾನ್ಸರ್ ಆಯಿತು. ಅದು ನಿಯಂತ್ರಣಕ್ಕೆ ಬರಲೇ ಇಲ್ಲ. ಸದಾ ಹಸನ್ಮುಖಿಯಾಗಿರುತ್ತಿದ್ದ ಸೂಸೈ ತಮ್ಮ ಪತ್ನಿ ಮಕ್ಕಳ ಸಂಕಟ ನೋಡಲಾರದೆ, ಕಾಯಿಲೆಯ ನೋವನ್ನು ಭರಿಸಲಾಗದೆ, ತಾವೇ ಮುಂದಡಿ ಇರಿಸಿ ಸಾವನ್ನು ಬರಮಾಡಿಕೊಂಡು ಬಿಟ್ಟರು.

ನಮಗೆ ಅವರ ಮನಸ್ಥಿತಿಯ ಬಗ್ಗೆ ಯೋಚಿಸುತ್ತಾ ಹೋದಂತೆ ಸರಿ-ತಪ್ಪುಗಳನ್ನು ವ್ಯಾಖ್ಯಾನಿಸಲೂ ಆಗಲಿಲ್ಲ.

ಸೂಸೈ ಓಡುತ್ತಿದ್ದ ರೈಲಿನೆದುರು ತಮ್ಮ ದೇಹವನ್ನೊಡ್ಡಿದ್ದರು!

ಅವರಿಗೆ ಬಿಡುಗಡೆ ಬೇಕಿತ್ತು ಅಷ್ಟೆ.

ಅದಿರಲಿ ಬಿಡಿ.

ಯುವರಾಜ್ ಸಿಂಗ್‌ನ ಕ್ಯಾನ್ಸರ್ ತೊಂದರೆ ಈಗಿನ್ನೂ ಇಗಿನ್ನೂ ಮೊದಲ ಹಂತದಲ್ಲಿದೆಯಾದ್ದರಿಂದ ಸಾವಿನ ದವಡೆಯಿಂದ ಪಾರಾಗುವ ಸಾಧ್ಯತೆ ಖಂಡಿತಾ ಇದೆ ಎನ್ನುತ್ತಿದ್ದಾರೆ ವೈದ್ಯರು. ಅದಕ್ಕೆ ಹೋರಾಟ ನಡೆಸುವ ಕೆಚ್ಚೂ ಯುವಿಯಲ್ಲಿ ಕಾಣುತ್ತಿದೆ.

ಈ ತರುಣ ಕ್ಯಾನ್ಸರ್ ವಿರುದ್ಧದ ಯುದ್ಧದಲ್ಲಿ ಗೆದ್ದು ಬರಲಿ.

ಸಂಡೇ ಬಜಾರೆಂಬ ಸಂತೆಯೊಳಗೊಂದು ದಿನ...

⌘ ಶಾಂತರಾಜು ಎಸ್. ಮಳವಳ್ಳಿ


ಬೈಸಿಕಲ್ ಥೀವ್ಸ್‌ನಲ್ಲಿ ಮಾತ್ರ ಗುಡ್ಡೆ ಗುಡ್ಡೆಯಾಗಿ ಕಂಡಿದ್ದ ಸೈಕಲ್‌ನ ಬಿಡಿ ಭಾಗಗಳನ್ನು, ಯತಾವತ್ತಾಗಿ ಕಣ್ಣೆದುರಿಗೆ ಕಂಡಿದ್ದು ಸಂಡೇ ಬಜಾರ್‌ನಲ್ಲಿ. ನನ್ನ ಹೀರೋ ಸೈಕಲ್‌ಗಾಗಿ, ಎರಡೂ ಕಡೆ ಒತ್ತಿದಾಗ ಶಬ್ಧಮಾಡುವ ಬೆಲ್‌ನ ಹುಡುಕಾಟದಲ್ಲಿ ಹೋಗಿದ್ದೆ. ನಾನು ಮಾರ್ಕೆಟ್‌ಗೆ ಹತ್ತಿರವಿರುವ ವಿವಿ ಪುರಂ ಸೈನ್ಸ್ ಕಾಲೇಜಿನಲ್ಲಿ ಪಿಯುಸಿ ಓದುತಿದ್ದಾಗ.

ನಾವು ಬೇಡವೆಂದು ಬಿಸಾಡುವ ಎಲೆಕ್ಟ್ರಾನಿಕ್ ವಸ್ತುಗಳು, ಬೇರೆಯವರು ಹಾಕಿ ಬಿಟ್ಟ ಹಳೇ ಬಟ್ಟೆಗಳು ದರಿದ್ರವೆಂದು ತಿಳಿದಿದ್ದ, ಬುಡುಬುಡಿಕೆಯವನಿಗೆ ಕೊಡುವ ಹಳೇ ಕೋಟುಗಳು, ಫ್ರಿಡ್ಜು, ವಾಷಿಂಗ್ ಮಷಿನ್ನು, ಬಣ್ಣಬಣ್ಣದ ಶೂ, ಲೈಟಿಂಗ್ ಪೆನ್, ಜಾಕಿ ಡ್ರಾಯರ್, ಬೆಡ್ ಲೈಟು, ಮಂಚದ ಕಾಲು, ಮುರಿದ ಟೇಬಲ್ಲು, ಕಾಂಟೆಕ್ಸ್ ಕ್ಯಾಮರಾ, ಅಂತಹದರಲ್ಲೆ ಶೂಟ್ ಮಾಡಿದ ಅಮೆರಿಕನ್ ಸ್ಕೂಲ್ ಗೋಯಿಂಗ್ ಗರ್ಲ್ಸ್ ಸೆಕ್ಸ್ ಪುಸ್ತಕಗಳು...ಹಳತು-ಹೊಸತು, ಅಬ್ಬಾ...ಮೈಗ್ರೇನ್ ಹೆಚ್ಚಾದಂತೆ ಭಾಸವಾಗಿ ಸಣ್ಣಗೆ ಕೂದಲು ಗಾತ್ರಕ್ಕೆ ರೊಟ್ಟಿಯಗಲ ಕೊಯ್ದು ಕೊಡುವ ಗೆಣಸು ತಿಂದು ಮನೆಕಡೆ ನಡೆದಿದ್ದೆ. ಗೆಳೆಯ ಕಿರಣ್ ಮರುದಿನ "ಚೋರ್ ಬಜಾರ್ ಹೇಗಿತ್ತು ಮಗ", ಎಂದಾಗ, "ನನಗೆ ಬೇಕಾದ ಒಂದು ಬೆಲ್ ಕೂಡ ಸಿಗಲಿಲ್ಲಮ್ಮ" ಎಂದೆ. ಗೆಳೆಯ ನಗುತ್ತಾ, "ಲೇ ನಿಮ್ಮಪ್ಪನ ಫೋಟೋ ತೋರಿಸಿ, ಇದು ಸಿಗುತ್ತಾ ಅಂತ ಕೇಳಿದ್ರೆ, ಮುಂದಿನ ವಾರ ಬನ್ನಿ ಈ ಐಟಮ್ ಸಿಗುತ್ತೆ ಸಾರ್! ಅಂತ್ಹೇಳಿ, ಅದೇ ತರಹ ಮಾಡಿ ಮಡ್ಗಿರ್ತರೆ. ಗೊತ್ತಾಯ್ತಾ? ಸರಿಯಾಗಿ ಹುಡುಕಿದ್ರೆ ಹೊಸ ಸೈಕಲ್ಲೇ ಸಿಗೋದೊ, ಬರೀ ಬೆಲ್ ಸಿಗಲ್ವಾ?" ಎಂದು ಸಂಡೇ ಬಜಾರಿನ ನಾನು ನೋಡದ ಚೋರ ಬೀದಿಗಳನ್ನು ಬಣ್ಣಿಸಿದ.

ಮುಂದಿನ ಕೆಲದಿನಗಳು ನಾನು ಸಂಡೇ ಬಜಾರಿಗೆ ಹೋಗುವ ಯಾವು ಜರೂರು ಇರಲಿಲ್ಲ. ಆದರೆ ಪತ್ರಿಕೆಯಲ್ಲಿ ಆಗಾಗ "ಸಂಡೇ ಬಜಾರ್ ರೈಡ್, ಬಂದ್" ಹೀಗೆ ಓದುತ್ತಿದ್ದೆ. ಅದೆಲ್ಲಾ ಪೋಲೀಸರ ಮಾಮೂಲಿನ ಕಿತಾಪತಿ ಎಂದು ನಂತರ ತಿಳಿಯಿತು. ಚಂದಾಪುರದ ಕಾಲೇಜಿಗೆ ಸೇರಿದಾಗ ರೂಮ್‌ಮೇಟ್‌ಗಳಾಗಿ ಸಿಕ್ಕವರು ಆನೇಕಲ್ ನಾರಾಯಣ್ ಅಂಡ್ ಟೀಂ. ನಾಣಿ ಒಂದು ಪತ್ರಿಕೆಗೆ ವಿನ್ಯಾಸಕಾರ. ಇವರೊಂದಿಗೆ ಸಂಡೇಗಳನ್ನು ಕಳೆಯಲು ಸಂಡೇ ಬಜಾರಿಗೆ ಹೋಗಿ, ಮೊದಲ ಬಾರಿಗೆ 50 ರೂಪಾಯಿಗೆ ಲೀ ಜೀನ್ಸ್ ಕೊಂಡಿದ್ದೆ. ಅದನ್ನು ಇನ್ನೊಬ್ಬ ಗೆಳೆಯ ಅಪಹರಿಸಿದ ಪ್ರಕರಣ ಸಂಡೇ ಬಜಾರಿಗೆ ಮತ್ತೊಮ್ಮೆ ಹೋಗುವಂತೆ ಮಾಡಿಸಿತು.

ಕಳೆದ ನಾಲ್ಕು ವರುಷಗಳಲ್ಲಿ ತಿಂಗಳಿಗೆ ಒಮ್ಮೆಯಾದರೂ ಸಂಡೇ ಬಜಾರಿಗೆ ನನ್ನ ಸಂಡೇ ಮೀಸಲಾಗಿರುತ್ತದೆ. ಏನನ್ನೂ ಕೊಳ್ಳಲು ಇಲ್ಲದಿದ್ದರೂ ಸುಮ್ಮನೆ ಹೋಗಿ ಬರುವಷ್ಟು ಸಂಡೇ ಬಜಾರು ನನಗೆ ಆತ್ಮೀಯವಾಗಿಬಿಟ್ಟಿದೆ. ಜನಗಳನ್ನು ಅರಿಯಲು, ಫೋಟೋ ತೆಗೆಯಲು ಕ್ಯಾಮರಾದೊಂದಿಗೆ ಹೋಗುತ್ತಿರುತ್ತೇನೆ. ನನ್ನ ಕ್ಯಾಮರಾದೊಳಗೆ ಲಾಕ್ ಆಗುವ ಚಿತ್ರಗಳು ಮಾಮೂಲಿನವಾದರೂ ಅದರೊಳಗಿನ ವ್ಯಕ್ತಿಗಳು-ಅವರ ವ್ಯಕ್ತಿತ್ವ ಅಸಮಾನ್ಯವಾದದ್ದೆನಿಸುತ್ತದೆ..... ಯಾವುದಾದರು ಚಿತ್ರಕಲಾ ಕಾಲೇಜಿನಲ್ಲಿ ಅಧ್ಯಾಪಕನಾಗಬೇಕಾದ ಕಲಾವಿದ ತನ್ನ ಪೈಟಿಂಗ್‌ಗಳನ್ನು ರಾಶಿಯಾಕಿ 50-100 ರೂಪಾಯಿಗೆ ಮಾರುತ್ತಿರುತ್ತಾನೆ. ಇನ್ನಾವುದೋ ಮುದುಕಿ ತನ್ನ ಮನೆಯ 60ರ ದಶಕದ ಅಲಂಕಾರಿಕ ವಸ್ತುವನ್ನು ತಂದು ಕೂತಿರುತ್ತಾಳೆ. ಮತ್ತೊಬ್ಬ "ಇದು ಡುಪ್ಲಿಕೇಟ್ ಬೇಕಿದ್ರೆ ತಗೋಳ್ಳಿ" ಎಂದು ನೇರವಾಗಿ ಹೇಳುತ್ತಾನೆ. ಮಹ್‌ಮದ್ ರಫಿಯ ಹಾಡನ್ನು ಗ್ರಾಮಾಫೋನ್‌ನಲ್ಲಿ ಕೇಳುತ್ತಾ, ಆಂಟಿಕ್ ಕ್ಯಾಮಾರಗಳೊಂದಿಗೆ ಎಲೆಯಡಿಕೆ ಜಗಿಯುತ್ತಿರುವ ದಾದಾ...ಹೀಗೆ ನಾನಾ ರಸಭರಿತ ಕಥೆಗಳು ನನಗಾಗಿ ಕಾಯುತ್ತಿರುತ್ತವೆ... ಕುಳಿತಲ್ಲಿಯೇ ಊಟ-ಕಾಫಿ...ಬಂದ ಆಟೋದವನಿಗೇ ವಾಪಸ್ಸು ಕರೆದುಕೊಂಡು ಹೋಗುವ ಭಾಗ್ಯ...

ಮೇಲೆ ಉದಾಹರಿಸಿದ ಕಲಾವಿದನ ಹೆಸರು ಅಜ್ಮತುಲ್ಲಾ ಖಾನ್. ವಯಸ್ಸು ಅಂದಾಜು 55 ಇರಬಹುದು. ಮೂಲತಃ ಈತ ಒಬ್ಬ ಕಲಾವಿದ. ತನ್ನ ಚಿತ್ರಗಳನ್ನು ಮುಚ್ಚಿದ ಅಂಗಡಿಯ ಬಾಗಿಲು-ಗೋಡೆಗೆ ಬಿಗಿದ ದಾರಕ್ಕೆ ತೂಗು ಹಾಕಿರುತ್ತಾರೆ. ಜೊತೆಗೆ ಫೋಟೋಗ್ರಫಿ, ಫ್ಯಾಷನ್ ಡಿಸೈನ್ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಪುಸ್ತಗಳನ್ನು ಮಾರಾಟಕ್ಕಿಟ್ಟಿರುತ್ತಾರೆ. ಕುತೂಹಲಕ್ಕೆ ಕೇಳಿದೆ, "ಅಣ್ಣಾ, ಈ ಪುಸ್ತಕಗಳೆಲ್ಲಾ ಎಲ್ಲಿ ಸಿಗ್ತವೆ ನಿಮಗೆ?". "1967ರಿಂದ ಚಿತ್ರ ಬರೀತಾ ಇದ್ದೀನಿ. ಚಿತ್ರ ಬರಿಯೋಕೆ ಅಂತಾನೆ ಈ ಪುಸ್ತಕಗಳೆಲ್ಲಾ ತಗೊಂಡಿದ್ದೆ. ಇನ್ನು ಎಷ್ಟೋ ವೈಟ್ ಅಂಡ್ ಬ್ಲ್ಯಾಕ್ ಪುಸ್ತಕಗಳಿವೆ. ತರೋದು ಕಷ್ಟ ಬೇಕು ಅಂದ್ರೆ ಹೇಳಿ.



ಮುಂದಿನ ವಾರ ತಂದು ಕೊಡ್ತೀನಿ" ಅಂದು ತಮ್ಮ ವಿಸಿಟಿಂಗ್ ಕಾರ್ಡ್ ಕೊಟ್ಟರು. ಗಟ್ಟಿ ಮತ್ತು ಬಣ್ಣದ ವಿಸಿಟಿಂಗ್ ಕಾರ್ಡ್‌ಗಳನ್ನಷ್ಟೇ ನೋಡಿದ್ದ ನನಗೆ ಒಂದು ಪಾಠ ಕಾದಿತ್ತು. ಒಂದು ಮಾಮೂಲು ಪ್ರಿಂಟ್‌ಔಟ್ ಪೇಪರ್‌ನಲ್ಲಿ ಜರಾಕ್ಸ್ ಮಾಡಿ, ವಿಸಿಟಿಂಗ್ ಕಾರ್ಡ್ ಅಗಲಕ್ಕೆ ಕತ್ತರಿಸಿದ ಪೇಪರ್‌ನಲ್ಲಿ ಅವರ' ವಿಳಾಸ ಮತ್ತು ಹೆಸರು. ಇದೇ ಅಲ್ಲವೇ ಕಾರ್ಡ್ ಮಾಡಬೇಕಾದ್ದು? ಆದರೆ ಇಷ್ಟು ಸುಲಭವಾಗಿ ಯಾವುದೇ ಡಿಸೈನ್ ಇಲ್ಲದೆ, ಒಂದು ರೂಪಾಯಿ ಜೆರಾಕ್ಸ್‌ನಲ್ಲಿ ಇಪ್ಪತ್ತು ಕಾರ್ಡ್ ಮಾಡಬಹುದೆಂದು ನನಗೆ ತಿಳಿದಿರಲಿಲ್ಲ! ನನಗೆ ಖಾನರ ಚಿತ್ರಗಳನ್ನು ಟೀಕಿಸುವಷ್ಟು 'ಜ್ಞಾನ'ವಿಲ್ಲ. ಸಾಧ್ಯವಾದರೆ ಯಾವುದಾದರೂ ಶಾಲೆಯಲ್ಲಿ ಅವರನ್ನು ಕಲಾ ಶಿಕ್ಷಕರನ್ನಾಗಿ ಮಾಡಬಹುದಾದಷ್ಟು ಸುಂದರವಾಗಿಯಂತೂ ಅವರ ಚಿತ್ರಗಳು ಮನ ಸೆಳೆಯುತ್ತವೆ. ಕಲಾವಿದನೊಬ್ಬ ತನ್ನ ಕಲಿಕಾ ಸಾಮಾಗ್ರಿಗಳನ್ನು ಗುಡ್ಡೆ ಹಾಕಿ ಮಾರುವ ಹಂತಕ್ಕೆ ಬಂದಿರಬೇಕಾದರೆ, ಆತನ ಬಡತನ ಕಣ್ಣಿಗೆ ರಾಚುವಂತೆ ಕಾಣಿಸುತ್ತಿದೆ ಅಲ್ಲವೇ? ನನ್ನ ಇ-ಮೇಲ್‌ಗೆ ಪ್ರತಿದಿನ ಬಿಎಫ್‌ಎ, ಎಂಎಫ್‌ಎ ಕಲಿತವರ ಚಿತ್ರಗಳ ಪ್ರದರ್ಶನಕ್ಕೆ ಆಹ್ವಾನ ಬಂದಿರುತ್ತದೆ. ಅವುಗಳನ್ನು ನೋಡಿದಾಗ ನನಗೆ ಎಷ್ಟೋ ಚಿತ್ರಗಳು ಅರ್ಥವಾಗುವುದಿಲ್ಲ. ತಲೆ ಕೆಡಿಸಿಕೊಳ್ಳಲು ಇಷ್ಟವಿಲ್ಲದೆ, "Nice work dude, amazing colour usage with minute effort, I would be happy to see your exhibition" ಎಂದು ಮೇಲ್ ಕಳಿಸಿ ಸುಮ್ಮನಾಗಿಬಿಡುತ್ತೇನೆ. ಆದರೆ ಖಾನರ ಚಿತ್ರಗಳು ನಿಂತು ನೋಡುವಂತೆ, ನೋಡಿದರೂ ಇನ್ನೂ ಆಳದಲ್ಲಿ ಏನೋ ಇದೆ ಎಂಬಂತೆ ಮಾತನಾಡುತ್ತಿರುತ್ತವೆ. ಬಜಾರಿನ ಕಣ್ಣುಗಳಿಗೆ ಅವರ ಚಿತ್ರಗಳು ಯಾಕೋ ಮುಖ್ಯವೆನಿಸದೆ, ಇತರೆ ವಸ್ತುಗಳ ಭರಾಟೆಯಲ್ಲೇ ಮುಳುಗಿರುತ್ತವೆ.



ಖಾನ್‌ರಿಂದ, ಹೊರಲು ಭಾರವಾದ ಎರಡು ಪುಸ್ತಕಗಳನ್ನು ಕೊಂಡು, ಮುನ್ನಡೆದೆ. ನಿಂಬೆ ಟೀಯೊಂದನ್ನು ಕೊಂಡು, ಬಿಲ್ಡಿಂಗ್‌ವೊಂದರ ಮೆಟ್ಟಿಲಲ್ಲಿ ಕುಳಿತೆ. "ಅರೆ ಈ ಅಂಗಡಿಗಳೆಲ್ಲಾ ಯಾಕೆ ಬಾಗಿಲಾಕಿವೆ" ಎಂದು ಆಲೋಚಿಸತೊಡಗಿದೆ. ಕೆ.ಆರ್.ಮಾರುಕಟ್ಟೆಯಿಂದ ಮೆಜೆಸ್ಟಿಕ್‌ವರೆಗಿನ, ಎಲ್ಲಾ ಅಂಗಡಿಗಳು ಭಾನುವಾರ ರಜೆ ಘೋಷಿಸಿರುತ್ತವೆ. ಕಾಟನ್ ಪೇಟೆ, ಚಿಕ್ಕಪೇಟೆ, ಬಿವಿಕೆ ಅಯ್ಯಂಗಾರ್ ರಸ್ತೆಯ ಬಹುತೇಕ ಅಂಗಡಿಗಳು ಭಾನುವಾರ ತೆಗೆಯುವುದಿಲ್ಲ. ಕಾರಣ ಸಿಂಪಲ್. ಸಂಡೇ ಬಜಾರಿನ ವ್ಯಾಪಾರಿಗಳಿಗೆ ಸಹಾಯ ಮಾಡುವ ಉದ್ದೇಶ ಅವರದು. ಸಂಡೇ ಬಜಾರಿನ ಬಹುತೇಕ ವ್ಯಾಪಾರಿಗಳು ಮುಸಲ್ಮಾನರು. ಅಲ್ಲಿನ ಶಾಶ್ವತ ಅಂಗಡಿಯವರು ಹಿಂದೂ ಶೆಟ್ಟರು ಮತ್ತು ಜೈನ್ ಸೇಟುಗಳು. ಸಹಬಾಳ್ವೆ ಅಂದರೆ ಇದಲ್ಲವೆ? ಕಳೆದ 50 ವರಷಗಳಿಂದ ನಡೆದು ಬಂದಿರುವ ಸಂಡೇ ಬಜಾರಿನ ಇತಿಹಾಸ ಇದು. "ಇಲ್ಲಿ ವ್ಯಾಪಾರ ಮಾಡಲು ಅಂಗಡಿಯವರಿಗೆ ದುಡ್ಡು ಏನಾದರು ಕೊಡಬೇಕಾ ಅಣ್ಣಾ?" ಎಂದು ಕೇಳಿದೆ ನಯಾಜ್‌ರನ್ನ. "ಮತ್ತೆ ಸುಮ್ಗೆ ಕೊಟ್ಬಿಡ್ತಾರೆ? ಸಖತ್ ಕೊಡಬೇಕು. ಪೋಲಿಸ್‌ಸೋರ್ಗೆ! ಅಂಗಡಿಯವರಿಗಲ್ಲ. ಪಾಪ ಅವ್ರು ದೇವರ್‍ರು ಇದ್ದಂಗೆ. ಈ ಹಲ್ಕಾ ಖಾಕಿ ಇದೇ ಅಲ್ಲ, ಐದಾರು ಸ್ಟೇಷನ್‌ಕ ಚೋರ್ ಆತೇ ಹೈ" ಎಂದರು. ಇದರ ಪಾಲು ಲೋಕಲ್ ಬಿಬಿಎಂಪಿಯ ಕಾರ್ಪೊರೇಟರ್‌ಗೂ ಉಂಟಂತೆ!

ರಾಜಧಾನಿ ರೌಂಡ್ಸ್

ನಾನು ಕೂತಿದ್ದ ಬಿಲ್ಡಿಂಗ್ ಮೇಲೆ ಫೋಟೋ ತೆಗೆಯಲು ಹೋದೆ. ಒಂದು ಅಡ್ಡ ರಸ್ತೆಯಲ್ಲಿ ಹೋಗಿಬರುವ ಜನರನ್ನು ಲೆಕ್ಕ ಮಾಡಲು ಪ್ರಯತ್ನಿಸಿದೆ. ಅರ್ಧ ಗಂಟೆಯಲ್ಲಿ 3000 ತಲೆಗಳನ್ನು ಎಣಿಸಲು ಸಾಧ್ಯವಾಯಿತಷ್ಟೆ. ಅದರಲ್ಲಿ ಅರ್ಧ ಮಂದಿ ಎರಡು ಬಾರಿ ಓಡಾಡುತ್ತಾರೆ ಎಂದು ಕಳೆದರೂ, ಗಂಟೆಯೊಂದರಲ್ಲಿ 3000 ಜನ ಆ ರಸ್ತೆಯಲ್ಲಿದ್ದರು. ಹೀಗೆಯೇ 12 ಗಂಟೆಗಳಲ್ಲಿ 30,000 ಜನ ಕೇವಲ ಒಂದು ರಸ್ತೆಯಲ್ಲಿ ಇರುತ್ತಾರೆ. ಮಾರ್ಕೆಟ್-ಮೆಜೆಸ್ಟಿಕ್ ನಡುವಿನ ಆ ಐದು ಕಿ.ಮೀ ಜಾಗದಲ್ಲಿ ಇಂತಹ 50 ರಸ್ತೆಗಳಿವೆ. ಅಂದರೆ 15ಲಕ್ಷ ಜನ. ಇದರಲ್ಲಿ 1/3 ಭಾಗವನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಸುಮಾರು ಐದು ಲಕ್ಷ ಜನ ಪ್ರತೀ ವಾರ ಸಂಡೇ ಬಜಾರಿಗೆ ಭೇಟಿ ನೀಡೇ ನೀಡುತ್ತಾರೆ. ಅಂದರೆ ಬೆಂಗಳೂರಿನ ಶೇ.5–10 ರಷ್ಟು ಜನ ಈ ಮಾರುಕಟ್ಟೆಯ ಖಾಯಂ ಗ್ರಾಹಕರಾಗಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು, ಗ್ರಾಹಕರ ವರ್ಗವನ್ನ. ನಗರಗಳಿಗೆ ವಲಸೆ ಬಂದ ಕೃಷಿ ಅಥವಾ ದುಡುಮೆ ನಂಬಿದ ಕೆಳ ಮಧ್ಯಮ ವರ್ಗದ ಮಂದಿ. ಮಾರಾಟಗಾರರೋ... ಬೆಂಗಳೂರಿನ ಬೃಹತ್ ಸ್ಲಂಗಳಾದ ಕಾವೇರಿನಗರ, ಯಾರಬ್ ನಗರ, ನಾಗವಾರ, ದೇಶೀನಗರದಿಂದ ಬರುವವರು. ವಾರದ ಆರು ದಿನ ಎಲ್ಲಿ ಮಾಲುಗಳು ಸಿಗುತ್ತವೆ ಎಂಬ ಮಾಹಿತಿ ಹುಡುಕಾಡಿ, ಹೆಕ್ಕಿ, ಹೋಗಿ ಚೌಕಾಸಿ ಮಾಡಿ, ಮಾಲು ಒಟ್ಟುಮಾಡಿ, ಸಂಡೇಗಾಗಿ ಸಿಂಗರಿಸಿಕೊಳ್ಳುತ್ತಾರೆ. ಕೆಲವರು ಮಾತ್ರ ಬೇರೆಡೆ ಒಂದು ಕಾಯಂ ಅಂಗಡಿ ಇರಿಸಿಕೊಂಡಿರುತ್ತಾರೆ.

ಬ್ರಾಂಡೆಡ್ ವಸ್ತುಗಳಿಂದಿಡಿದು ದೇಸಿ ಮೇಡ್‌ವರೆಗೆ ಸಕಲವೂ ದೊರೆಯುವ ಸಂಡೇ ಬಜಾರಿನ ಗಿರಾಕಿಗಳು, ಒಂದೋ ಮಾಲ್‌ಗಳ ದರದಲ್ಲಿ ತಮಗೆ ಬೇಕಾದ ವಸ್ತುವನ್ನು ಕೊಳ್ಳಲಾಗದವರು ಅಥವಾ ಇಲ್ಲಿ ಸಿಗುವ ವಸ್ತು ಅವರಿಗೆ ಬೇರೆಲ್ಲೂ ಸಿಗದಿರುವವರು. ಇಲ್ಲಿನ ಕೆಟ್ಟ ವಸ್ತುಗಳನ್ನು ತೆಗೆದುಕೊಂಡು ರಿಪೇರಿ ಮಾಡಿ ತಮ್ಮ ತಮ್ಮ ಚಿಲ್ಲರೆ ಅಂಗಡಿಗಳಲ್ಲಿ ಮಾರುವವರೂ ಇದ್ದಾರೆ. ಉದಾಹರಣೆಗೆ ಹಾಳಾದ ಕಂಪ್ಯೂಟರ್ ಮದರ್‌ಬೋರ್ಡ್ ಅನ್ನು ತೆಗೆದುಕೊಂಡು, ಯಾವುದೊ ಇನ್ನೊಂದರ ಸೆಮಿಕಂಡಕ್ಟರ್‌ನೊಂದಿಗೆ ಹೊಂದಿಸಿ ಹೊಸ ಮದರ್‌ಬೋರ್ಡ್ ತಯಾರಿಸುವ ಫಾದರ್‌ಗಳನ್ನು ಕಾಣಬಹುದು. ತಮ್ಮ ಓರಿಗೆಯವರಂತೆ ಕಾಣಬೇಕು, ಅವರಂತೆಯೇ ಬಟ್ಟೆ ತೊಡಬೇಕೆಂದು ಬಯಸುವ ಬಹುತೇಕ ಮಂದಿಯ 'ಚೀಪ್ ಅಕ್ಷಯಪಾತ್ರೆ' ಸಂಡೇ ಬಜಾರ್. ನೂರಿನ್ನೂರು ರೂಪಾಯಿಗಳಲ್ಲಿ ಬೇಕಾದ ಜರ್ಕಿನ್, ಸೀರೆ, ಚೆಡ್ಡಿ ಎಲ್ಲವೂ ದೊರೆಯುತ್ತವೆ. ಕೆಲವೊಮ್ಮೆ ಹಳೆಯವಕ್ಕೆ ಬಣ್ಣಹಾಕಿದ ಅಥವಾ ತೇಪೆಯ ವಸ್ತುಗಳೂ ಗ್ರಾಹಕರನ್ನು ಏಮಾರಿಸುವುದು ಮಾಮೂಲು.

ಸಂಡೇ ಬಜಾರಿನ ಇಷ್ಟು ದಿನಗಳಲ್ಲಿ ನಾನು ಒಮ್ಮೆಯೂ ಒಂದು ಸಣ್ಣ ಜಗಳವನ್ನು ನೋಡಿಲ್ಲ. ನಡೆದಿರಬಹುದು. ಆದರೆ ನನ್ನ ಕಣ್ಣುಗಳಿಗೆ ಕಾಣಿಸಿಲ್ಲ. ಆಯಾ ವ್ಯಾಪಾರಿ ಆಯಾ ಜಾಗದಲ್ಲೇ ಪ್ರತೀವಾರ ಕೂರಬೇಕು. ಬೇರೆ ಇನ್ನೆಲ್ಲೂ ಅಲ್ಲ. ಇದೇ ಮಾದರಿಯ, ಇನ್ನು ದೊಡ್ಡ ಸಂಡೇ ಸಂತೆಗಳು ಮುಂಬಯಿ, ದೆಹಲಿಯಲ್ಲೂ ಇವೆಯೆಂದು ಕಾಮರೂಪಿ ಪ್ರಭಾಕರ್ ಸಾರ್ ಹೇಳುತಿದ್ದರು. ಅಂದರೆ ಎಲ್ಲಾ ನಗರದ ಎಕ್ಸ್‌ಟ್ರೀಮ್‌ಗಳು ಒಂದೇ ಬಗೆಯವಾಗಿರುತ್ತವೆ ಎಂದರ್ಥವಲ್ಲವೇ? ಒಂದು ಕೆಲಸದ ಒತ್ತಡ ನಿಮಿತ್ತ ಬರುವ ಅನೇಕ ರೋಗಿಷ್ಟರ ವರ್ಗ, ಇನ್ನೊಂದು ಕಸದಲ್ಲೇ ಸುಂದರವಾಗಿರಲು ಬಯಸುವ ಸ್ಲಂ ನಿವಾಸಿಗಳು. ಈ ಎರಡೂ ವರ್ಗಗಳ ಹಿತಾಸಕ್ತಿ ಕಾಯುವ ಮಾರುಕಟ್ಟೆಗಳು... ಎಲ್ಲಿಯವರೆಗೂ ಇದು ಸಾಗಲು ಸಾಧ್ಯ? ಕರ್ನಾಟಕದ ಆರು ಕೋಟಿ ಜನಸಂಖ್ಯೆಯಲ್ಲಿ ಒಂದು ಕೋಟಿ ಬೆಂಗಳೂರಿಗರಾಗಿದ್ದಾರೆಂದರೆ, ಇವರಿಗೆ ಕೆಲಸ ಎಲ್ಲಿಂದ? ಉತ್ತಮ ಜೀವನ ಕೃಷಿ ನಂಬಿ ಬದುಕುವುದೇ ಅಸಾಧ್ಯವಾ? ಅವರಿಗೆ ನಗರ ಪರ್ಯಾಯವಾಗದಂತೆ ನೋಡಿಕೊಳ್ಳುವುದು ಯಾರ್‍ಯಾರ ಜವಾಬ್ದಾರಿ?



ಮಾರಮ್ಮ ಮತ್ತಿತರ ಶೂದ್ರ ದೇವತೆಗಳ ದೇವಾಲಯಗಳಿಗೆ ಬ್ರಾಹ್ಮಣರು ಅರ್ಚಕರಾಗುವ ಮೂಲಕ ವೈದಿಕ ಹಿಡಿತದ ವಿಸ್ತರಣೆ ನಿರಂತರವಾಗಿ ನಡೆಯುತ್ತಾ ಬಂದಿದೆ. ಈ ಪ್ರಕ್ರಿಯೆ ಇಂದಿಗೂ ಮುಂದುವರೆದಿದೆ.

ಮಾರಮ್ಮನ ಕಥೆಯಲ್ಲಿ ಚಾರಿತ್ರಿಕ ನೆನಪುಗಳು

⌘ ಡಾ. ವಸು ಎಂ.ವಿ.

ಪುರಾತನವಾದ ನೆನಪುಗಳನ್ನು ಕಥೆ, ಹಾಡುಗಳಲ್ಲಿ ತಲತಲಾಂತರಕ್ಕೆ ಸಾಗಿಸುವುದು ರೋಚಕವಾದ ವಿಚಾರವೇ ಸರಿ. ಆ ನೆನಪುಗಳು ಎಷ್ಟು ಹಳೆಯದೆಂದು ಹುಡುಕುವುದು ವಿದ್ವಾಂಸರಿಗಿಂದು ದೊಡ್ಡ ಸವಾಲು. ಹೀಗೆ ಹರಿದುಬಂದ ಕಥೆ ಆಚರಣೆಗಳಲ್ಲಿ ಒಂದು ಆಸಾದಿಗಳ ಬಾಯಲ್ಲಿ ಉಳಿದುಬಂದಿರುವ ಮಾರಮ್ಮನ ಕಥೆ.

ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ ಶ್ರೀಬಾಲಗೌರಿ ಎಂಬ ಸುಂದರ ಹಾರುವರ ಹುಡುಗಿ ಇದ್ದಳು. ಅವಳನ್ನು ಕಂಡ ಮಾದಿಗರ ಹುಡುಗ ಕದರ ವ್ಯಾಮೋಹಗೊಳ್ಳುತ್ತಾನೆ. ತನ್ನ ಹೆಸರನ್ನು ಸುಬ್ಬರಾಯನೆಂದು ಬದಲಾಯಿಸಿಕೊಂಡು ಅವರ ಮನೆಯಲ್ಲಿ ವೇದ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾನೆ. ಜಾತಿಯ ಕಾರಣಕ್ಕೆ ಆಕೆಯ ಜೊತೆ ವಿವಾಹವಾಗುವುದು ಅಸಾಧ್ಯವಾದ ಕನಸೇ ಆಗಿತ್ತು. ಆದ್ದರಿಂದ ಅವನಿಗೆ ತನ್ನ ಜಾತಿಯನ್ನು ಮುಚ್ಚಿಡುವುದು ಅನಿವಾರ್ಯವಾಯಿತು. ಹೀಗೆ ಊರು ಕೇರಿಯನ್ನು ಬಿಟ್ಟು ಬಂದ ಕದರನನ್ನು ಹುಡುಕಿಕೊಂಡು ಆತನ ತಾಯಿ ಕದರಮ್ಮ ಅವನ ಬಳಿಗೆ ಬರುತ್ತಾಳೆ. ಐದು ಜನ ಗಂಡು ಮಕ್ಕಳನ್ನು ಹೊಂದಿ ಸುಂದರವಾದ ಸಂಸಾರವನ್ನು ಸಾಗಿಸುತ್ತಿದ್ದ ಕದರ ಮತ್ತು ಅವನ ಹೆಂಡತಿ ಬಾಲಗೌರಿ ಸಂಭ್ರಮದಿಂದ ಆಕೆಯನ್ನು ನೋಡಿಕೊಳ್ಳುತ್ತಾರೆ. ಕದರ ಆಕೆಗೆ ತನ್ನ ಜಾತಿ ಗುರುತನ್ನು ಮುಚ್ಚಿಡಲು ಮೂಗಿಯಂತೆ ಅಭಿನಯಿಸುವಂತೆ ಕೇಳಿಕೊಳ್ಳುತ್ತಾನೆ. ವಿವಿಧ ಬಗೆಯ ಭಕ್ಷ್ಯ ಬೋಜ್ಯಗಳನ್ನು ಮಾಡಿ ಉಣಬಡಿಸುತ್ತಾಳೆ. ಊಟದಲ್ಲಿ ಕಡ್ಡಿಯ ಚೂರೊಂದು ಬಾಯಿಗೆ ಸಿಗುತ್ತದೆ. ಎಲುಬಿನ ಚೂರೆಂದು ಬಗೆದು ಅರಿವಿಲ್ಲದೆ ಉದ್ಗಾರ ತೆಗೆಯುತ್ತಾಳೆ. ಅಲ್ಲಿ ಆತನ ಜಾತಿ ವಿಚಾರ ಪ್ರಕಟಗೊಳ್ಳುತ್ತದೆ. ಅದನ್ನು ತಿಳಿದ ಬಾಲಗೌರಿ ಉಗ್ರವಾಗಿ ಗಂಡನ ಕೊಲೆಗೆ ಮುಂದಾಗುತ್ತಾಳೆ. ಅವಳ ಅಣ್ಣಂದಿರು ಅವನನ್ನು ಅಟ್ಟಿಸಿಕೊಂಡು ಹೋದಾಗ ಅವನು ಓಡಿ ಓಡಿ ಕೋಣನ ದೇಹದೊಳಗೆ ಸೇರಿಕೊಳ್ಳುತ್ತಾನೆ. ಆ ಕೋಣನ ಕಾಲು ಕತ್ತರಿಸಿ ಅದನ್ನು ಅದರ ಬಾಯಿಗೆ ಸಿಕ್ಕಿಸಿ ತಲೆಯನ್ನು ಕತ್ತರಿಸುತ್ತಾರೆ. ಆ ತಲೆಯ ಮೇಲೆ ಅದರ ದೇಹದಿಂದ ತೆಗೆದ ತುಪ್ಪದಿಂದ ದೀಪ ಹಚ್ಚುತ್ತಾರೆ.

ಈ ಕಥೆಯಲ್ಲಿ ಪಾಠಾಂತರಗಳು ಕಾಣಬರುತ್ತವೆ. ಅದರಲ್ಲಿ ಬಾಲಗೌರಿ ಮರುಜನ್ಮದಲ್ಲಿ ಮಾರಿಯಾಗಿ ಹುಟ್ಟಿ ಆ ಕೋಣದ ಬಲಿಯನ್ನು ತೆಗೆದುಕೊಳ್ಳುವುದಾಗಿ, ಹಾಗೂ ಅವಳಿಗೆ ಹುಟ್ಟಿದ ಐದು ಮಕ್ಕಳು ಕೋಣಗಳಾಗಿ ಹುಟ್ಟಿ ಅವುಗಳನ್ನು ಬಲಿ ತೆಗೆದುಕೊಳ್ಳಲು ಮುಂದಾಗುತ್ತಾಳೆ. ಆ ಹೊತ್ತಿಗೆ ಕಡೆಯ ಮಗು ತನ್ನ ಜೀವವನ್ನು ಉಳಿಸುವಂತೆ ಕೇಳಿಕೊಂಡಾಗ, ಅವನಿಗೆ ಜೀವದಾನವನ್ನು ಮಾಡಿದ ಬಾಲಾಗೌರಿ, ಅವನು ಆಸಾದಿಯಾಗಿ ಮಾರಮ್ಮನ ಈ ಕಥೆಯನ್ನು ನಾಡಿಗೆ ಹರಡುವಂತೆ ಆದೇಶಿಸುತ್ತಾಳೆ. ಮುಂದೆಂದೂ ಹೀಗೆ ವರ್ಣ ಸಂಕರವಾಗದಂತ ಎಚ್ಚರವನ್ನು ಈ ಕಥೆ ಹೇಳುತ್ತದೆ.

ಈ ಮಾರಮ್ಮ ಅಥವಾ ಮಾರವ್ವನನ್ನು ಕರ್ನಾಟಕ, ತಮಿಳುನಾಡು, ಆಂದ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಆರಾಧಿಸಲಾಗುತ್ತದೆ. ಸ್ಥಳೀಯವಾಗಿ, ಹಲವು ಭಿನ್ನ ಹೆಸರುಗಳಿಂದ ಕರೆದರೂ ಕಥೆಯ ಮೂಲ ನಂಬಿಕೆ ಒಂದೇ ಆಗಿದೆ. ಮೂಲತಃ ಮಾದಿಗರಿಂದ ಪೂಜೆಗೊಳಗಾಗುವ ಈ ದೇವತೆಗೆ ನಂತರದಲ್ಲಿ ಶೂದ್ರರೆಲ್ಲರೂ ನಡೆದುಕೊಳ್ಳುತ್ತಾರೆ. ಕೆಲವು ದೇವಾಲಯಗಳಲ್ಲಿ ಅದರಲ್ಲೂ ಪ್ರಸಿದ್ಧವಾಗಿ ಬೆಳೆದು ನಿಂತ ಮಾರಮ್ಮನ ದೇವಾಲಯಗಳಲ್ಲಿ ಬ್ರಾಹ್ಮಣರು



ಅರ್ಚಕರಾಗಿ ಮತ್ತು ಆಕೆಯನ್ನು ವಿಷ್ಣುವಿನ ಸೋದರಿಯೆಂದು ಕರೆಯುತ್ತಾರೆ.

ಇಲ್ಲಿ ನಮಗೆ ಪ್ರಧಾನವಾಗಿ ಎದುರಾಗುವ ಸವಾಲುಗಳೆಂದರೆ;
ಮಾರಮ್ಮನ ಕಥೆ
ವರ್ಣಸಂಕರದ ಕಥೆ

ಇಲ್ಲಿ ಬಲಿಯಾಗುವ ಕೋಣ, ಮಾದಿಗ ಸಮುದಾಯವನ್ನೇನಾದರೂ ಪ್ರತಿನಿಧಿಸುತ್ತದೆಯೇ?

ಬಲಿಯಾದವನ ಸಮುದಾಯವೇ ಶಾಪಕ್ಕೆ ಒಳಗಾಗುವ ಭಯದಿಂದ ಆ ದೇವಿಯನ್ನು ಪೂಜಿಸುವುದೇ ಕಾಣುತ್ತದೆ

ಮಾರಮ್ಮನಲ್ಲದೆ ಗ್ರಾಮದೇವತೆಗಳೆಲ್ಲವೂ ಶಕ್ತಿ ದೇವತೆ ಜಗದಂಬೆಯ ಅಂಶವೆಂದು ಪರಿಗಣಿಸಿದ್ದು, ಗ್ರಾಮ ದೇವತೆಗಳು ತಮ್ಮ ಮೂಲ ಅಸ್ತಿತ್ವವನ್ನು ಕಳೆದುಕೊಳ್ಳುವಂತೆ ಮಾಡಿವೆ. ಪುರಾಣಗಳ ರಚನೆಯ ಹೊತ್ತಿಗೆ ಇದು ಮತ್ತಷ್ಟು ದೃಢವಾಗಿದೆ.

ಮಾರಮ್ಮ ಮತ್ತಿತರ ಶೂದ್ರ ದೇವತೆಗಳ ದೇವಾಲಯಗಳಿಗೆ ಬ್ರಾಹ್ಮಣರು ಅರ್ಚಕರಾಗುವ ಮೂಲಕ ವೈದಿಕ ಹಿಡಿತದ ವಿಸ್ತರಣೆ ನಿರಂತರವಾಗಿ ನಡೆಯುತ್ತಾ ಬಂದಿದೆ. ಈ ಪ್ರಕ್ರಿಯೆ ಇಂದಿಗೂ ಮುಂದುವರೆದಿದೆ. ಕೆಲವು ಮಾರಮ್ಮನ ಗುಡಿಗಳಲ್ಲಿ ಇಂದಿಗೂ ಕೋಡುಗಲ್ಲುಗಳನ್ನು ಪೂಜಿಸುವುದು ಕಾಣುತ್ತದೆ. ಅಂತಹ ಕಡೆ ಅದರ ಪ್ರಾಚೀನತೆಯನ್ನು ಶಿಲಾಯುಗಕ್ಕೆ ಎಳೆದೊಯ್ಯಬಹುದೆ ?

ಮಾರಮ್ಮನ ಕಥೆ ಹಲವು ಇತರ ದೇವಿಯರಿಗೆ ಅನ್ವಯಿಸುತ್ತದೆ. ಕರಿಯಮ್ಮ, ಕಾಳಮ್ಮ, ಮಾಂಕಾಳಮ್ಮ, ಕರುಮಾರಿಯಮ್ಮ, ಇದಲ್ಲದೆ ರೇಣುಕೆ ಎಲ್ಲಮ್ಮನ ಜೊತೆಗೂ ತಳಕು ಹಾಕಲಾಗುತ್ತದೆ.

ಸಮುದಾಯದ ಚಾರಿತ್ರಿಕ ನೆನಪುಗಳು ಈ ಕಥೆಯುಲ್ಲಿ ಹುದುಗಿರುವುದರಿಂದ, ಕಥೆ ಮತ್ತು ಆಚರಣೆಗಳನ್ನು ಪುನರ್ ಪ್ರಶ್ನಿಸಿಕೊಳ್ಳಬೇಕಾದ ಅಗತ್ಯವಿದೆ. ಮಾರಮ್ಮನನ್ನು ಮೂರ್ತಿ ಶಿಲ್ಪವಾಗಿಸಿದ ಹೊತ್ತಿಗೆ ಕೈಯಿಗೆ ತ್ರಿಶೂಲವನ್ನು ಕೊಡಲಾಗಿದೆ. ಅವಳ ಹೆಸರು ಬಾಲಗೌರಿ, ಇದು ಕರ್ನಾಟಕ ಹಾಗೂ ದಕ್ಷಿಣ ಭಾರತದ ಶೈವ ಪಂಥದ ಪ್ರಭಾವದ ಹಿನ್ನೆಲೆಯನ್ನು ಸೂಚಿಸುತ್ತದೆ. ಅಂದರೆ ಕ್ರಿಸ್ತ ಶಕ 5ನೇ ಶತಮಾನಕ್ಕೆ ಈ ವಿಚಾರವನ್ನು ಕೊಂಡೊಯ್ಯಬಹುದು. ಕದರನಿಗೆ ಬದಲಾಗಿ ಕೊಡುವ ಕೋಣನ ಬಲಿ, ಪರೋಕ್ಷವಾಗಿ ನರಬಲಿಯ ಸಂಕೇತವೇ ಆಗಿದೆ.

ಒಂದು ಪಠ್ಯದಲ್ಲಿ ರಾಯಚೂರಿನ ಗೌಡನ ಮನೆಯ ಕೋಣನನ್ನು ಬಲಿಕೊಡುವಂತೆ ಮಾರವ್ವ ಒತ್ತಾಯಿಸುತ್ತಾಳೆ. ಉಳುಮೆಗೆ ಬೇಕಾದ ಕೋಣನ ಬಲಿ ಕೊಡಲು ನಿರಾಕರಿಸಿದ ಗೌಡನಿಗೆ ಹಲವು ಕಷ್ಟಗಳು ಬಂದೊದಗುತ್ತವೆ. ಅಂದರೆ ಈ ಭಾಗದ ಕಲ್ಪನೆಯಲ್ಲಿ ಕೃಷಿ ಸಮಾಜದ ಪ್ರವೇಶವನ್ನು ಕಾಣಬಹುದು.

ಕೋಣನನ್ನು ಸಮುದಾಯದ ಸಂಕೇತವಾಗಿ ನೋಡುವಾಗ ನೀಲಗಿರಿ ಬೆಟ್ಟದ ತೋಡರ ಮುಖ್ಯ ಕಸುಬು ಎಮ್ಮೆಗಳನ್ನು ಸಾಕುವುದು. ಹಾಗೂ ಅವರ ಆರಾಧ್ಯ ದೈವ ಕೋಣ. ಅವರ ಗುಡಿಯ ಬಾಗಿಲಿಗೆ ಕೋಣನ ತಲೆಯನ್ನು ಹಾಕಿರುವುದನ್ನು ನಾವು ಈಗಲೂ ನೀಲಗಿರಿ ಬೆಟ್ಟದಲ್ಲಿ ಕಾಣಬಹುದು.

ಮುಂದುವರೆದು ಮೈಸೂರಿನ ಹೆಸರಿನ ಮೂಲ ಮಹಿಷನ ಊರು. ಸಂಸ್ಕೃತದ ಮಹಿಷ ಕನ್ನಡದಲ್ಲಿ ಎಮ್ಮೆ . ಅಶೋಕನ ಶಾಸನದಲ್ಲಿ ಇಂದಿನ ಮೈಸೂರು ಪ್ರದೇಶವನ್ನು ಎರ್ಮೈ ನಾಡು ಎನ್ನಲಾಗಿದೆ. ಈ ಭಾಗದ ಜನರನ್ನು ಮಾರಿಯ ಕೋಣ ಸಂಕೇತಿಸುತ್ತದೆಯೇ ಎಂದೂ ಪ್ರಶ್ನಿಸಿಕೊಳ್ಳಬಹುದಾಗಿದೆ.

ಈ ಚಿಂತನೆಗೆ ಪೂರಕವಾಗಿ ವಡ್ಡಗೆರೆ ನಾಗರಾಜಯ್ಯ ಅವರ 'ಆಸಾದಿ' ಖಂಡಕಾವ್ಯ ಮತ್ತು 'ಎಮ್ಮೆ' ಕನ್ನಡ ಸಂಸ್ಕೃತಿಯ ಲಾಂಛನ' ಎಂಬ ಲೇಖನ ಹಾಗೂ ಮಾರಿ ದೇವತೆಯ ಕುರಿತಾಗಿ ಬಂದಿರುವ ಇತರೆ ಸಂಶೋಧಕರ ಅನೇಕ ಕೃತಿಗಳನ್ನು ಪರಾಮರ್ಶೆಗೆ ಒಳಪಡಿಸುವ ಅಗತ್ಯವಿದೆ. ಮಾರಿ ದೇವತೆಯಂತಹ ನೆಲದೇವತೆಗಳನ್ನು ಕುರಿತು ಈ ಚರ್ಚೆಯನ್ನು ಮುಂದುವರೆಸಬೇಕಾಗಿ ಲೇಖಕರಲ್ಲಿ ವಿನಂತಿ...

ಈ ತೆಪ್ಪದ ದೀಪ ಸಾಲು...

ಸಂಪಾದಕರು : ಕೋಟಿಗಾನಹಳ್ಳಿ ರಾಮಯ್ಯ

ಲಿವಿಂಗ್ ಟೈಮ್ಸ್ ಬಳಗ
ಸಿ.ಜಿ ಲಕ್ಷ್ಮೀಪತಿ
ವಸು ಎಂ.ವಿ
ವಡ್ಡಗೆರೆ ನಾಗರಾಜಯ್ಯ
ಡಾ॥ ಆರ್.ವಿ.ಚಂದ್ರಶೇಖರ್ ರಾಮೇನಹಳ್ಳಿ
ಡಾ॥ ಸುಮಾ ಬಿ.ಯು
ಅರುಣ್ ಕುಮಾರ್.ಜಿ
ಶಾಂತರಾಜು ಎಸ್ ಮಳವಳ್ಳಿ
ಡಾ.ರವಿಕುಮಾರ್ ಬಾಗಿ
ರುದ್ರೇಶ್ ಅದರಂಗಿ
ಮಲ್ಲನಗೌಡರ್ ಪಿ.ಕೆ
ಡಾ. ಸಿ. ರವೀಂದ್ರನಾಥ್

ಚಂದಾ ವಿವರ
ಬಿಡಿ ಪ್ರತಿ : ರೂ. 10/-
ದ್ವೈ ವಾರ್ಷಿಕ: ರೂ. 250/-
ಪೋಷಕ ಸದಸ್ಯತ್ವ : ರೂ. 1000/-
ದಾನಿ : ರೂ. 5,000/-
ದಾನಿ : ರೂ. 10,000/-



ಅಂಬೇಡ್ಕರ್ ಹೊರಗೆ ಗಾಂಧಿ ಒಳಗೆ

⌘ ಡಾ. ಸುಮಾ ಬಿ. ಯು.

ಪ್ರಾಂಶುಪಾಲರು ತಮ್ಮ ಹಿಂದಿನ ಗೋಡೆಯ ಮೇಲೆ ನೇತು ಹಾಕಲು ಹಲವು ಸುಂದರ ಕಲಾಕೃತಿಗಳು, ಗಾಂಧೀಜಿ, ಅಂಬೇಡ್ಕರ್ ಪೋಟೋಗಳನ್ನು ತಂದರು ಯಾವ ಯಾವ ಫೋಟೋಗಳನ್ನು ಎಲ್ಲಿ ಹಾಕಬೇಕು ಅಂತ ಚರ್ಚೆ ಶುರುವಾಯಿತು. ಮಧ್ಯದಲ್ಲಿ ಗಾಂಧೀಜಿ ಆ ಕಡೆ ಈ ಕಡೆ ಎರಡು ನಿಸರ್ಗದ ಚಿತ್ರಗಳು ಅಂತ ತೀರ್ಮಾನಿಸಲಾಯಿತು.

ಉನ್ನತ ಶಿಕ್ಷಣದ ಗುಣಮಟ್ಟ ಮೌಲ್ಯಮಾಪನ ಮಾಡುವುದಕ್ಕೆ ನ್ಯಾಕ್ ಅಂತ ಒಂದು ಆಯೋಗ ರಚಿಸಲಾಗಿದೆ. ಅದು ಪ್ರತಿ ಐದು ವರ್ಷಕ್ಕೆ ಒಂದು ಸಲ ಪದವಿ ಕಾಲೇಜುಗಳಿಗೆ ಭೇಟಿ ನೀಡಿ ಕಾಲೇಜಿನ ಹಾರ್ಡ್‌ವೇರ್, ಸಾಫ್ಟ್‌ವೇರ್ ಎಲ್ಲವನ್ನೂ ಮೌಲ್ಯಮಾಪನಕ್ಕೆ ಒಳಪಡಿಸುತ್ತದೆ. ನಂತರ ಆಯಾ ಕಾಲೇಜುಗಳು ಅರ್ಹತೆಗೆ ಅನುಸಾರವಾಗಿ ಶ್ರೇಣಿಗಳನ್ನು ನೀಡುತ್ತದೆ. ಇದರಲ್ಲಿ ಒಳ್ಳೆ ಗ್ರೇಡ್ ತೆಗೆದುಕೊಳ್ಳುವುದು ತುಂಬಾ ಸುಲಭ. ಮೇಸ್ಟ್ರುಗಳು ಯಾವ ರೀತಿಯ ಉತ್ತರಗಳನ್ನು ಬರೆಸುತ್ತಾರೆ ಅಂತ ವಿದ್ಯಾರ್ಥಿಗಳಿಗೆ ಗೊತ್ತಿರಲ್ವೇ? ಹಾಗೆ ಇದೂ. ಇಡೀ ವರ್ಷ ಓದಿದ ವಿದ್ಯಾರ್ಥಿಗಳು ಪರೀಕ್ಷೆ ಹೊತ್ತಿಗೆ ಆತಂಕಿತರಾಗುತ್ತಾರಲ್ಲ ಹಾಗೇ ನ್ಯಾಕ್ ಬರುವುದಕ್ಕೆ ಒಂದು ವರ್ಷವೋ, ಆರು ತಿಂಗಳೋ ಇದೆ ಎನ್ನುವಾಗ ಸ್ವಲ್ಪ ಮೈಕೊಡವಿಕೊಂಡು ಏಳುತ್ತವೆ. ಆಗ ಕಾಲೇಜಿನ ಕಟ್ಟಡದಿಂದ ಹಿಡಿದು ಕಡತಗಳ ತನಕ ಎಲ್ಲಾ ರಿಪೇರಿಯಾಗುತ್ತದೆ.

2008 –2009ರ ಸಮಯ ನಾನಾಗ ಪ್ರತಿಷ್ಟಿತ ಸರ್ಕಾರಿ ಕಾಲೇಜಿನಲ್ಲಿದ್ದೆ. ಅಲ್ಲಿ ಪ್ರತಿಷ್ಟಿತ ಜಾತಿಯ ಪ್ರತಿಭಾವಂತರಾದ ಅನೇಕ ಅಧ್ಯಾಪಕರು ಇದ್ದರು. ಇಂತಹ ಮೇಸ್ಟ್ರುಗಳನ್ನು ಪಡೆದ ಈ ಕಾಲೇಜು ಧನ್ಯ ಎಂದು ಎಲ್ಲರಿಗೂ ಅನಿಸಿತ್ತು. ಆದ್ದರಿಂದ ನ್ಯಾಕ್‌ನ ಎಲ್ಲಾ ಕೆಲಸದ ಜವಾಬ್ದಾರಿಯನ್ನು ಪ್ರಾಂಶುಪಾಲರು 'ಇಂತಹ' ಕೆಲವು ಅಧ್ಯಾಪಕರುಗಳಿಗೆ ವಹಿಸಿದ್ದರು. ಇವರ ನೇತೃತ್ವದಲ್ಲಿ ಭರದಿಂದ ಸಾಗಿತ್ತು. ಎಲ್ಲರೂ ಮೂಗಿನ ಮೇಲೆ ಬೆರಳು ಇಟ್ಟಿಕೊಳ್ಳುವಷ್ಟು ಗುಣಾತ್ಮಕ ಬದಲಾವಣೆಗಳು ದಿನ ಬೆಳಗಾಗುವುದರಲ್ಲಿ ಜಾದು ಮಾಡಿದಂತೆ ಆಗಿಬಿಡುತ್ತಿದ್ದವು. ಆಗ ರಾತ್ರಿ–ಹಗಲುಗಳ ವ್ಯತ್ಯಾಸವೇ ತಿಳಿಯದಂತೆ ಈ ಅಧ್ಯಾಪಕರುಗಳು ಕೆಲಸ ಮಾಡುತ್ತಿದ್ದರು. ಯಾರ ಬಾಯಲ್ಲಿ ಕೇಳಿದರೂ ಈ ಕಾಲೇಜಿನ ಸುದ್ದಿಯೇ ಸುದ್ದಿಯಾಗಿತ್ತು. ಸಾರಾಂಶ ರೂಪದಲ್ಲಿ ಧ್ಯೇಯ ಮತ್ತು ದರ್ಶನಗಳನ್ನು ಗುರ್ತಿಸಿಕೊಳ್ಳಬೇಕು ಎಂದು ನ್ಯಾಕ್ ಬಯಸುತ್ತದೆ. ಅದರಲ್ಲಿ ನಮ್ಮ ಕಾಲೇಜು ಬಹಳ ಮುಖ್ಯವಾಗಿ ಹೇಳಿಕೊಂಡಿದ್ದು "ಸಾಮಾಜಿಕ ಒಳಗೊಳ್ಳುವಿಕೆಗೆ ಶೈಕ್ಷಣಿಕ ಸಂಸ್ಥೆ ಪ್ರಥಮ ಆದ್ಯತೆ ನೀಡುತ್ತದೆ" ಎಂದು.

ನ್ಯಾಕ್ ತಪಾಸಣೆಯ ದಿನಗಳು ಹತ್ತಿರವಾಗುತ್ತಿದ್ದಂತೆ ಕಾಲೇಜು ಶೃಂಗಾರವಾಯಿತು, ಕಾಂಪೌಂಡು ಶೃಂಗಾರವಾಯುತು, ಇನ್ನು ಪ್ರಾಂಶುಪಾಲರ ಕೊಠಡಿ ಶೃಂಗಾರವಾಗಬೇಕಿತ್ತು. ಜಗ ಜಗ ಕೊಳೆಯುವ ಬಲ್ಬು, ಹೊಸ ಪಿಠೋಪಕರಣ, ಕಿಟಕಿಗಳಿಗೆಲ್ಲಾ ಹೊಸ ಪರದೆ "ಪುಣ್ಯ ಮಾಡಿರಬೇಕು ಈ ಕಾಲೇಜಿನಲ್ಲಿ ಪ್ರಾಂಶುಪಾಲರು ಆಗೋದಕ್ಕೆ" ಪ್ರಾಂಶುಪಾಲರು ತಮ್ಮ ಹಿಂದಿನ ಗೋಡೆಯ ಮೇಲೆ ನೇತು ಹಾಕಲು ಹಲವು ಸುಂದರ ಕಲಾಕೃತಿಗಳು, ಗಾಂಧೀಜಿ, ಅಂಬೇಡ್ಕರ್ ಪೋಟೋಗಳನ್ನು ತಂದರು ಯಾವ ಯಾವ ಫೋಟೋಗಳನ್ನು ಎಲ್ಲಿ ಹಾಕಬೇಕು ಅಂತ ಚರ್ಚೆ ಶುರುವಾಯಿತು. ಮಧ್ಯದಲ್ಲಿ ಗಾಂಧೀಜಿ ಆ ಕಡೆ ಈ ಕಡೆ ಎರಡು ನಿಸರ್ಗದ ಚಿತ್ರಗಳು ಅಂತ ತೀರ್ಮಾನಿಸಲಾಯಿತು.

ಆಗ ನಾನು 'ಅಂಬೇಡ್ಕರ್ ಫೋಟೋ?' ಎಂದೇ "ಗಾಂಧೀ ಪಕ್ಕ ಅಂಬೇಡ್ಕರ್ ಇಡೋದೆ! ಅದನ್ನು ಬೇರೆ ಎಲ್ಲಾದರೂ ಹಾಕಿದ್ರೆ ಆಯಿತು ಬಿಡಿ ಮೇಡಂ ಎಂದರು ಒಬ್ಬರು. ಸರಿ ಚರ್ಚೆಯಿಂದ ತಾತ್ವಿಕ ಜಗಳ, ನೈತಿಕತೆ ಪ್ರಶ್ನೆ ಎಲ್ಲವೂ ಆಗಿಹೋಯಿತು. ನ್ಯಾಕ್ ಕೆಲಸದ ಮುಂದಾಳತ್ವ ವಹಿಸಿಕೊಂಡಿದ್ದ ಯಾರೂ ಒಪ್ಪಲಿಲ್ಲ ಸರಿ, ಅಂಬೇಡ್ಕರ್ ಚಿತ್ರವನ್ನು ವಿಶ್ರಾಂತಿ ಕೊಠಡಿಯಲ್ಲಿ ಗೋಡೆಗೆ ಹಾಕಿದರು. ನನಗೆ ಆತ್ಮೀಯರಾಗಿದ್ದ ತಳ ಸ್ಥರದ ರಾಜಕಾರಣದಲ್ಲಿ ಮುಖ್ಯ ಪಾತ್ರವಹಿಸುತ್ತಿದ್ದ ಇನ್ನೊಬ್ಬ ಅಧ್ಯಾಪಕರ ಹತ್ತಿರ "ಅದ್ಹೇಗೆ ಸಾರ್, ನೀವಿದ್ದೂ ಇಂಥ ಕೆಲಸ ಆಯಿತು?" ಅಂಥ ಕೇಳಿದ್‌ಅದಕ್ಕೆ ಅವರು ಹೇಳಿದ್ದು "ಎರಡು ಫೋಟೋ ಆ ಜಾಗದಲ್ಲಿ ಬ್ಯಾಲೆನ್ಸ್ ಆಗಲ್ಲ" ಅಂತ.

ನ್ಯಾಕ್ ಸಮಿತಿ ಬಂತು ಹೋಯಿತು ಕಾಲೇಜಿಗೆ 'ಎ' ಗ್ರೇಡ್ ಕೂಡ ಬಂತು. 2011ರಲ್ಲಿ ನನಗೆ ಕಾಲೇಜಿಗೆ ವರ್ಗಾವಣೆಯಾಯಿತು. ಮೊನ್ನೆ ಯಾಕೋ ಹಳೆ ಕಾಲೇಜಿಗೆ ಹೋಗಿದ್ದೆ ಪ್ರಾಂಶುಪಾಲರ ಬೆನ್ನ ಹಿಂದಿನ ಅದೇ ಗೋಡೆಯ ಮೇಲೆ ಅದೇ ಗಾಂಧಿ ಫೋಟೋ ಪಕ್ಕ ಅಂಬೇಡ್ಕರ್ ಫೋಟೋ ಬಂದು ಬಿಟ್ಟಿದೆ! ಅಲ್ಲಿದ್ದ ಅಟೆಂಡರ್‌ಗೆ ಹೊರಗಿದ್ದ ಫೋಟೋ ಒಳಗೆ ಬಂದ ಮರ್ಮ ಏನು ಅಂತ ಕೇಳಿದೆ. ಅದಕ್ಕೆ ಅವರು "ಅಂಬೇಡ್ಕರ್ ಜಾತಿಯ ಪ್ರಾಂಶುಪಾಲರು ಬಂದಾಗ ಫೋಟೋ ಒಳಗೆ ಬಂತು ಮೇಡಂ ಅಂತ ಹೇಳಿದರು".

ಅದೇ ಜಾಗದಲ್ಲಿ ಈಗ ಎರಡೂ ಫೋಟೋ ಬ್ಯಾಲೆನ್ಸ್ ಆಗಿದೆ ಆಗ ನ್ಯಾಕ್ ಕೆಲಸ ಮಾಡಿದ್ದ ಅಧ್ಯಾಪಕರು ಇನ್ನೂ ಅದೇ ಕಾಲೇಜಿನಲ್ಲಿದ್ದಾರೆ ಮುಂದೆ ಬೇರೆ ಜಾತಿಯ ಪ್ರಾಂಶುಪಾಲರು ಬಂದ್ರೆ....?

ಆದಿಮ ಕಾವ್ಯ



ಗೊತ್ತು ಗೊತ್ತೆಂದು ಹೊತ್ತು ತಿರುಗದಿರು
ಗೊತ್ತೆಂಬ ಮತ್ತು ನಿನ್ನ ನೆತ್ತಿಗತ್ತಿದೊಡೆ
ಹುಳು ತುಂಬಿದ ಹುತ್ತಾಗುವುದು ನಿನ್ನ ಚಿತ್ತ
ಕರಿಗತ್ತಲಲ್ಲಿ ಬರಿ ಬೆತ್ತಲೆಯ ಮಾಡಿ
ಕಡುಬೆತ್ತದಿಂದವನು ಬಡಿಬಡಿದು ಕೇಳಿಹನು
ಅತ್ತಾಗ ನೆನಪಾಯ್ತು ಮತ್ನಾಗ ಮಾಡಿದ್ದು ....?

ಮನದ ಬಯಲೊಳಗೊಂದು ಕನಸ ತೋಟವ ಮಾಡಿ
ಒಡಲ ಕಡಲ ನೀರನೆರೆದು ಉಸಿರ ತಣಿವನದಕೆ ಬೆಸೆದು
ಕೆಸರು ಮುಡಿದ ಹಸಿರು ತಾನು ಬಸಿರ ಒಡೆಯುವ ವೇಳೆಗೆ
ಬದುಕ ಬೇಸಿಗೆ ಬಂದು ಕಸಿದು ಹೋದೊಡೆ
ಬಸಿದ ಉಸಿರದು ಕುಸಿದು ಕೂರಲು
ಉಳಿದುದಲ್ಲಿ ಬಿರಿದ ಬರಿಯ ಬರದ ಉರಿಯ ಕರಿಯ ಛಾಯೆ
....

⌘ ಡಿ.ಪಿ.ಅನಿಲ್ ಕುಮಾರ್



ಜಂಗಮ ಕಲಾವಿದೆ

⌘ ಬೇಲೂರು ರಘುನಂದನ್

ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕಿನ ವಿವಿಧ ಮಗ್ಗಲುಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಉಮಾಶ್ರೀ ಒಂದು ಐಕಾನ್ ಎಂಬುದಂತೂ ಸತ್ಯ. ಬದುಕನ್ನು ಅನ್ವೇಷಕ ದಾರಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಅನುಭವವನ್ನು ಅವರು ದುಡಿಸಿಕೊಂಡಿದ್ದಾರೆ. ಅವರ ಭಾವ ಅನುಭಾವದ ನೆಲೆಗಳು ಕನ್ನಡ ಕಲಾ ಲೋಕಕ್ಕೆ, ಮನುಷ್ಯ ಪ್ರೀತಿಯ ಕಾಳಜಿಗಳು ಸಾಮಾಜಿಕ ನೆಲಯಲ್ಲಿ ರಾಜಕೀಯ ಪ್ರಪಂಚಕ್ಕೆ, ಅದಕ್ಕೆಲ್ಲಾ ಮಿಗಿಲಾಗಿ ಯಶಸ್ವೀ ಬದುಕಿಗೆ ಒಬ್ಬ ಅಲ್ಪಸಂಖ್ಯಾತ ಮಹಿಳೆ ಮುನ್ನುಗ್ಗುವ ಧೋರಣೆ ಬದುಕನ್ನು, ಸಮಾಜವನ್ನು ಗಟ್ಟಿಗೊಳಿಸುವ ಕ್ರಿಯೆಗೆ ಗಟ್ಟಿ ಅಡಿಪಾಯವಂತೂ ಆಗಿದೆ

ಸೃಜನಶೀಲತೆ ಮತ್ತು ಅಭದ್ರತೆ ಒಂದರ ಜೀವ ಇನ್ನೊಂದರಲ್ಲಿ ಇರುವಂತೆ ಪರಸ್ಪರ ಪೂರಕವಾದವು. ಯಾರ ಬದುಕಲ್ಲಿ ಅಭದ್ರತೆ ಇರುವುದೋ ಅವರ ಮನಸ್ಸು ಸೃಜನವಾಗಿದ್ದರೆ ಬದುಕಿನ ಕ್ರಿಯಾಶೀಲ ಅನಾವರಣ ಸಾಧ್ಯ ಎಂಬುದಂತೂ ಸತ್ಯ. ಅಂದರೆ ನಾನು ಹೇಳ ಬಯಸುತ್ತಿರುವ ಮುಖ್ಯ ವಸ್ತು ವಿಷಯುಗಳೆರಡು ಉಮಾಶ್ರೀ ಅವರನ್ನೇ ಎದುರು ನೋಡುತ್ತಿದೆ. ಉಮಾದೇವಿಯಿಂದ ಉಮಾಶ್ರೀ ಯಾಗುವ ತನಕ ಮತ್ತದು ಮುಂದುವರೆದು ಸದಾ ಭೂತ ಭವಿಷ್ಯತ್ತುಗಳ ನಡುವೆ ವರ್ತಮಾನವಾಗುವ ಪ್ರಕ್ರಿಯೆ ಬೆಸೆದುಕೊಂಡಿರುವುದು ಈ ಅಭದ್ರತೆ ಮತ್ತು ಸೃಜನಶೀಲತೆಗಳ ನಡುವೆಯೇ. ಅಭದ್ರತೆಯಿಂದ ಸೃಜನಗೊಂಡ ಮೇರು ನಟಿ ಅಂತಲೇ ಹೇಳಬಹುದಾದ ಉಮಾಶ್ರೀ ಒಬ್ಬ ಕಲಾವಿದೆ ಮಾತ್ರವಲ್ಲ. ಅವರು ಬದುಕಿನ ಅನ್ವೇಷಕಿಯೂ ಹೌದು.

ಕಲಾವಿದೆಯಾಗಿ ಮಾತ್ರ ಈಕೆ ನಿಲ್ಲದೇ ಸಾಹಿತ್ಯ, ಸಮಾಜ, ರಂಗಭೂಮಿ, ಸಿನೆಮಾ, ಕುಟುಂಬ, ರಾಜಕೀಯ..... ಹೀಗೆ ಹತ್ತು ಹಲವಾರು ಅಂತರಶಿಸ್ತುಗಳಲ್ಲಿ ನಡೆಸುವ ಹುಡುಕಾಟ ಮತ್ತು ಅದರ ಜೊತೆ ಅನುಸಂದಾನ ಮಾಡಿಕೊಳ್ಳುವ ಪರಿ, ಅದಕ್ಕೆ ಬೇಕಾದ ತಯಾರಿ, ಕೊನೆಗೆ ಅಸ್ಥಿತ್ವಕ್ಕೆ ತರುವುದು, ನಂತರ ಕಂಡುಕೊಂಡ ದಾರಿಯನ್ನು ಪಾಲಿಸುವುದು, ಪಾಲಿಸುವಂತೆ ನೋಡಿಕೊಳ್ಳುವುದು ಉಮಾಶ್ರೀಯವರನ್ನು ಅರ್ಥೈಸಿಕೊಳ್ಳಲು ಬೇಕಾದ ಒಳ್ಳೆಯ ಸರಕು. ಇವು ಕಾಡುವುದು, ಕೆದಕುವುದು ವ್ಯಕ್ತಿ ಸಮಷ್ಟಿಯಾಗುವಲ್ಲಿ ನಿರ್ವಹಿಸುವ ಭಾವ ಪಾತ್ರಗಳು ಯಾವುದೇ ರಾಜಿ ಮಾಡಿಕೊಳ್ಳದೇ ಗುರಿಯನ್ನು ದುಡಿಸಿಕೊಳ್ಳುವುದು. ಈ ಕ್ರಿಯೆ ಮತ್ತು ಪ್ರಕ್ರಿಯೆ ಕಲಾವಿದೆಯಾಗಿ ಉಮಾಶ್ರೀಯವರನ್ನು ನೋಡಿದಾಗ ಆಶ್ಚರ್ಯದ ಜೊತೆಗೆ ಅನುಸರಣೀಯ ಎನ್ನುವಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ದಿ ಅದರ್ ಐ

ಯಾವುದೇ ಕಾರ್ಯಕ್ಷೇತ್ರವನ್ನು ತೆಗೆದುಕೊಂಡರೂ ಅದಃ ಸಂಪೂರ್ಣ ನ್ಯಾಯವನ್ನು ಒದಗಿಸುವುದು ಉಮಾಶ್ರೀಯವಃ ಬಹುಮುಖ್ಯ ಗುಣ. ಬುದ್ಧಿ, ದೇಹ, ಮನಸ್ಸು ಈ ಮೂರನ್ನೂ ಆರೋಗ್ಯಪೂರ್ಣವಾಗಿ ದುಡಿಸಿಕೊಂಡು ಹಿಡಿದ ಕಾರ್ಯಃ ಅರ್ಥವನ್ನು ತರುವುದು ಇವರ ನಿಷ್ಠತೆಯನ್ನು ತೋರುತ್ತದೆ ಬಹುಶಃ ಈ ಒಂದು ಉದಾಹರಣೆ ಅವರ ಕಾರ್ಯದಕ್ಷಃ 'ಯನ್ನು ಅರ್ಥವಿಸಿಕೊಳ್ಳಲು ಸಹಕಾರಿಯಾಗಬಹುದು. ಉತ್ತ ಕರ್ನಾಟಕ ತೇರದಾಳ ಮತಕ್ಷೇತ್ರ ಈಗ ಅವರ ರಾಜಕೀಯ ರಂಗದ ಕರ್ಮಭೂಮಿ. ವಾಸ ಇರುವುದು ಬೆಂಗಳೂರಿನಲ್ಲಿ ಹಿಂದಿನ ಚುನಾವಣೆಯಲ್ಲಿ ಕೆಲ ಕಾರಣಗಳಿಂದ ಸೋತ ನಂತರ ಕೆಲಸಕ್ಕೆ ಬೆನ್ನು ಮಾಡಿ ಬರಲಿಲ್ಲ. ಅದಕ್ಕೆ ಬದಲಾಗಿ ಅಲ್ಲೇ ಮನೆ ಮಾಡಿಕೊಂಡು ಇದ್ದು, ಈಗ ಆ ಊರಿನವರೇ ಆಗಿದ್ದಾರೆ. ಬೆಂಗಳೂರಿಗೆ ಆಗಾಗ ಬಂದು ಹೋಗುವ ಅತಿಥಿಯಾಗಿದ್ದಾರೆ. ಚಿತ್ರೀಕರಣವೋ, ನಾಟಕವೋ, ದಾರವಾಹಿಯೋ ಏನಾದರೂ ಇದ್ದಲ್ಲಿ ಅಲ್ಲಿಂದ ರೈಲಿನಲ್ಲಿ ರಾತ್ರಿ ಹೊರಟು ಬೆಳಿಗ್ಗೆ ಇಲ್ಲಿ ತಲುಪಿ, ಕೆಲಸ ಅಚ್ಚುಕಟ್ಟಾಗಿ ಮುಗಿಸಿ ಮತ್ತೆ ರಾತ್ರಿ ರೈಲಿನ ಪ್ರಯಾಣ ಮಾಡಿ ತೇರದಾಳದಲ್ಲಿ ಹಾಜರಾಗಿರುತ್ತಾರೆ. ಇದನ್ನು ಗಮನಿಸಿದಾಗ ಉಸಿರು ಬಿಡುವಂತೆ ಅನಿಸಿದರೂ ಇದು ಸತ್ಯ. ಇದನ್ನು ನೋಡುತ್ತಿದ್ದರೆ ನನಗೆ ಆಯ್ದಕ್ಕಿ ಲಕ್ಕಮ್ಮ ಕಾರ್ಯನಿಷ್ಠತೆಯ ಪರಿ ನೆನಪಿಗೆ ಬರುತ್ತದೆ. ಉಮಾಶ್ರೀಯವರೂ ಕೂಡ ಈ ಶತಮಾನದ 'ಜಂಗಮಗಿತ್ತಿ' ಎಂದರೆ ಯಾವ ತಪ್ಪೂ ಇಲ್ಲ. ಅತಿಶಯೋಕ್ತಿಯೂ ಅಲ್ಲ! ಬೆಂಗಳೂರಿನಲ್ಲಿ ಮನೆ, ಮಗ, ಸೊಸೆ, ಮುದ್ದಿನ ಮೊಮ್ಮಗಳು, ಸ್ನೇಹಿತರು, ಹಿತೈಷಿಗಳು ಎಲ್ಲರೂ ಇದ್ದರೂ ಇವರಿಗೆ ಅವರ ಮೇಲೆ ಅಪಾರವಾದ ಪ್ರೀತಿ ಇದ್ದರೂ ತನ್ನ ಕೆಲಸವನ್ನು ಸಮಾಜಮುಖಿಯಾಗಿಸುವುದರತ್ತ ಗಮನ ಹರಿಸುತ್ತಾರೆಯೇ ಹೊರತು ಮನೆ ಕುಟುಂಬ ಇತ್ಯಾದಿಗಳ ಮೇಲಲ್ಲ. ಇದೊಂದು ರೀತಿ ಬಂಧನಗಳನ್ನು ಕಳಚಿ ಮತ್ತೆ ಬಂಧನಗಳಿಗೆ ಸಿಲುಕುವ ಪರಿ. ಸಮಾಜವನ್ನು ಬದುಕನ್ನು ಕಟ್ಟುವ ಕ್ರಿಯೆಗೆ ಜಗತ್ತಿನ ಎಲ್ಲಾ ಪ್ರತಿಭಾಚೇತನಗಳು ಕಂಡುಕೊಂಡದ್ದು ಇದನ್ನೇ.

ಅನುಭವ ಜನ್ಯ ಸಾಹಿತ್ಯ ಹೇಗೆ ಯಾವ ಕಾಲಕ್ಕೋ ಅಸ್ತಿತ್ವದಲ್ಲಿರುತ್ತದೆಯೋ ಅನುಭವ ತುಂಬಿದ ಬದುಕು ಕೂಡ ಅರ್ಥಪೂರ್ಣವೇ ಮತ್ತು ಯಾವ ಕಾಲಕ್ಕೂ ಪ್ರಭಾವ ಬೀರುವಂತದ್ದೇ. ವಿವಿದ ಅನುಭವಗಳ ಜೊತೆಗೆ ದುಡಿಯುವ ಉತ್ಸಾಹ, ಜೀವನ ಪ್ರೀತಿ, ಸಮಾಜದ ಬಗೆಗಿನ ಕಾಳಜಿ, ಓದು, ಇವೆಲ್ಲವೂ ಇಂದು ನಮ್ಮ ಮುಂದೆ ಉಮಾಶ್ರೀಯವರ ಯಶಸ್ಸಿನ ಪುಟಗಳನ್ನು ಓದುವಂತೆ ಮಾಡಿದೆ. ತಾದಾತ್ಮ್ಯ ತಲ್ಲೀನವಾಗುವುದರಿಂದಲೇ ಇದು ಸಾಧ್ಯ. ಹಿಂದೊಮ್ಮೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ದೆಹಲಿ ಎಡಿಷನ್‌ನಲ್ಲಿ, ಉಮಾಶ್ರೀಯವರ ಒಡಲಾಳದ ಸಾಕವ್ವನ ಪಾತ್ರವನ್ನು ನೋಡಿ ರಂಗಭೂಮಿಗೆ ಅಂತಲೇ ಏನಾದರೂ ಆಸ್ಕರ್ ಬಹುಮಾನ ಇದ್ದಿದ್ದರೆ ಅದು ಉಮಾಶ್ರೀಯವರಿಗೆ ಖಂಡಿತವಾಗಿ ದಕ್ಕುತ್ತಿತ್ತು ಎಂದು ಬರೆದಿತ್ತು. ಈ ಗ್ರಹಿಕೆ ಉಮಾಶ್ರೀ ಕಲಾವಿದೆಯಾಗಿ ಕಲಾಕೃತಿಯನ್ನು ಆಗಿಸುವಿಕೆಯ ದಟ್ಟ ನೆಲೆಗಳನ್ನು ನಾವು ಗಮನಿಸಬಹುದು. ಅಷ್ಟೇ ಅಲ್ಲ ಈ ಉದಾಹರಣೆ ಅವರ ಸಾಂಸ್ಕೃತಿಕ ಬದುಕಿನಲ್ಲಿ ಅತಿಮುಖ್ಯವಾದುದು ಎನ್ನಬಹುದು.

ಮೊದಲು ಅವರ ಮನೆಗೆ ಭೇಟಿ ನೀಡಿದಾಗ ನನಗೆ ಅವರ ಮನೆಯ ಸೌಂದರ್ಯವಾಗಲೀ, ಅಚ್ಚುಕಟ್ಟಾಗಲೀ ಗಮನ ಸೆಳೆಯಲಿಲ್ಲ. ಅವರ ಕೋಣೆಯಲ್ಲಿ ಸಾಲಾಗಿ ಜೋಡಿಸಿಟ್ಟ ಕನ್ನಡದ ತ್ರಿಪದಿ, ವಚನ ಸಾಹಿತ್ಯ, ದಾಸ ಸಾಹಿತ್ಯ, ಕುವೆಂಪು, ಬೇಂದ್ರೆ, ವೈದೇಹಿ ಅಷ್ಟೇ ಅಲ್ಲ ರಾಜಕೀಯ ಪ್ರಕಾರದ ಕೆಲ ಮೌಲಿಕ ಕೃತಿಗಳನ್ನು ನೋಡಿ ಚಕಿತನಾದೆ. ಕಲಾವಿದೆಯಾಗಿ ಮಾತ್ರವಲ್ಲದೇ ಒಬ್ಬ ಸಹೃದಯಿ ಓದುಗಳಾಗಿ ಆಕೆ ಕಂಡು ಬಂದರು. ಅವರೊಂದಿಗೆ ಚರ್ಚೆ ಮಾಡುವ ಸಂದರ್ಭದಲ್ಲಿ ಒಬ್ಬ ವಿಮರ್ಷಕಿಯಾಗಿ ಆಕೆಯನ್ನು ನೋಡಬಹುದು. ಒಮ್ಮೆ ಸಾಹಿತ್ಯದ ವೇದಿಕೆಯಲ್ಲಿ ಜಾನಪದ ಸಾಹಿತ್ಯವನ್ನು ಕುರಿತಾದ ಅವರ ವಿಚಾರಮಂಡಿಸಿದ ರೀತಿಯನ್ನು ನೋಡಿ ಅವರ ಚರ್ಚೆಯ ವಸ್ತು ವಿಷಯವನ್ನು ಗಮನಿಸಿದಾಗ ಯಾವ ವಿಶ್ವವಿದ್ಯಾಲಯದ ಉಪನ್ಯಾಸಕರಿಗೂ ಅವರು ಕಡಿಮೆಯಿಲ್ಲ ಎನಿಸಿತು. ಇದೆಲ್ಲಾ ಸಾಧ್ಯವಾಗಿದ್ದು ಅವರ ಅನುಭವ, ಓದಿನ ಪ್ರೀತಿ, ಮೌಲ್ಯಗಳ ಬಗೆಗಿನ ಧೋರಣೆ, ಬದುಕಿನ ಬಗೆಗಿನ ಆಸಕ್ತಿಯಿಂದಲೇ. ಅವರ ಓದಿನ ಛಲ ಕೂಡ ಮೆಚ್ಚುವಂತದ್ದೇ. ಒಬ್ಬ ನೇರ ವಿದ್ಯಾರ್ಥಿನಿಯಂತೆ ಒಂದು ತಿಂಗಳು ತನ್ನೆಲ್ಲಾ ಕೆಲಸ ಕಾರ್ಯಗಳಿಗೆ ರಜೆ ಘೋಷಿಸಿ ಒಂದೆಡೆ ಕುಳಿತು ಓದಿ, ಬರೆದು, ಪುನರಾವರ್ತಿಸಿ, ಪರಾಮರ್ಷಿಸಿ, ಚರ್ಚಿಸಿ ರಾಜ್ಯಶಾಸ್ತ್ರದಲ್ಲಿ ಪರೀಕ್ಷೆ ಬರೆದು ಯಶಸ್ವಿಯಾದರು. ಈಗ ಅವರು ಎಂ.ಎ. ಪದವೀಧರೆ. ನನ್ನ ಮೊದಲ ಕೃತಿ ಶ್ವೇತಪ್ರಿಯ ಕವನ ಸಂಕಲನಕ್ಕೆ ಅವರು ಬರೆದ ಬೆನ್ನುಡಿಯಿಂದ ಆವರು ಒಬ್ಬ ಕಲಾವಿದೆ, ರಾಜಕಾರಣಿ ಮಾತ್ರವಲ್ಲ ಒಬ್ಬ ಒಳ್ಳೆಯ ಚಿಂತಕಿ ಎಂದು ಕನ್ನಡ ಸಾಹಿತ್ಯದ ಬುದ್ಧಿ, ಭಾವಲೋಕ ಅರಿಯಲು ಸಾಧ್ಯವಾಯಿತು.

ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕಿನ ವಿವಿಧ ಮಗ್ಗಲುಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಉಮಾಶ್ರೀ ಒಂದು ಐಕಾನ್ ಎಂಬುದಂತೂ ಸರಿಸತ್ಯ. ಬದುಕನ್ನು ಸಂಶೋಧನಾತ್ಮಕವಾಗಿ ಮತ್ತು ಅನ್ವೇಷಕ ದಾರಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಅನುಭವವನ್ನು ಅವರು ದುಡಿಸಿಕೊಂಡಿದ್ದಾರೆ. ಅವರ ಭಾವ ಅನುಭಾವದ ನೆಲೆಗಳು ಕನ್ನಡ ಕಲಾ ಲೋಕಕ್ಕೆ, ಮನುಷ್ಯ ಪ್ರೀತಿಯ ಕಾಳಜಿಗಳು ಸಾಮಾಜಿಕ ನೆಲಯಲ್ಲಿ ರಾಜಕೀಯ ಪ್ರಪಂಚಕ್ಕೆ, ಅದಕ್ಕೆಲ್ಲಾ ಮಿಗಿಲಾಗಿ ಯಶಸ್ವೀ ಬದುಕಿಗೆ ಒಬ್ಬ ಅಲ್ಪಸಂಖ್ಯಾತ ಮಹಿಳೆ ಮುನ್ನುಗ್ಗುವ ಜಲಪಾತೀಯ ಧೋರಣೆ ಬದುಕನ್ನು, ಸಮಾಜವನ್ನು ಗಟ್ಟಿಗೊಳಿಸುವ ಕ್ರಿಯೆಗೆ ಗಟ್ಟಿ ಅಡಿಪಾಯವಂತೂ ಆಗಿದೆ ಎಂದು ಹೇಳಬಹುದು.



ಇದು ನಮ್ಮ ಹೆಗಲ ಜೋಳಿಗೆ. ನಾವು. ಶಿವಗಂಗೆ ಜಿಂಕೆರಾಮಯ್ಯ ಜೀವತಾಣದ ಒಕ್ಕಲು. ಜಿಂಕೆ ರಾಮಯ್ಯನೂ ನಮ್ಮಂತೆ ಜೋಳಿಗೆ ಒಡ್ಡಿತಂದು, ಬೀಜ ನೆಟ್ಟು ಬೆಳಸಿದ ಮರದ ನೆರಳಲ್ಲಿ ಗೂಡು ಕಟ್ಟಿಕೊಂಡಿರುವವರು. ಭಿಕ್ಷಾಪಾತ್ರೆ ಒಡ್ಡಿದಾಗ ತುತ್ತು ಅನ್ನ ನೀಡುತ್ತಿದ್ದ ಕಾಲವೊಂದಿತ್ತು. ಎದ್ದ ಬಿರುಗಾಳಿಗಳ ಕಾಲುಧೂಳು ಕಣ್ಣುತುಂಬಿ ಟಾನೆಡಾ ಸಾಂಟೋಕರ ಈ ಹಾಯ್ಕುವಿನಂತೆ ನಮ್ಮ ಸ್ಥಿತಿ ಈಗ.


ನನ್ನ ಭಿಕ್ಷಾಪಾತ್ರೆ
ಸ್ವೀಕರಿಸುತ್ತಿದೆ
ಉದುರಿದ ಎಲೆಗಳು

ಕಾಲ ನಮ್ಮನ್ನು ತಂದು ಇಲ್ಲಿ ನಿಲ್ಲಿಸಿದೆ. ಭಿಕ್ಷಾಪಾತ್ರೆ ತುಂಬದಾದಾಗ 'ಹುಂಡಿ' ಹಿಡಿದೆವು. ತುಂಬುವಷ್ಟು ಕಾಲವೂ 'ಹುಣ್ಣಿಮೆ ಹಾಡು'ಗಳ ಬೆಳದಿಂಗಳು ಬೊಗಸೆ ಬೊಗಸೆಗೆ.... ಈಗ ಜೋಳಿಗೆ ಹೆಗಲೇರಿಸಿ ಹೊರಟಿದ್ದೇವೆ; ದಿಕ್ಕು ದಿಕ್ಕಿಗೆ. ಕರುಳ ಕರಾವಳಿಗೆ. 'ಗಾರ್ಡನಿಂಗ್ ಕರ್ನಾಟಕ' (ಕರ್ನಾಟಕಕ್ಕೆ ಒಂದು ಹೂಹಾರ)ದ ಭಾಗವಾಗಿ ನಿಮ್ಮ ಮನೆಯಂಗಳಕ್ಕೂ ಬರುವ ಆಸೆ.. ಆದರೆ... ಕಾಲ್ನಡಿಗೆಗೂ ಕೋಳ ಬಿದ್ದಿರುವ ಹೊತ್ತು. ನಿಮ್ಮ ನೆರವಿಗಾಗಿ ಇದೋ ಇಲ್ಲಿ ಒಡ್ಡಿದ್ದೇವೆ ನಮ್ಮ ಜೋಳಿಗೆಯನ್ನು. ನೀವು ಅಕ್ಕರೆಯಿಂದ ಏನನ್ನಾದರೂ ನೀಡಬಹುದು. ಹಳೆಯ ಉಪಯುಕ್ತ ಗ್ರಂಥಗಳು, ಬಳಸಲಾಗದೆ, ಬಿಸಾಡಲಾಗದೆ ಹೋಗಿರುವ ವಸ್ತುಗಳನ್ನೂ ಒಳಗೊಂಡಂತೆ ದವಸ, ಧಾನ್ಯ, ಅಥವಾ ಇನ್ನೇನಾದರು ಕೊಡುವಂತದ್ದು... ಹಣವನ್ನಷ್ಟೇ ಕೊಡಲು ಸಾಧ್ಯವಾಗುವವರು... ಹೀಗೆ ಸಂಪರ್ಕಿಸುವ ಕೃಪೆ ಮಾಡಿದಲ್ಲಿ ನಿಮ್ಮಿಂದ ಸ್ವೀಕರಿಸುವ ದಾರಿ ಹುಡುಕುತ್ತೇವೆ. ಅಲ್ಲಿಯವರೆಗೂ ಸಾಧ್ಯವಾಗುವುದಾದರೆ ಇದು ನಮ್ಮ ಬ್ಯಾಂಕ್ ಖಾತೆ ಸಂಖ್ಯೆ ಎಸ್.ಬಿ.1175101034 147, ಕೆನರಾ ಬ್ಯಾಂಕ್, ಸಂಪಂಗಿರಾಮನಗರ ಶಾಖೆ, ಬೆಂಗಳೂರು

ಇದು ನಮ್ಮ ಸಂಪರ್ಕ ವಿಳಾಸ...

ಆದಿಮ ಲಿವಿಂಗ್ ಟೈಮ್ಸ್

ಉಸ್ಮಾನ್ ತಾತನ ದರ್ಗಾದ ಎದರು.
ಪಾಪರಾಜನಹಳ್ಳಿ (ತೇರಹಳ್ಳಿ ಬೆಟ್ಟ), ಮಡೇರಹಳ್ಳಿ
ಅಂಚೆ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ
563101 9972193392
email:
adimalivingschool@gmail.com
and
adimaramaiah@gmail.com



ಆದಿಮ ಲಿವಿಂಗ್ ಟೈಮ್ಸ್

Book Post

Editor, Publisher, Printer : Kotiganahalli Ramaiah, Address:1007, Sidhartha layout, channasandra Raod, Kadugodi.
Bangalore-67. Phone No : 9972193392, email: adimalivingschool@gmail.com,
www.adimalivingtimes.blogspot.com